ಜನಶಕ್ತಿ

Blog :janashakthi.wordpress.com e-mail : js_weekly@yahoo.com

ಕನ್ನಡ ವಾರಪತ್ರಿಕೆ

ಸಂಪುಟ 7 ಸಂಚಿಕೆ 45
ನವೆಂಬರ್ 10, 2013 ಪುಟ 16 ರೂ. 10/-





ಕೋಮುವಾದದ ವಿರುದ್ಧ ಜನತೆಗೆ ಐಕ್ಯತೆಯ ಸ್ಪಷ್ಟ ಸಂದೇಶ

ನಾಡಿನ ಜನತೆಗೆ, ಜನಶಕ್ತಿ ಓದುಗರಿಗೆ, ಏಜೆಂಟರಿಗೆ, ಜಾಹೀರಾತುದಾರರಿಗೆ ರಾಜ್ಯೋತ್ಸವ ಶುಭಾಶಯಗಳು









ಮುಸ್ಲಿಂಮರಿಗೆ ಮೀಸಲಾತಿ ಅಗತ್ಯ – ಪ್ರಕಾಶ್‌ಕಾರಾಟ್

ಸೌಜನ್ಯ ಪ್ರಕರಣ : ಸಿಐಡಿ ತನಿಖಾ ವರದಿಗೆ ತಿರಸ್ಕಾರ ಸಿಬಿಐ ತನಿಖೆಗೆ ಆಗ್ರಹಿಸಿ

ಕಣ್ಮರೆಯಾಗುತ್ತಿರುವ ಕಲ್ಪವೃಕ್ಷ

ಗಗನದಲ್ಲಿ 36 ವರ್ಷಗಳ ಕಾಲ 1900 ಕೋಟಿ ಕಿ.ಮೀ ದೂರ ಪಯಣ: ಗುರು ಮತ್ತು ಶನಿ ಗ್ರಹಗಳನ್ನು ದಾಟಿ ಪಯಣಿಸುತ್ತಿರುವ ವಾಯೇಜರ್ ಗಗನ ನೌಕೆಗಳು!





ಭೂಮಿಯಿಂದ ನಾವು ಎಷ್ಟು ದೂರ ಆಗಸದಾಚೆಗೆ ಪಯಣಿಸಬಹುದು? ಭೂಮಿಯಿಂದ ಗಗನ ನೌಕೆಗಳನ್ನು ನಾವು ಮಂಗಳ ಗ್ರಹಕ್ಕೂ ಕಳುಹಿಸಿ ಅಲ್ಲಿಯ ಚಿತ್ರಗಳನ್ನೆಲ್ಲ ನೋಡುತ್ತಿದ್ದೇವೆ. ಇನ್ನೂ ಮುಂದಕ್ಕೆ ಹೋಗಿ ನಮ್ಮ ಸೌರವ್ಯೂಹವನ್ನು ತೊರೆದು ನಾವು ಆಚೆಗೆ ಪಯಣಿಸಬಹುದೇ? ಸೌರಮಾರುತಗಳ ಪ್ರಭಾವಳಿ ಎಲ್ಲಿಯವರೆಗಿದೆ? ನಮ್ಮ ಸೌರವ್ಯೂಹದ ಆಚೆಗೆ, ನಮ್ಮ ಗೆಲಾಕ್ಸಿಯೊಳಗಿನ ಚಿತ್ರಣ ಹೇಗಿರಬಹುದು? ಇಂತಹ ಇನ್ನೂ ಹಲವು ಪ್ರಶ್ನೆಗಳಿಗೆ ಉತ್ತರ ನೀಡುವ ನಿಟ್ಟಿನಲ್ಲಿ ಅಮೇರಿಕಾದ ಗಗನ ನೌಕೆಗಳಾದ 'ವಾಯೇಜರ್ 1 & ವಾಯೇಜರ್ 2' ಸಹಾಯಕವಾಗುತ್ತಿವೆ. ಆರಂಭದಲ್ಲಿ ಗುರು ಮತ್ತು ಶನಿ ಗ್ರಹಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಉಡಾವಣೆಯಾದ ಈ ನೌಕೆಗಳು ಇದೀಗ ಹಿಂದೆಂದೂ ಕ್ರಮಿಸಿರದ ಅನತಿ ದೂರದ ಗಗನಪ್ರದೇಶಗಳನ್ನು ಶೋಧಿಸುತ್ತಾ ಮಾಹಿತಿ ರವಾನಿಸುತ್ತಿವೆ. ಹೌದು! ಕಳೆದ ವಾರವಷ್ಟೇ ಅವು ಅಂತರನಕ್ಷತ್ರ ಪ್ರದೇಶವನ್ನು ತಲುಪಿವೆ.

ನಮ್ಮ ಸೌರವ್ಯೂಹ ಮತ್ತು ನಕ್ಷತ್ರ ಸಮೂಹ:

ನಮ್ಮ ಸೌರವ್ಯೂಹವು 'ಕ್ಷೀರಪಥ' ಎಂದು ಕರೆಯಲಾಗುವ ಗೆಲಾಕ್ಸಿ (ನಕ್ಷತ್ರ ಸಮೂಹ)




ಯಲ್ಲಿದೆ. ಈ ಗೆಲಾಕ್ಸಿಯಲ್ಲಿ ನಮ್ಮ ಸೂರ್ಯನ ರೀತಿಯ ಸುಮಾರು 10,000 ದಿಂದ 40,000 ಗಳಷ್ಟು ನಕ್ಷತ್ರಗಳಿವೆ ಎಂಬ ಅಂದಾಜಿದೆ. ಈ ನಕ್ಷತ್ರಗಳಿಗೆಲ್ಲ ನಮ್ಮ ಸೌರವ್ಯೂಹದ ತರಹ ಹಲವಾರು ಗ್ರಹಗಳಿವೆ. ನಮ್ಮ ವಿಶ್ವ ಅಥವಾ ಬ್ರಹ್ಮಾಂಡದಲ್ಲಿ ಎಷ್ಟು ನಕ್ಷತ್ರ ಸಮೂಹಗಳಿವೆ? ವಿಶ್ವ ಎಷ್ಟು ವಿಸ್ತಾರವಿದೆ? ಎಂದು ಹೇಳಲಾಗದು. ನಮ್ಮ ನಕ್ಷತ್ರವಾದ ಸೂರ್ಯ ಮತ್ತು ಸೂರ್ಯನಿಗೆ ಹತ್ತಿರುವಿರುವ ಇತರ ನಕ್ಷತ್ರಗಳ ನಡುವಿನ ಜಾಗವನ್ನು 'ಅಂತರನಕ್ಷತ್ರ ಪ್ರದೇಶ' ಎನ್ನುತ್ತಾರೆ. ಈ ಭಾಗ ಪ್ರಾಸ್ಮಾ ಮತ್ತು ಅಯಾನೀಕೃತ ಅನಿಲಗಳಿಂದ ಕೂಡಿದ್ದು, ಇವುಗಳನ್ನು ದೈತ್ಯ ನಕ್ಷತ್ರಗಳು ಮಿಲಿಯಾಂತರ ವರ್ಷಗಳ ಹಿಂದೆ ಇಲ್ಲಿಗೆ ತೂರಿವೆ, ಅಥವಾ ಮಿಲಿಯಾಂತರ ವರ್ಷಗಳ ಹಿಂದೆ ನಕ್ಷತ್ರಗಳ ಸಾವಿನಿಂದ ಇವು ಅಂತರನಕ್ಷತ್ರದಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿವೆ ಎನ್ನಲಾಗಿದೆ.

ನಮ್ಮ ಸೌರವ್ಯೂಹ ಅಂದರೆ ಸೂರ್ಯ ಮತ್ತು ಅದರ ಸುತ್ತಲಿನ ಎಂಟು ಗ್ರಹಗಳವರೆಗೆ ಮಾತ್ರ ಅಂದುಕೊಂಡರೂ ಇದರಾಚೆಗಿರುವ ಊರ್ಟ್ ಮೋಡದವರೆಗೂ ಸೂರ್ಯನ ಗುರುತ್ವವೇ ಪ್ರಭಾವಶಾಲಿ. ಊರ್ಟ್ ಮೋಡದಾಚೆಗಷ್ಟೆ ಸೂರ್ಯನ ಗುರುತ್ವ ಕ್ಷೀಣಗೊಂಡು ಇತರೆ ನಕ್ಷತ್ರಗಳ ಗುರುತ್ವ ಪ್ರಭಾವಶಾಲಿಯಾಗುತ್ತದೆ. ಊರ್ಟ್ ಮೋಡ ಅತಿ ವಿಸ್ತಾರ ಪ್ರದೇಶವಾಗಿದ್ದು, ಸೂರ್ಯನಿಂದ 15,000 ಕೋಟಿ ಕಿ.ಮೀ ದೂರದಲ್ಲಿ ಆರಂಭವಾದರೆ ಸುಮಾರು 15 ಲಕ್ಷ ಕೋಟಿ ಕಿ.ಮೀ ವರೆಗೂ ಚಾಚಿದೆ.

ವಾಯೇಜರ್ ಗಗನನೌಕೆಗಳ ಪಯಣ:


1977ರಲ್ಲಿ ಅಮೇರಿಕಾದ ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆ (ನಾಸಾ) 'ವಾಯೇಜರ್ 1' ಮತ್ತು ಅದರ ಅವಳಿ ಗಗನನೌಕೆ 'ವಾಯೇಜರ್ 2' ಹೆಸರಿನ ಎರಡು ಗಗನನೌಕೆಗಳನ್ನು 16 ದಿನಗಳ ಅಂತರದಲ್ಲಿ ಗಗನಕ್ಕೆ ಹಾರಿಬಿಟ್ಟಿತು. ಇವೆರಡೂ ಇನ್ನೂ ತಮ್ಮ ಪಯಣವನ್ನು ಮುಂದುವರೆಸುತ್ತಾ ಸೌರವ್ಯೂಹದಾಚೆಗಿನ ಮಾಹಿತಿಯನ್ನು ನಮಗೆ ರವಾನಿಸುತ್ತಲೇ ಇವೆ. ಇವೆರಡೂ ಗಗನನೌಕೆಗಳು ಮೊದಲಿಗೆ ಗುರು ಮತ್ತು ಶನಿ ಗ್ರಹವನ್ನು ಹಾದು ಹೋಗಿ ನಂತರದಲ್ಲಿ ಯುರೇನಸ್ ಮತ್ತು ನೆಪ್ಚೂನ್ ಗ್ರಹಗಳನ್ನು ಹಾದು ಮುಂದೆ ಹೋಗಿವೆ. ಇಲ್ಲಿಂದಾಚೆಗೆ ಅಂತರನಕ್ಷತ್ರ ಪ್ರದೇಶವಿದೆ. ಅಂತರನಕ್ಷತ್ರ ಪ್ರದೇಶದಲ್ಲಿರುವ ಒತ್ತಡದಿಂದಾಗಿ ಸೂರ್ಯನ ಸೌರಮಾರುತಗಳ ವೇಗ ಇಲ್ಲಿ ಕಡಿಮೆಯಾಗುತ್ತದೆ. ಇದನ್ನು ಹೀಲೀಯೋಪಾಸ್ ಪ್ರದೇಶ ಎಂದು ಕರೆಯುತ್ತಾರೆ.

ಸೂರ್ಯನಿಂದ ನಮ್ಮ ಭೂಮಿ ಸುಮಾರು 15 ಕೋಟಿ ಕಿಲೋ ಮೀಟರ್ ದೂರದಲ್ಲಿದೆ. ಇದೀಗ ಇವೆರಡೂ ಗಗನನೌಕೆಗಳು ಸೂರ್ಯನಿಂದ 1900 ಕೋಟಿ ಕಿಲೋ ಮೀಟರ್ ದೂರದಲ್ಲಿ ಪಯಣಿಸುತ್ತಿವೆ. ಅಷ್ಟು ದೂರದಲ್ಲಿರುವ ಗಗನನೌಕೆಗಳಿಂದ ನಮ್ಮ ಭೂಮಿಗೆ ಸಂದೇಶ ರವಾನಿಸಲು ಅವುಗಳಿಂದ ಹೊರಡುವ ಸಿಗ್ನಲ್‌ಗಳು ಬೆಳಕಿನ ವೇಗದಲ್ಲಿ ಚಲಿಸಿ ಭೂಮಿಯನ್ನು 17 ಘಂಟೆಗಳಲ್ಲಿ ತಲುಪುತ್ತವೆ!



ವಾಯೇಜರ್ ನೌಕೆಯಲ್ಲಿ ಏನೇನಿದೆ?

ಪ್ರತಿಯೊಂದು ವಾಯೇಜರ್ ಗಗನನೌಕೆಯೂ ಲಕ್ಷಾಂತರ ಸಂಖ್ಯೆಯ ಟ್ರಾನ್ಸಿಸ್ಟರ್ ಮತ್ತು ಕಂಪ್ಯೂಟರ್ ಪ್ರೋಗ್ರಾಂಗಳಿಂದಾಗಿದ್ದು, ಅತಿ ದೂರದ ಅಂತರಿಕ್ಷ ಪ್ರಯಾಣಕ್ಕೆ ವಿನ್ಯಾಸಗೊಳಿಸಲಾಗಿದೆ. ಇವುಗಳ



ವೇಗ ಘಂಟೆಗೆ 36,000 ಕಿ.ಮೀ. ಅಪಾಯ ಪರಿಸ್ಥಿತಿಯಲ್ಲಿ, ಕ್ಷಣಾರ್ಧದಲ್ಲಿ ತಂತಾನು ಸುರಕ್ಷಿತ ಸ್ಥಿತಿಗೆ ತಂದುಕೊಳ್ಳಬಲ್ಲದು. ಗುರು ಗ್ರಹದ ಬಳಿ ಸಾಗುವಾಗ ಭೂಮಿಗಿಂತ 1000 ಪಟ್ಟು ಹೆಚ್ಚು ವಿಕಿರಣ ಬೀಳುವುದರಿಂದ ರಕ್ಷಿಸಲು ವಿಕಿರಣ-ನಿಯಂತ್ರಿಸುವ ಕವಚ ಹೊಂದಿದೆ. ಇದರಲ್ಲಿರುವ ಟೆಲಿವಿಷನ್ ಕ್ಯಾಮೆರಾಗಳು ಎಷ್ಟು ಶಕ್ತಿಯುತವಾಗಿವೆ ಎಂದರೆ ಇವುಗಳಿಂದ 1 ಕಿ.ಮೀ ದೂರದಲ್ಲಿರು ದಿನಪತ್ರಿಕೆಯನ್ನು ನಾವು ಓದಬಹುದು ಮ್ಯಾಗ್ನೆಟೋಮೀಟರ್‌ಗಳು ಮತ್ತು ಇತ ಉಪಕರಣಗಳಿಂದ ಹಲವು ಮಾಹಿತಿಗ ದೊರೆಯುತ್ತಿವೆ. ಗಗನನೌಕೆಯ ತೂಕ 77 ಕೆಜಿ ಇದ್ದರೆ, ಅದರಲ್ಲಿ 105 ಕೆಜಿ ವೈಜ್ಞಾನಿ ಉಪಕರಣಗಳಿವೆ. ಈ ನೌಕೆಗೆ ಅಗತ್ಯವಿರು ವಿದ್ಯುಚ್ಛಕ್ತಿಯನ್ನು ಪರಮಾಣು ವಿಕಿರಣ ಆಧಾರಿತ 3 ರೇಡಿಯೋ ಐಸೋಟೋಪ ಉಷ್ಣವಿದ್ಯುತ್ ಜನರೇಟರ್‌ಗಳಿಂದ ಪೂರೈ ಕೆಯಾಗುತ್ತದೆ.

ವಾಯೇಜರ್‌ಗಳು ಇದುವರೆಗೆ ರವಾನಿಸಿರು ಮಾಹಿತಿ & ಚಿತ್ರಗಳು:

ಹಲವು ಗ್ರಹಗಳ ಅತಿ ಹತ್ತಿರ ಚಿತ್ರಗಳನ್ನು ರವಾನಿಸಿದೆ. ಗುರು ಗ್ರಹ ಉಪಗ್ರಹದ ಹೆಸರು 'ಲೊ' ಎಂದು. ಉಪಗ್ರಹದ ಮೇಲೆ ಆಸ್ಫೋಟಿಸುತ್ತಿರು ಜ್ವಾಲಾಮುಖಿಯಿಂದ ಗಂಧಕ ಮತ ಗಂಧಕದ ಡೈ ಆಕ್ಸೈಡ್‌ಗಳು ನಮ್ಮ ಮೌಂಟ ಎವರೆಸ್ಟ್ ಹಿಮಶಿಖರಕ್ಕಿಂತ 30 ಪಟ ಹೆಚ್ಚು ಎತ್ತರಕ್ಕೆ ಸಿಡಿಯುತ್ತಿರುವುದನ್ನ ಈ ಕ್ಯಾಮೆರಾಗಳು ದಾಖಲಿಸಿವೆ! ಗುರ ಗ್ರಹದಲ್ಲಿರುವ ಸಂಕೀರ್ಣ ಮೋ ರೂಪುಗೊಳ್ಳುವುದು, ಬಿರುಸಿನ ಮಾರುತಗಳ ಇತ್ಯಾದಿ ಚಿತ್ರಗಳನ್ನು ರವಾನಸಿದೆ. ಶ ಗ್ರಹದ ಸುತ್ತ ಸುಮಾರು 10,000 ಸಂ ಖ್ಯೆಯ ನೆಕ್‌ಲೇಸ್ ತರಹ ಹೊಳೆಯು ಎಳೆಗಳನ್ನು ಗುರುತಿಸಿದೆ. ಶನಿಯ ಅತಿ ದೊಡ್ಡ ಉಪಗ್ರಹ 'ಟೈಟಾನ್ ಮತ್ತು ಯುರೇನಸ್ ಗ್ರಹ ಕಗ್ಗತ್ತಲೆಯ ಪ್ರದೇಶಗಳಂತೆ ಕಂಡಿವೆ. ಸೌರವ್ಯೂಹ ಕೊನೆಯ ಗ್ರಹ ನೆಪ್ಚೂನ್‌ನ ಬೆಳಕು ಯುರೇನಸ್‌ಗಿಂತಲ ಬರೇ ಅರ್ಧದಷ್ಟಿದೆ. ಅಂತರನಕ್ಷ ಪ್ರದೇಶದಲ್ಲಿ ಗಗನನೌಕೆಗಳು ವಸ್ತುವಿ ನಾಲ್ಕನೇ ಸ್ಥಿತಿ ಎನಿಸಿರುವ ಪ್ಲಾಸ್ಮಾದ 40 ಸಲ ಮುಳುಗಿ ಎದ್ದಿರು ಮಾಹಿತಿಯೂ ಸಿಕ್ಕಿದೆ.

ಗೋಲ್ಡನ್ ರೆಕಾರ್ಡ್:

ವಾಯೇಜರ್‌ಗಳು ತಮ್ಮೊಂದಿ ಭೂಮಿಯ ಶಬ್ದ ಮತ್ತು ಚಿತ್ರಗಳನ್ನು ಕೂಡ ಹೊತ್ತೊಯ್ಯುತ್ತಿವೆ. ಜೊತೆ ಭೂಮಿಯ ವಿಶ್ವದಲ್ಲಿ ಯಾವ ಕಡೆ ಇದೆ ಯೆಂಬ ದಿಕ್ಕಿನ ಮಾಹಿತಿಯನ್ನೂ ಕೂ ದಾಖಲೆ ರೂಪದಲ್ಲಿ ಹೊತ್ತೊಯ್ಯುತ್ತಿ ಇದನ್ನೇ ಗೋಲ್ಡನ್ ರೆಕಾರ್ಡ್ ಎನ್ನುತ್ತಾ ಅನ್ಯ ಗ್ರಹದಲ್ಲಿ ಯಾರಾದರೂ ಇವುಗಳ ಆಧರಿಸಿ ಭೂಮಿಯ ಪತ್ತೆ ಹಚ್ಚ ಸಾಧ್ಯವಾಗಲಿ ಎಂಬುದು ಆಶಯ!

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಖಾಸಗಿ ಬಸ್ ಮಾಲಿಕನ ಲಾಭಕೋರತನಕ್ಕೆ ಅಮಾಯಕ ಪ್ರಯಾಣಿಕರು ಬಲಿಯಾದರೆ?

ಬೆಂಗಳೂರಿನಿಂದ ಹೈದರಾಬಾದ್‌ಗೆ ತೆರಳುತ್ತಿದ್ದ ಖಾಸಗಿ ಬಸ್ ಆಂಧ್ರ ಪ್ರದೇಶದ ಮೆಹಬೂಬ್ ನಗರದ ಬಳಿ ಅಪಘಾತಕ್ಕೀಡಾಗಿ, ಬೆಂಕಿ ಹೊತ್ತಿಕೊಂಡು 45 ಜನ ಪ್ರಯಾಣಿಕರು ಸಾವನ್ನಪ್ಪಿದ ದಾರುಣ ದುರಂತವೊಂದು ಅಕ್ಟೋಬರ್ 30 ರ ಬೆಳಗಿನ ಜಾವ ಸಂಭವಿಸಿದೆ. ಬದುಕುಳಿದವರು 5 ಜನ ಮಾತ್ರ, ಮೃತ ದೇಹಗಳು ಗುರುತು ಸಿಗಲಾರದಷ್ಟು ಸುಟ್ಟು ಕರಕಲಾಗಿರುವುದು ಬೆಂಕಿ ಅನಾಹುತದ ತೀವ್ರತೆಗೆ ಸಾಕ್ಷಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಸಂಭವಿಸಿದ ಅತಿ ದೊಡ್ಡ ಬಸ್-ಬೆಂಕಿ ದುರಂತ ಇದಾಗಿದೆ. 2010ರಲ್ಲಿ ಚಿತ್ರದುರ್ಗದ ಚಳ್ಳಕೆರೆ ಬಳಿ ಬಸ್‌ಗೆ ಬೆಂಕಿ ಬಿದ್ದು 30 ಜನ ಮೃತಪಟ್ಟಿದ್ದರು.

ಅಪಘಾತಗಳು ಆಕಸ್ಮಿಕವಾಗಿ ಸಂಭವಿಸುತ್ತವೆ. ಆದರೆ ಮಾನವ ವೈಫಲ್ಯತೆಯಿಂದಾಗಿ ಇಂತಹ ಘೋರ ದುರಂತಗಳು ಸಂಭವಿಸುವುದಾದರೆ ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಜರಗಿಸುವುದು ಅಗತ್ಯವಿದೆ. ಕಾರ್ ಒಂದನ್ನು ಹಿಂದಿಕ್ಕಲು ಪ್ರಯತ್ನಿಸುತ್ತಿದ್ದಾಗ ಬಸ್ ನಿಯಂತ್ರಣ ತಪ್ಪಿ, ರಸ್ತೆ ವಿಭಜಕ್ಕೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ ಎನ್ನಲಾಗುತ್ತಿದೆ. ಹಾಗಾಗಿದ್ದು ನಿಜವಾದರೆ, ದುರಂತಕ್ಕೆ ಚಾಲಕನ ನಿರ್ಲಕ್ಷವೇ ಕಾರಣ ಎನ್ನಬೇಕಾಗುತ್ತದೆ. ಇಷ್ಟೊಂದು ಪ್ರಯಾಣಿಕರ ಜೀವಕ್ಕೆ ಹೊಣೆಗಾರನಾಗಿ ಚಾಲಕ ತುಂಬಾ ಎಚ್ಚರಿಕೆಯಿಂದ ವಾಹನವನ್ನು ನಡೆಸಬೇಕಾಗುತ್ತದೆ. ಸಾಮಾನ್ಯವಾಗಿ ಬಸ್‌ಗಳಲ್ಲಿ ದೂರದ ಪ್ರಯಾಣಕ್ಕೆ ಕನಿಷ್ಠ ಇಬ್ಬರು ಚಾಲಕರಿರುತ್ತಾರೆ. ಆದರೆ ಕೆಲ ಖಾಸಗಿ ಬಸ್‌ಗಳ ಮಾಲಿಕರು ಹಣ ಉಳಿಸಲು ಒಬ್ಬನೇ ಚಾಲಕನನ್ನು ಇಟ್ಟಿರುತ್ತಾರೆ. ಅಪಘಾತಗಳಿಗೆ ಇದೂ ಒಂದು ಕಾರಣ ಆಗುತ್ತಿರುತ್ತದೆ. ಅಪಘಾತಕ್ಕೀಡಾದ ಈ ಬಸ್‌ನಲ್ಲೂ ಒಬ್ಬನೇ ಚಾಲಕನಿದ್ದ ಎನ್ನಲಾಗಿದೆ.

ಖಾಸಗಿ ಬಸ್ ಮಾಲಿಕರಿಗೆ ಪ್ರಯಾಣಿಕರ ಹಿತ, ಅವರ ಸುರಕ್ಷೆಗಿಂತಲೂ ಹೆಚ್ಚಾಗಿ ಲಾಭವೇ ಮುಖ್ಯವಾಗಿರುತ್ತದೆ. ಹಬ್ಬಹರಿದಿನಗಳ ನಿಮಿತ್ತ ರಜೆಗಳು ಬಂದಾಗ ಇವರು ಟಿಕೆಟ್ ದರಗಳನ್ನು ಎರಡು ಪಟ್ಟು, ಮೂರು ಪಟ್ಟು ಹೆಚ್ಚಿಸಿ ಪ್ರಯಾಣಿಕರ ಸುಲಿಗೆ ಮಾಡುತ್ತಾರೆ. ಪ್ರಯಾಣಿಕರ ಸಂಖ್ಯೆ ಏರುತ್ತಿದ್ದರೆ, ಪ್ರಯಾಣಕ್ಕೆ ಯೋಗ್ಯವಲ್ಲದ, ಸುಸ್ಥಿತಿಯಲ್ಲಿ ಇಲ್ಲದ ಬಸ್‌ಗಳನ್ನು ಓಡಿಸಿ ಪ್ರಯಾಣಿಕರ ಜೀವಕ್ಕೆ ಕುತ್ತು ತರುತ್ತಾರೆ.


ಬಹುತೇಕ ಖಾಸಗಿ ಬಸ್‌ಗಳು ಪ್ರಭಾವಿ ರಾಜಕೀಯ ವ್ಯಕ್ತಿಗಳ ಮತ್ತು ಪ್ರತಿಷ್ಠಿತರ ಕೈಯಲ್ಲಿವೆ. ಸಾರಿಗೆ ಇಲಾಖೆಯ ಅಧಿಕಾರಿಗಳು ಅಕ್ರಮ ಬಸ್ ಸಂಚಾರಕ್ಕೆ ಕಡಿವಾಣ ಹಾಕುವುದಿಲ್ಲ. ಲೈಸನ್ಸ್ ಇಲ್ಲದೆಯೂ ಸಾವಿರಾರು ಖಾಸಗಿ ಬಸ್‌ಗಳು ಓಡಾಡುತ್ತವೆ ಎಂಬ ಆರೋಪಗಳು ಕೇಳಿ ಬರುತ್ತವೆ. ಒಂದು ಬಸ್‌ಗೆ ಲೈಸನ್ಸ್ ಪಡೆದು ಅದೇ ಲೈಸನ್ಸ್‌ನಲ್ಲಿ ನಾಲ್ಕೈದು ಬಸ್‌ಗಳನ್ನು ಬೇರೆ ಬೇರೆ ಮಾರ್ಗಗಳಲ್ಲಿ ಓಡಿಸುತ್ತಾರೆ. ಲೈಸನ್ಸ್ ಪಡೆದ ವಾಹನದ ಸಂಖ್ಯೆಯನ್ನೇ ಇತರ ಬಸ್‌ಗಳಿಗೆ ಬಳಸಿ ಆ ಮೂಲಕ ಸಂಪಾದನೆ ಮಾಡುವ ಜತೆಯಲ್ಲಿ ರಸ್ತೆ ತೆರಿಗೆ ಹಾಗೂ ಇನ್ನಿತರ ಶುಲ್ಕ ಪಾವತಿಯಿಂದ ತಪ್ಪಿಸಿಕೊಳ್ಳುತ್ತಾರೆ ಎನ್ನಲಾಗುತ್ತದೆ.

ಖಾಸಗಿ ಬಸ್‌ಗಳು ಪ್ರಯಾಣಿಕರನ್ನು ಅವಲಂಭಿಸಿ ವ್ಯವಹಾರ ಮಾಡುವುದಕ್ಕಿಂತ ಹೆಚ್ಚಾಗಿ ಸರಕು ಸಾಗಣೆಗೆ ಹೆಚ್ಚು ಆದ್ಯತೆ ನೀಡುತ್ತವೆ. ಪ್ರಯಾಣದ ಉದ್ದೇಶಕ್ಕೆ ಲೈಸನ್ಸ್ ಪಡೆಯುವ ಖಾಸಗಿ ಬಸ್‌ಗಳು ರಾಜರೋಷವಾಗಿ ಸರಕು ಸಾಗಣೆ ಮಾಡುತ್ತಿರುತ್ತವೆ. ನಿಯಮಗಳ ಪ್ರಕಾರ ವಾಹನದ ಮೇಲೆ ಮತ್ತು ಒಳಗೆ ಪ್ರಯಾಣಿಕರ ಲಗೇಜು ಹೊರತುಪಡಿಸಿ ಯಾವುದೇ ವಾಣಿಜ್ಯ ಸರಕುಗಳನ್ನು ಹೇರುವಂತಿಲ್ಲ. ಆದರೆ ಎಲ್ಲ ಖಾಸಗಿ ಬಸ್‌ಗಳು ಲಾರಿಗಳಂತೆ ಸರಕು ಸಾಗಣೆಯಲ್ಲಿ ತೊಡಗಿವೆ. ಇದರಿಂದಾಗಿ ಪ್ರಯಾಣಿಕರು ಬಹಳಷ್ಟು ಅನಾನುಕೂಲತೆಗಳನ್ನು ಅನುಭವಿಸುತ್ತಾರೆ ಮಾತ್ತವಲ್ಲ ಅಪಘಾತಗಳು ಹೆಚ್ಚಾಗಲು ಕಾರಣವಾಗುತ್ತಿದೆ.

ಬೃಹತ್ ವೋಲ್ವೋ ಬಸ್‌ಗಳಲ್ಲಿ ಹಿಂದಕ್ಕೆ ತಳ್ಳಬಹುದಾದ ಎತ್ತರದ ಸೀಟುಗಳಿರುತ್ತವೆ. ಬಸ್‌ನ ಉದರದಲ್ಲಿ ಸಾಕಷ್ಟು ಸರಕುಗಳನ್ನು ತುಂಬಲು ವಿಶಾಲವಾದ ಸ್ಥಳ ಇರುತ್ತದೆ. ಎಲ್ಲಾ ರೀತಿಯ ಸರಕುಗಳನ್ನು ತುಂಬಲಾಗುತ್ತದೆ. ಇಂತಹ ಬಸ್‌ಗಳು ಪ್ರಯಾಣಿಕರಿಂದ ಪಡೆಯುವ ಟಿಕೆಟ್ ಹಣಕ್ಕಿಂತ ಸರಕು ಸಾಗಣೆಯಲ್ಲಿ ಹೆಚ್ಚಿನ ಲಾಭ ಗಳಿಸುತ್ತವೆ. ಬಸ್ ಏನನ್ನೆಲ್ಲಾ ತುಂಬಿಕೊಂಡು ಹೊರಟಿದೆ ಎನ್ನುವ ಬಗ್ಗೆ ಯಾವ ಅನುಮಾನವೂ ಇಲ್ಲದ ಪ್ರಯಾಣಿಕರು ರಾತ್ರಿ ಹೊತ್ತಿನಲ್ಲಿ ಸುಖ ನಿದ್ರೆಯಲ್ಲಿರುತ್ತಾರೆ. ಇಂತಹ ಘನಘೋರ ಅಪಘಾತ ಸಂಭವಿಸಿ ಅವರು ಎಚ್ಚರಗೊಳ್ಳುವಷ್ಟರಲ್ಲೇ ಸುಟ್ಟು ಭಸ್ಮವಾಗುತ್ತಾರೆ.

ಹೈದರಾಬಾದ್‌ಗೆ ಹೊರಟಿದ್ದ ಈ ಖಾಸಗಿ ಬಸ್‌ಗೆ ಹೇಗೆ ಬೆಂಕಿ ತಗಲಿತು ಎನ್ನುವ ವಿಷಯ ವಿವರವಾದ ತನಿಖೆಯಿಂದ ಗೊತ್ತಾಗಬಹುದು. ಈ ಬಸ್‌ನಲ್ಲಿ ಅಪಾಯಕಾರಿ ವಸುಗಳನ್ನು ಸಾಗಿಸಲಾಗುತಿತ್ತೇ ಎನ್ನುವ ಅನುಮಾನ ವ್ಯಕ್ತವಾಗಿದೆ. ಇಡೀ ಬಸ್ ಅತ್ಯಂತ ಕಡಿಮೆ ಅವಧಿಯಲ್ಲಿ ಬೆಂಕಿಗೆ ಅಹುತಿ ಆಗಿರುವುದು ಈ ಸಂದೇಹಕ್ಕೆ ಕಾರಣವಾಗಿದೆ. ಅಪಘಾತದಿಂದ ಹೊತ್ತಿಕೊಂಡ ಬೆಂಕಿ ಇನ್ನಷ್ಟು ವೇಗವಾಗಿ ವ್ಯಾಪಿಸಿಕೊಳ್ಳಲು ಬಸ್‌ನಲ್ಲಿ ಇದ್ದಿರಬಹುದಾದ ರಾಸಾಯನಿಕಗಳು ಕಾರಣವಾಗಿರಬಹುದೇ?

ಖಾಸಗಿ ಬಸ್ ಮಾಲಿಕರ ಇಂತಹ ಲಾಭಕೋರತನ ಅತ್ಯಂತ ಆಘಾತಕಾರಿಯಾಗಿದೆ. ತಮ್ಮ ಲಾಭಕ್ಕಾಗಿ ಅಮಾಯಕ ಪ್ರಯಾಣಿಕರ ಅಮೂಲ್ಯ ಜೀವವನ್ನು ಅಪಾಯಕ್ಕೆ ಒಡ್ಡುವ ಇವರ ವಿರುದ್ಧ ಮತ್ತು ಇವರೊಂದಿಗೆ ಶಾಮೀಲಾಗಿರುವ ಸರ್ಕಾರಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರಗಿಸಬೇಕು. ಮುಖ್ಯವಾಗಿ ಅಧಿಕಾರ ನಡೆಸುವ ಸರ್ಕಾರ ತನ್ನ ಹೊಣೆಗಾರಿಕೆಯನ್ನು ಸಮರ್ಪಕವಾಗಿ ನಿಭಾಯಿಸಬೇಕು.



ಭಾಷೆಯೆಂಬುದೂ ಬದುಕು. ಅದನ್ನು ಉಳಿಸಿಕೊಳ್ಳಲೇಬೇಕಲ್ಲಾ

ಕರ್ನಾಟಕ ಒಂದು ಭಾಷಾವಾರು ಪ್ರಾಂತ್ಯ ರಚನೆಯಾಗಿ 58 ವರುಷಗಳಾಗುತ್ತಿವೆ. ಕರ್ನಾಟಕದ ಜನತೆಗೆ , ನಮ್ಮ ಪತ್ರಿಕೆಯ ಓದುಗರಿಗೆ ಹಾರ್ದಿಕ ಶುಭಾಶಯಗಳು. ಇದು ಸಂತೋಷ ಮತ್ತು ಸಂಭ್ರಮದ ಸಂದರ್ಭ. ಹಾಗೆಯೇ ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ತ್ಯಾಗ, ಬಲಿದಾನಗಳಿಂದ ಹೋರಾಡಿದ ಆಶಯಗಳು ಸಾಕಾರಗೊಳ್ಳಲು ಮತ್ತಷ್ಟು ಹೋರಾಡಲು ಸಂಕಲ್ಪಿಸುವ ಸನ್ನಿವೇಶವೂ ಕೂಡ. ಅಂದು ನಡೆದಿದ್ದ ಏಕೀಕರಣದ ಪ್ರಜಾಸತ್ತಾತ್ಮಕ ಆಂದೋಲನದಲ್ಲಿ ಭಾಗಿಯಾಗಿದ್ದ 'ಜನಶಕ್ತಿ' ಪತ್ರಿಕೆಯ ಪಾತ್ರ, ಅದರ ಪಾಲು ಸಹ ಸ್ಮರಣೀಯ.

ನವೆಂಬರ್ 1ರಂದು, ಆ ನಂತರವೂ ಹಲ ದಿನಗಳು ರಾಜ್ಯೋತ್ಸವವನ್ನು ಒಂದು ನಾಡ ಹಬ್ಬವಾಗಿ ಆಚರಿಸಲಾಗುತ್ತಿರುವುದು ನಾಡ ನುಡಿ, ಸಂಸ್ಕೃತಿಯ ಬಗೆಗಿನ ಹೆಮ್ಮೆ, ಪ್ರೀತಿಯ ದ್ಯೋತಕ. ಕನ್ನಡ ಭಾಷೆಯೆಂಬುದು ಕೇವಲ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಮಾಧ್ಯಮ ಮಾತ್ರವೇ ಅಲ್ಲ. ಅದು ನಮ್ಮ ಬದುಕು, ನಮ್ಮ ಸಂಸ್ಕೃತಿ, ನಮ್ಮ ರಾಷ್ಟ್ರೀಯತೆ.



ಈ ರಾಜ್ಯೋತ್ಸವಕ್ಕೆ ಒಂದು ಪ್ರಮುಖ ರಾಜಕೀಯ ಹಿನ್ನೆಲೆಯೂ ಒದಗಿದೆ. ಕಳೆದ ವರುಷದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಪಕ್ಷದ ಸರಕಾರವನ್ನು ಜನತೆ ಇತ್ತೀಚಿನ ವಿಧಾನ ಸಭಾ ಚುನಾವಣೆಯಲ್ಲಿ ಕಿತ್ತೊಗೆದಿರುವದು ಗಮನಾರ್ಹ.

ಅದು ಜನ ಭಾಷೆ-ವೈವಿಧ್ಯ ಬಹು ಸಂಸ್ಕೃತಿಗಳನ್ನು ಒಪ್ಪದ ಪ್ರಜಾಪ್ರಭುತ್ವ ವಿರೋಧಿ, ಕೋಮುವಾದೀ, ಅತ್ಯಂತ ಭ್ರಷ್ಟ-ಜನದ್ರೋಹಿ ಆಡಳಿತವಾಗಿತ್ತು. ಪ್ರಸಕ್ತ ಸಂದರ್ಭದಲ್ಲಿ ಅದರ ರಾಜಕೀಯ ಲಾಭವನ್ನು ಕಾಂಗ್ರೆಸ್ ಪಡೆದಿದೆ, ಸಿದ್ಧರಾಮಯ್ಯನವರ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಿದೆ. ಜನರು ಈ ಸರಕಾರದ ನುಡಿ ಮತ್ತು ನಡೆಗಳನ್ನು ತೆರೆದ ಕಣ್ಣಿಂದ ಕಾದು ನೊಡುತ್ತಿದ್ದಾರೆ. ಬದಲಾವಣೆಯನ್ನು ತಂದ ಜನತೆ ಅದರ ಫಲ ನಿರೀಕ್ಷಿಸುವುದು ಸಹಜವೇ ಅಲ್ಲವೇ.

ಬ್ರಿಟೀಷ್ ವಸಾಹತುಶಾಹಿ ಆಳ್ವಿಕೆಯಲ್ಲಿ ಹರಿದು ಹಂಚಿ ಹೋಗಿದ್ದ ಒಂದು ಭಾಷಿಕರು ಒಂದು ಗೂಡಬೇಕೆಂಬ ಆಧಾರದಲ್ಲಿಯೇ ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ಸಂಗ್ರಾಮ ಮುಂದುವರಿಯಿತು. ಸ್ವಾತಂತ್ರ್ಯ ಪಡೆದ ನಂತರದ ವರುಷಗಳಲ್ಲಿ ಪುನಃ ಹೋರಾಡಬೇಕಾಗಿ ಬಂದುದು, ಇದಕ್ಕೆ ಅವಿಭಜಿತ ಕಮ್ಯೂನಿಸ್ಟ್ ಚಳುವಳಿ ಒತ್ತಾಸೆಯಾಗಿ ನಿಂತು ಹೋರಾಡಿದ್ದು ಇತಿಹಾಸ. ಅದು ಜನತೆಯ ವಿಶಾಲ ಪ್ರಜಾಸತ್ತಾತ್ಮಕ ಪ್ರಬಲ ಹೋರಾಟ. ಹೀಗಾಗಿಯೇ ಆಳುವವರು ಕೊಟ್ಟ ಮಾತಿನಿಂದ ಹಿಂದೆ ಸರಿದಾಗ, ಅರೆ ಮನಸ್ಸಿರುವಾಗ ಅವರನ್ನು ಮಣಿಸಲು ಸಾಧ್ಯವಾಯಿತು.

ರಾಜ್ಯೋತ್ಸವವನ್ನು ಕೇವಲ ಕನ್ನಡ ಭಾಷೆಯ ಗುಣಗಾನಕ್ಕೆ, ವಿಜೃಂಭಣೆಗೆ ಅಥವಾ ಭಾವೋದ್ರೇಕದ ನೆಲೆಯಲ್ಲಿ ಮಾತ್ರ ನೋಡುವ, ವ್ಯಾಖ್ಯಾನಿಸುವ ನೆಲೆಯಲ್ಲಿ ಮಾತ್ರವೇ ಪ್ರಯತ್ನಿಸಲಾಗುತ್ತದೆ. ನಿಜ, ನಮ್ಮ ಭಾಷೆ, ಸಂಸ್ಕೃತಿ ಉಳಿಯಬೇಕು, ಬೆಳೆಯಬೇಕು. ಅದಾಗುವುದು ಹೇಗೆ? ಒಂದು ಭಾಷಿಕ ಜನರು ಒಂದುಗೂಡಿದಾಗ ಅವರದ್ದೇ ಭಾಷೆಯಲ್ಲಿ ಆಡಳಿತ ನಡೆಸಲೂ ಸುಲಭವಾಗುವುದು. ಜನ ಭಾಷೆಯಲ್ಲಿನ ಆಡಳಿತವು ಜನರಿಗೆ ಹತ್ತಿರವಾಗಿ ಅವರ ಭಾಗವಹಿಸುವಿಕೆಯೂ ಹೆಚ್ಚಾಗಿ ಈ ಮೂಲಕ ಪ್ರಜಾಪ್ರಭುತ್ವ ಬಲಗೊಂಡು ಬೆಳೆಯಲು ಸಾಧ್ಯವಾಗುತ್ತದೆ ಎಂಬ ಮೂಲ ಆಶಯವೇ ಭಾಷಾವಾರು ಪ್ರಾಂತ್ಯಗಳಿಗಾಗಿ ನಡೆದ ಸಂಗ್ರಾಮದ್ದಾಗಿತ್ತು. ಅಂದರೆ ಆಡಳಿತದ ಎಲ್ಲಾ ಹಂತಗಳಲ್ಲಿಯೂ ಕನ್ನಡ ಆಡಳಿತ ಭಾಷೆಯಾಗಿ ಅನುಷ್ಠಾನಗೊಳ್ಳಬೇಕಿತ್ತು. ನ್ಯಾಯಾಲಯದಲ್ಲಿಯೂ ಕನ್ನಡವೇ ಜಾರಿಯಾಗಬೇಕು. ಹೀಗಾದಲ್ಲಿ ಕನ್ನಡಕ್ಕೆ ಶಿಕ್ಷಣದಲ್ಲಿಯೂ ಹೆಚ್ಚಿನ ಸ್ಥಾನ, ಆದ್ಯತೆ ದೊರೆಯುವುದು. ಆದರೆ ಇಲ್ಲಿಯವರೆಗಿನ ಸರಕಾರಗಳು 'ನವೆಂಬರ್ ಘೋಷಣೆ' ಮಾಡುವುದನ್ನು ಬಿಟ್ಟರೆ ಅದರ ಜಾರಿಗಾಗಿ ಧೃಢ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿಲ್ಲ, ಹಾಗೆ ಮಾಡಲು ಸಿದ್ಧವಿಲ್ಲ. ಪ್ರಜಾಪ್ರಭುತ್ವ, ಸ್ವಾವಲಂಬನೆಯ ಆರ್ಥಿಕ ನೀತಿಗಳನ್ನು ತಿರಸ್ಕರಿಸಿರುವ ಅವು ಅಖಿಲ ಭಾರತ ಮಾರುಕಟ್ಟೆ, ಜಾಗತಿಕ ವ್ಯವಹಾರ ವಹಿವಾಟಿನ ಬಹುರಾಷ್ಟ್ರೀಯ, ಬಂಡವಾಳಶಾಹಿ ಆರ್ಥಿಕ ನೀತಿಗಳಿಗೇ ಅನುಗುಣವಾಗಿ ನೀತಿಗಳನ್ನು ಜಾರಿಗೊಳಿಸುತ್ತವೆ.

ಈಗಲೂ ಸರಕಾರದ ತೀರ್ಮಾನವಿದ್ದರೂ ಇಂಗ್ಲೀಷ್‌ನಲ್ಲಿಯೇ ಆಡಳಿತದ ವ್ಯವಹಾರಗಳು ನಡೆಯುತ್ತಿವೆ. ನಮ್ಮ ಅಧಿಕಾರಶಾಹಿಗೂ ಆಡಳಿತದಲ್ಲಿ ಕನ್ನಡ ಜಾರಿಯಾಗುವುದು ಬೇಕಿಲ್ಲ. ಹೀಗಾಗಿ ಜನತೆಯನ್ನು ಪ್ರಜಾಪ್ರಭುತ್ವದಲ್ಲಿ ಬಾಗವಹಿಸದಂತೆ ತಡೆದು ದೂರಕ್ಕಟ್ಟಲಾಗುತ್ತಿದೆ. ಮೇಲಾಗಿ ಹಿಂದಿ-ಸಂಸ್ಕೃತದಂತಹ ಭಾಷೆಗಳನ್ನು ಹೇರುವ

ಪುಟ 14 ಕ್ಕೆ

ಧರ್ಮಸ್ಥಳ ಸೌಜನ್ಯ ಪ್ರಕರಣ : ಸಿಐಡಿ ತನಿಖಾ ವರದಿಯನ್ನು ತಿರಸ್ಕರಿಸಿ, ಸಿಬಿಐ ತನಿಖೆಗೆ ಒಪ್ಪಿಸಲು ಆಗ್ರಹ.

ಕಪ್ಪು ಬಾವುಟ ಪ್ರದರ್ಶನ : ನೂರಾರು ಪ್ರತಿಭಟನಾಕಾರರ ಬಂಧನ

ಧರ್ಮಸ್ಥಳದ ವಿದ್ಯಾರ್ಥಿನಿ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಸಿಬಿಐಗೆ ಒಪ್ಪಿಸಲು ಹಿಂದೇಟು ಹಾಕುತ್ತಿರುವ ರಾಜ್ಯ ಸರ್ಕಾರದ ಧೋರಣೆಯ ವಿರುದ್ಧ ಪ್ರತಿಭಟಿಸಿ ಕಪ್ಪು ಬಾವುಟ ಪ್ರದರ್ಶಿಸಿ ಮಂಗಳೂರಿನಲ್ಲಿ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ತಡೆಯುಂಟುಮಾಡಿದ ವಿವಿಧ ಪ್ರಗತಿಪರ ಸಂಘಟನೆಗಳ 150 ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

ನವಂಬರ್ 1 ರಂದು ರಾಜ್ಯೋತ್ಸವದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದ ನೆಹರು ಮೈದಾನದ ಹತ್ತಿರಕ್ಕೆ ಬಂದ ಪ್ರತಿಭಟನಾಕಾರರು ಏಕಾಏಕಿಯಾಗಿ ಮೈದಾನಕ್ಕೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು. ಪೊಲೀಸರಿಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯುತ್ತಿದ್ದಂತೆ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಯಿತು. ಪೊಲೀಸರು ಲಾಠಿ ಪ್ರಹಾರ ಮಾಡಿ ಪ್ರತಿಭಟನಾಕಾರರನ್ನು ಚದುರಿಸಲು ಪ್ರಯತ್ನಿಸಿದರು. ಪ್ರತಿಭಟನಾಕಾರರು ಚದುರದಿದ್ದಾಗ ಅವರನ್ನು ಬಂಧಿಸಿ ವ್ಯಾನುಗಳಲ್ಲಿ ತುಂಬಿ ಪಾಂಡೇಶ್ವರ ಪೋಲಿಸ್ ಠಾಣೆಗೆ ಕೊಂಡೊಯ್ಯಲಾಯಿತು. ಅನಂತರ ಅವರನ್ನು ಬಿಡುಗಡೆ ಮಾಡಲಾಯಿತು.

ಪ್ರತಿಭನೆಯಲ್ಲಿ ಡಿವೈಎಫ್ಐ, ಸಿಐಟಿಯು, ಜನವಾದಿ ಮಹಿಳಾ ಸಂಘಟನೆ, ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ ಮತ್ತು



ಡಿಎಸ್ಎಸ್(ಪ್ರೊ. ಕೃಷ್ಣಪ್ಪ) ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

ಬೆಳ್ತಂಗಡಿಯಲ್ಲಿಯೂ ಪ್ರತಿಭಟನಾಕಾರರ ಬಂಧನ :

ಸೌಜನ್ಯಾ ಅತ್ಯಾಚಾರ, ಕೊಲೆ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಒತ್ತಾಯಿಸಿ, ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಸಿಪಿಐ(ಎಂ), ಡಿವೈಎಫ್ಐ ಕಾರ್ಯಕರ್ತರು ಮುತ್ತಿಗೆ ಹಾಕಿದ ಘಟನೆ ದ.ಕ.ಜಿಲ್ಲೆಯ ಬೆಳ್ತಂಗಡಿಯಲ್ಲಿಯೂ ನಡೆದಿದೆ.

ಬೆಳ್ತಂಗಡಿ ಪಟ್ಟಣದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಸಂದರ್ಭ ಸ್ಥಳಕ್ಕೆ ಮುತ್ತಿಗೆ ಹಾಕಿದ ಸಿಪಿಐ(ಎಂ) ಹಾಗೂ ಡಿವೈಎಫ್ಐ ಕಾರ್ಯಕರ್ತರು ಧರಣಿ ನಡೆಸಿ, ಕಪ್ಪು ಬಾವುಟ ಪ್ರದರ್ಶನ ಮಾಡಿದರು.

ಸಿಐಡಿ ಅಧಿಕಾರಿಗಳು ಗೃಹ ಇಲಾಖೆಯ ಮುಖ್ಯ ಕಾರ್ಯದರ್ಶಿಗೆ 12 ಪುಟಗಳ ತನಿಖಾ ವರದಿಯನ್ನು ಗುರುವಾರ ಸಲ್ಲಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಪೊಲೀಸ್ ವಶದಲ್ಲಿರುವ ಆರೋಪಿ ಸಂತೋಷ್ ರಾವ್, ತಾನೇ ಸೌಜನ್ಯಾಳ ಮೇಲೆ ಅತ್ಯಾಚಾರ ವೆಸಗಲು ಪ್ರಯತ್ನ ಪಟ್ಟು, ಅದು ಸಾಧ್ಯವಾಗದಿದ್ದಾಗ ಆಕೆಯನ್ನು ಕೊಲೆ ಮಾಡಿದ್ದೇನೆಂದು ಒಪ್ಪಿಕೊಂಡಿದ್ದಾನೆಂದು ವರದಿಯಲ್ಲಿ ತಿಳಿಸಲಾಗಿದೆ ಎನ್ನಲಾಗಿದೆ.



ಆದರೆ ಈ ವರದಿಯ ಬಗ್ಗೆ ನಮಗೆ ನಂಬಿಕೆಯಿಲ್ಲ ಎಂದು ಸೌಜನ್ಯಳ ಪೋಷಕರು ಅಭಿಪ್ರಾಯ ವ್ಯಕ್ತ ಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಡಿವೈಎಫ್ಐ ಹಾಗೂ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಪ್ರತಿಭಟನೆ ವೇಳೆ ಸುಮಾರು ನೂರಕ್ಕೂ ಅಧಿಕ ಕಾರ್ಯಕರ್ತರನ್ನು ಬೆಳ್ತಂಗಡಿ ಪೊಲೀಸರು ಬಂಧಿಸಿದ್ದಾರೆ.

ಸಿಐಡಿ ವರದಿಯನ್ನು ತಿರಸ್ಕರಿಸಲು ಸಿಪಿಐ(ಎಂ) ಆಗ್ರಹ :

ಸೌಜನ್ಯ ಅತ್ಯಾಚಾರ – ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಪೊಲೀಸರು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಮಧ್ಯಂತರ ವರದಿ ಸುಳ್ಳುಗಳ ಕಂತೆಯಾಗಿದ್ದು ಅದನ್ನು ತಿರಸ್ಕರಿಸಿ ಪ್ರಕರಣವನ್ನು ಕೂಡಲೇ ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸಿದ್ದರಾಮಯ್ಯ ಸರ್ಕಾರವನ್ನು ಆಗ್ರಹಿಸಿದೆ. ಸೌಜನ್ಯಳ ಮೇಲೆ ಅತ್ಯಾಚಾರವೇ ನಡೆದಿಲ್ಲ ಎಂದು ವರದಿ ಪ್ರಕರಣವನ್ನು ತಿರುಚಿದೆ. ಅತ್ಯಾಚಾರ ಮಾಡಲು ಸಾಧ್ಯವಾಗದ ವ್ಯಕ್ತಿಯಿಂದ ಕೊಲೆ ಮಾಡಲು ಸಾಧ್ಯವೆ? ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ಅಮಾಯಕ ಯುವತಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಮುಚ್ಚಿ ಹಾಕಲು ಸಿದ್ಧಪಡಿಸಿದ ದಾಖಲೆ ಇದಾಗಿದ್ದು ಈ ವರದಿಯನ್ನು ಒಪ್ಪಲಾಗದು. ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸುವವರೆಗೂ ರಾಜ್ಯಾದ್ಯಂತ ಚಳುವಳಿಯನ್ನು ವಿಸ್ತರಿಸಲು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ನಿರ್ಧರಿಸಿದೆ.

ಏನೇನು ನಡೆಯಬಹುದು ಅಲ್ಲಿ ಆ ಧರ್ಮಸ್ಥಳ ಎಂಬಲ್ಲಿ ? ಭಾಗ–2

'ನನ್ನ ಪತ್ನಿ ವೇದವಲ್ಲಿಯನ್ನು ಪೆಟ್ರೋಲ್ ಹಾಕಿ ಸುಟ್ಟರು'

34 ವರ್ಷಗಳ ನಂತರವೂ ಡಾ. ಬಿ.ಆರ್. ಹರಳೆಯವರ ಮನದಲ್ಲಿ ಮಡುಗಟ್ಟಿರುವ ದಟ್ಟ ನೆನಪು.

75 ವರ್ಷದ ಉಜಿರೆಯ ನಿವೃತ್ತ ಸರ್ಕಾರಿ ವೈದ್ಯ ಡಾ. ಬಿ.ಆರ್. ಹರಳೆ ಅವರು ಪ್ರಸ್ತುತ 'ಮುಂಡಾಜೆ'ಯಲ್ಲಿ ನೆಲೆಸಿದ್ದಾರೆ. ಅವರ ಬದುಕಿನಲ್ಲಿ–ಅವರ ಕುಟುಂಬದಲ್ಲಿ ನಡೆದು ಹೋದ ಭೀಕರ 'ದುರಂತ'ವೊಂದು ಅವರ ಮನಸ್ಸಿನಲ್ಲಿ ಇನ್ನೂ ಹಾಗೇ ಅಚ್ಚಳಿಯದೇ ಉಳಿದಿದೆ. ಅದೇನೆಂದು ನೀವು ಅವರದ್ದೇ ಮಾತುಗಳಲ್ಲಿ ಕೇಳಿ. ನಂತರ 'ಏನೇನು ನಡೆಯಬಹುದು ಅಲ್ಲಿ ಆ 'ಧರ್ಮಸ್ಥಳ' ಎಂಬಲ್ಲಿ ? ಎಂದು ಯೋಚಿಸಿ.



"1965ರಲ್ಲಿ ವೇದವಲ್ಲಿ ಜೊತೆ ನನ್ನ ವಿವಾಹವಾಗಿದ್ದು, ಉಜಿರೆಗೆ ಕರೆದುಕೊಂಡು ಬಂದಿದ್ದೆ. ಆಗ ಪಟ್ಟಭದ್ರ ಶಕ್ತಿಗಳಿಗೆ ಶಾಲೆ ತೆರೆಯಲು, ಸರ್ಕಾರಿ ಅನುದಾನ ಪಡೆಯಲು 'ಗ್ರಾಜುಯೆಟ್ ಅಸಿಸ್ಟೆಂಟ್' ಅಗತ್ಯವಾಗಿತ್ತು. ಹಾಗೆಯೆ ಬಿಎಸ್ಸಿ, ಬಿಎಡ್, ಬಿಎಲ್ ಶಿಕ್ಷಣ ಪೂರೈಸಿದ ನನ್ನ ಪತ್ನಿಗೆ 1966ರಲ್ಲಿ ಪಟ್ಟಭದ್ರ ಶಕ್ತಿಗಳೇ ಖುದ್ದು ನೇಮಕಾತಿ ಆದೇಶ ನೀಡಿದ್ದರು. ಮುಂದಿನ 8 ವರ್ಷಗಳ ವರೆಗೆ ಎಲ್ಲವೂ ಸರಿಯಾಗಿತ್ತು.

ಆದರೆ 1974ರಲ್ಲಿ ನನ್ನ ಪತ್ನಿಗೆ ನಿಯಮದ ಪ್ರಕಾರ ಮುಖ್ಯ ಶಿಕ್ಷಕಿ ಹುದ್ದೆಯ ಅವಕಾಶ ಬಂದಾಗ ಇದೇ ಸ್ಥಾನಕ್ಕೆ ನಿರ್ಧಿಷ್ಟ ಸಮುದಾಯದ ವ್ಯಕ್ತಿಯನ್ನು ಕೂರಿಸುವ ಸಲುವಾಗಿ ಇಲ್ಲಸಲ್ಲದ ಕಿರುಕುಳ ನೀಡಿದರು. ಅಂತಿಮವಾಗಿ ವೇದವಲ್ಲಿಯನ್ನು ಸಸ್ಪೆಂಡ್ ಮಾಡಿದರು. ಇದನ್ನು ಆಕ್ಷೇಪಿಸಿದ ವೇದವಲ್ಲಿ ಡಿಡಿಪಿಐಗೆ ದೂರು ನೀಡಿ, ಕೋರ್ಟಿನಲ್ಲಿ ಕೇಸು ಹಾಕಿದಳು. ಇದು ದುಷ್ಟಕೂಟದ ಅಹಂಗೆ ಬಲವಾದ ಪೆಟ್ಟು ನೀಡಿತು. ಇಡೀ ಊರೇ ತಲೆಬಾಗುವಾಗ ಯಕಃಶ್ಚಿತ್ ಶಾಲಾ ಶಿಕ್ಷಕಿಯೊಬ್ಬಳು ಸೆಡ್ಡು ಹೊಡೆದಿದ್ದು, ಅರಗಿಸಿಕೊಳ್ಳಲಾಗದೆ ಮನೆಗೆ ನುಗ್ಗಿ ಸುಟ್ಟು ಹಾಕಿದರು. ನಂತರ ಮೂರು ತಿಂಗಳು ನಾನೇ ಆರೋಪಿ ಎಂದು ಬಿಂಬಿಸುವ ಯತ್ನವೂ ನಡೆಯಿತು.



ನಮ್ಮದು ಪ್ರೇಮ ವಿವಾಹ. ಮೂಲತಃ ನಾನು ರಾಯಚೂರಿನವ ಮತ್ತು ಆಕೆ ಬಳ್ಳಾರಿಯವಳು. ಲಿಂಗಾಯತ ಸಮುದಾಯದ ನಾನು ಸರ್ಕಾರಿ ವೈದ್ಯನಾಗಿದ್ದೆ. ಶೈವ ಬ್ರಾಹ್ಮಣ ಜಾತಿಯ ವೇದವಲ್ಲಿಯನ್ನು ಮಂಗಳೂರಿನ ಸಬ್‌ರಿಜಿಸ್ಟರ್ ಕಛೇರಿಯಲ್ಲಿ ಮದುವೆಯಾದೆ. ಇಬ್ಬರು ಮಕ್ಕಳನ್ನು ಪಣಂಬೂರಿನ ಸೆಂಟ್ರಲ್ ಸ್ಕೂಲಿಗೆ ಸೇರಿಸಿದೆವು. ದುರ್ಘಟನೆಗೆ 14 ತಿಂಗಳು ಮೊದಲು ವೇದವತಿಯನ್ನು ಸಸ್ಪೆಂಡ್ ಮಾಡಿದ್ದು ಮನೆಯಲ್ಲಿದ್ದಳು. 1979ರ ಏಪ್ರಿಲ್ 4ರಂದು ಬೆಳಿಗ್ಗೆ 9.30ಕ್ಕೆ ತಾಲೂಕಾ ಬೋರ್ಡ್ ಆಫೀಸಿಗೆ ತೆರಳಿದ್ದೆ. ಅಂದಿನ ಸಭೆಯಲ್ಲಿ, ರಾಜ್ಯ ಸರಕಾರ ತಾಲೂಕು ಬೋರ್ಡ್ ಆಫೀಸಿನ ಅಧೀನದಲ್ಲಿದ್ದ ಆರೋಗ್ಯ ಕೇಂದ್ರವನ್ನು ಟೇಕ್ ಓವರ್ ಮಾಡಿದೆಯೆಂಬ ಸಿಹಿ ಸುದ್ದಿ ತಿಳಿಸಿದರು. ಇದೇ ಖುಷಿಯಲ್ಲಿ ಮನೆಯಲ್ಲಿ ಬಂದಾಗ ಪತ್ನಿ ಸುಟ್ಟು ಕರಕಲಾಗಿದ್ದಳು. ಇದೇ ದಿನ ಪಾಕಿಸ್ತಾನಿ ಪ್ರಧಾನಿ ಜುಲ್ಫಿಕರ್ ಅಲಿ ಭುಟ್ಟೋನನ್ನು ಗಲ್ಲಿಗೇರಿಸಿದ್ದ ಸುದ್ದಿ ರೇಡಿಯೋದಲ್ಲಿ ಬಿತ್ತರವಾಗಿತ್ತು.

ಆ ಕರಾಳ ಘಟನೆ ನಡೆದು 34 ವರ್ಷಗಳಾದವು. ಆದರೂ ನಿನ್ನೆ ಮೊನ್ನೆ ನಡೆದಿದೆಯೇನೋ ಎನ್ನುವ ರೀತಿಯಲ್ಲಿ ಈಗಲೂ ಕಣ್ಣ ಮುಂದಿದೆ. ಅನ್ಯಾಯವಾಗಿ ನನ್ನ ಪತ್ನಿಯನ್ನು ಕೊಂದು ಪೆಟ್ರೋಲ್ ಹಾಕಿ ಸುಟ್ಟರು. ಅಂದು ಮಧ್ಯಾಹ್ನ ಉಜಿರೆಯ ಶಿವಾಜಿ ನಗರದ ಮನೆಗೆ ಬಂದಾಗ ಬಾಗಿಲಿಗೆ ಹೊರಗಿನಿಂದ ಚಿಲಕ ಹಾಕಲಾಗಿತ್ತು. ಸುಟ್ಟ ಘಾಟು ವಾಸನೆ ಮೂಗಿಗೆ ಬಡಿಯುತ್ತಿತ್ತು. ಗಾಬರಿಯಿಂದ ಕಿಟಕಿ ಗಾಜು ಒಡೆದು ನೋಡಿದಾಗ ಸ್ನಾನ ಗೃಹದಲ್ಲಿ ಪತ್ನಿ ವೇದವಲ್ಲಿಯ ಶವ ಧಗಧಗನೆ ಉರಿಯುತ್ತಿತ್ತು. ಈ ಆಘಾತಕ್ಕೆ ಪ್ರಜ್ಞೆ ತಪ್ಪಿ ಬಿದ್ದ ನನ್ನನ್ನು ಉಜಿರೆಯ ವೀರಸಿಂಹ ನಾಯಕ್ ಮೂರುದಿನ ಮನೆಯಲ್ಲಿಟ್ಟುಕೊಂಡು ಉಪಚರಿಸಿದ್ದರಿಂದ ಬದುಕುಳಿದೆ.

ಘಟನೆ ಬಗ್ಗೆ ಹಲವು ಪತ್ರಿಕೆಗಳು ವಾರಗಟ್ಟಲೆ ಬರೆದವು. ಇಡೀ ಉಜಿರೆ ಜನ ಇದೊಂದು ವ್ಯವಸ್ಥಿತ ಕೊಲೆ ಮತ್ತು ಇಂತಹವರದ್ದೇ ಕೃತ್ಯವೆಂದು ಮಾತನಾಡುತ್ತಿದ್ದರು. ಬೆಳ್ತಂಗಡಿ ಪೊಲೀಸರು ಕಾಟಾಚಾರಕ್ಕೆ ಮಹಜರು ನಡೆಸಿದರು. ಆದರೆ ಈವರೆಗೆ ಎಫ್ಐಆರ್ ದಾಖಲಿಸಿದ ಬಗ್ಗೆ, ಪೋಸ್ಟ್‌ಮಾರ್ಟಮ್ ಅಥವಾ ಚಾರ್ಜ್‌ಶೀಟ್ ಸಲ್ಲಿಸಿದ ಬಗ್ಗೆ ಪೊಲೀಸರಲ್ಲಿ ದಾಖಲೆ ಇಲ್ಲ. ಸಾವು ಹೇಗೆ ಸಂಭವಿಸಿತೆಂದೂ ದಾಖಲೆ ತಯಾರಿಸಿಲ್ಲ. ವಿದ್ಯಾರ್ಥಿನಿ ಸೌಜನ್ಯ, ಪದ್ಮಲತಾ ಹಂತಕರಿಗೆ ಸಂಬಂಧ ಪಟ್ಟವರೇ ನನ್ನ ಪತ್ನಿಯನ್ನು ಕೊಂದರು.

ಹಾಸನ ಜಿಲ್ಲೆಯಲ್ಲಿ ಕಣ್ಮರೆಯಾಗುತ್ತಿರುವ ಕಲ್ಪವೃಕ್ಷ

ತೆಂಗು ಇನ್ನಿತರೆ ಬೆಳೆಗಳಂತಲ್ಲ. ಅದರ ಸಸಿಯನ್ನು ನೆಟ್ಟು ಫಸಲಿಗಾಗಿ ಕನಿಷ್ಠ 10 ವರ್ಷ ಕಾಯಬೇಕು, ಮತ್ತು ಅದು ಈ ರೀತಿ ನಾಶವಾದರೆ ತಕ್ಷಣದಲ್ಲಿಯೇ ಆ ಪ್ರದೇಶದಲ್ಲಿ ಪರ್ಯಾಯ ಬೆಳೆಯನ್ನು ಬೆಳೆಯಲು ಸಾಧ್ಯವಿಲ್ಲ ಇಂತಹ ಸಂದರ್ಭದಲ್ಲಿ ತೆಂಗಿನ ಅಧಾಯವನ್ನೇ ನಂಬಿ ಬದುಕುತ್ತಿರುವವರು, ಬೇರೆ ಯಾವ ಆಧಾಯವೂ ಇಲ್ಲದವರ ಪಾಡು ಹೇಳತೀರದಾಗಿದೆ.

ಎಚ್.ಆರ್.ನವೀನ್‌ಕುಮಾರ್



ರಾಜ್ಯದಲ್ಲೇ ತೆಂಗು ಬೆಳೆಯಲ್ಲಿ ಹಾಸನ ಜಿಲ್ಲೆ ದ್ವಿತೀಯ ಸ್ಥಾನದಲ್ಲಿದ್ದು, ಜಿಲ್ಲೆಯಲ್ಲಿ ಸುಮಾರು 63 ಸಾವಿರ ಹೆಕ್ಟೇರ್‌ನಲ್ಲಿ ತೆಂಗನ್ನು ಬೆಳೆಯಲಾಗಿದೆ. ಮುಖ್ಯವಾಗಿ ಅರಸೀಕೆರೆ ತಾಲ್ಲೂಕಿನಲ್ಲಿ 26 ಸಾವಿರ ಹೆಕ್ಟೇರ್, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 24 ಸಾವಿರ ಹೆಕ್ಟೇರ್ ಉಳಿದಂತೆ ಬೇಲೂರು ಮತ್ತು ಜಿಲ್ಲೆಯ ಇತರೆಡೆಗಳಲ್ಲಿ ತೆಂಗಿನ ಬೆಳೆ ಹಂಚಿಹೋಗಿದೆ. ಆದರೆ ಕಳೆದ ನಾಲ್ಕು ವರ್ಷಗಳಿಂದ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಿಗೆ ಸಾಕಷ್ಟು ಮಳೆಯಾಗದ ಪರಿಣಾಮ ಅಂತರ್‌ಜಲ ಸಂಪೂರ್ಣ ಕುಸಿದಿದ್ದು ಕೆರೆ, ಕಟ್ಟೆ, ಬಾವಿಗಳಲ್ಲು ನೀರು ಬತ್ತಿಹೋಗಿದ್ದರ ಪರಿಣಾಮ ಜಿಲ್ಲೆಯಲ್ಲಿ ಸುಮಾರು 10 ಕ್ಕೂ ಹೆಚ್ಚು ತೆಂಗಿನ ಮರಗಳು ನಾಶವಾಗಿ ಫಸಲನ್ನು ನೀಡದೆ ಕಲ್ಪತರು ಎಂಬ ಹೆಸರಿಗೆ ತದ್ವಿರುದ್ಧವಾಗಿ ಬರಿದಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸಾಧಾರಣವಾಗಿ ತೆಂಗು ಬೆಳೆಯುವ ಪ್ರದೇಶಕ್ಕೆ ಕನಿಷ್ಠ 700 ಮಿ.ಮೀ ಮಳೆಯಾಗಬೇಕು ಆದರೆ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಹಲವು ವರ್ಷಗಳಿಂದ ಗರಿಷ್ಠ 700 ಮಿ.ಮೀ ಮಳೆಯು ಆಗಿಲ್ಲ. ಆದ್ದರಿಂದ ಈ ತಾಲ್ಲೂಕುಗಳು ಬರದಿಂದ ನರಳುತ್ತಿವೆ. ಜಿಲ್ಲೆಯಲ್ಲಿ ತೆಂಗು ಬೆಳೆಗಾರರು ಎರಡು ರೀತಿಯಲ್ಲಿ ನಷ್ಟವನ್ನು ಅನುಭವಿಸುತ್ತಿದ್ದಾರೆ. ಅಲ್ಪಸ್ವಲ್ಪ ಮಳೆಯಾಗಿ ಉಳಿದಿರುವ ಮರಗಳಿಂದ ಇಳುವರಿ ಕಡಿಮೆಯಾಗಿರುವುದು ಒಂದೆಡೆಯಾದರೆ, ಮರಗಳೇ ಹಳದಿ ರೂಪಕ್ಕೆ ತಿರುಗಿ ಸಂಪೂರ್ಣ ಒಣಗಿ ನಷ್ಟವಾಗಿರುವುದು ಇನ್ನೊಂದೆಡೆ. ಒಟ್ಟಾರೆ 63 ಸಾವಿರ ಹೆಕ್ಟೇರ್‌ನಲ್ಲಿ 40 ಸಾವಿರ ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಶೇ 50 ಕ್ಕೂ ಹೆಚ್ಚು ಬೆಳೆ ನಾಶವಾಗಿದೆ.

ಜಿಲ್ಲೆಯ ಸಾವಿರಾರು ರೈತರು ಇಂತಹ ಕಷ್ಟದಲ್ಲಿರುವಾಗ ರಾಜ್ಯ ಸರ್ಕಾರದ ನೇತೃತ್ವ ವಹಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲೆಗೆ ಭೇಟಿ ನೀಡಿದಾಗಲೂ ಈ ಬಗ್ಗೆ ಕಿಂಚಿತ್ತೂ ಗಮನ ಹರಿಸಲಿಲ್ಲ. ಇತ್ತಿಚೆಗೆ ಕೆಪಿಸಿಸಿ ಅಧ್ಯಕ್ಷರಾದ ಜಿ.ಪರಮೇಶ್‌ರವರು ಜಿಲ್ಲೆಗೆ ಭೇಟಿ ನೀಡಿ ತಮ್ಮ ಒಣ ಪ್ರತಿಷ್ಠೆಯ ರಾಜಕೀಯ ವೈಷಮ್ಯದ ಮಾತುಗಳನ್ನು ಆಡಿದ್ದು ಬಿಟ್ಟರೆ ಜಿಲ್ಲೆಯ ರೈತರ ಸಮಸ್ಯೆಗಳ ಬಗ್ಗೆ ಚಕಾರವೆತ್ತಲಿಲ್ಲ. ಜಿಲ್ಲೆಯಲ್ಲಿ ರಾಜಕೀಯವಾಗಿ ಪ್ರಾಬಲ್ಯವನ್ನು ಮೆರೆದಿರುವ ಜೆಡಿಎಸ್ ರಾಜ್ಯದ ಅಧಿಕೃತ ವಿರೋಧ ಪಕ್ಷವಾಗಿದ್ದರೂ ಈ ವಿಚಾರವನ್ನು ವಿಧಾನಸೌದದಲ್ಲಿ ಪ್ರಸ್ತಾಪಿಸಿ ಪರಿಹಾರ ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ನಡೆಸಲಿಲ್ಲ. ಜಿಲ್ಲೆಯ ಲೋಕಸಭಾ ಸದಸ್ಯರು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಈ ವಿಚಾರವನ್ನು ಕೇಂದ್ರ ಕೃಷಿ ಸಚಿವರೊಂದಿಗೆ ಚರ್ಚಿಸಿ ಅಲ್ಲಿಂದ ಒಂದು ತಂಡವನ್ನು ಕರೆಸಿ ಪರಿಶೀಲಿಸುವ ನಾಟಕವನ್ನು ಮಾಡಿದ್ದಾರೆ. ಆದರೆ ಇಲ್ಲಿಯ ರೈತರು ತಮ್ಮ ಸಮಸ್ಯೆಗಳನ್ನು ಎಲ್ಲರೂ ಅವರ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವುದನ್ನು ಕಂಡು ಬೇಸರಗೊಂಡಿದ್ದು ಕಲ್ಪವೃಕ್ಷವನ್ನೇ ನಂಬಿ ಬದುಕುತ್ತಿರುವವರು ತಮ್ಮ ಸಮಸ್ಯೆಗಳ ಶಾಶ್ವತ ಪರಿಹಾರಕ್ಕಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.

ತೆಂಗು ಇನ್ನಿತರೆ ಬೆಳೆಗಳಂತಲ್ಲ. ಅದರ ಸಸಿಯನ್ನು ನೆಟ್ಟು ಫಸಲಿಗಾಗಿ ಕನಿಷ್ಠ 10 ವರ್ಷ ಕಾಯಬೇಕು, ಮತ್ತು ಅದು ಈ ರೀತಿ



ನಾಶವಾದರೆ ತಕ್ಷಣದಲ್ಲಿಯೇ ಆ ಪ್ರದೇಶದಲ್ಲಿ ಪರ್ಯಾಯ ಬೆಳೆಯನ್ನು ಬೆಳೆಯಲು ಸಾಧ್ಯವಿಲ್ಲ ಇಂತಹ ಸಂದರ್ಭದಲ್ಲಿ ತೆಂಗಿನ ಅಧಾಯವನ್ನೇ ನಂಬಿ ಬದುಕುತ್ತಿರುವವರು, ಬೇರೆ ಯಾವ ಆಧಾಯವೂ ಇಲ್ಲದವರ ಪಾಡು ಹೇಳತೀರದಾಗಿದೆ. ತಮ್ಮ ಕೃಷಿ ಚಟುವಟಿಕೆಗಳಿಗೆ ಆಶ್ರಯವಾಗಲೆಂದು ಸಾಕಿಕೊಂಡಿದ್ದ ಜಾನುವಾರುಗಳನ್ನು ಉಳಿಸಿಕೊಳ್ಳಲಾಗದೆ ಮಾರಾಟ ಮಾಡಿದ್ದಾರೆ. ಇಂತಹ ಭೀಕರ ಪರಿಸ್ಥಿತಿ ಹಿಂದೆಂದು ಹಾಸನ ಜಿಲ್ಲೆಗೆ ಒದಗಿರಲಿಲ್ಲ ಎಂದು ಜನ ಮಾತನಾಡುತ್ತಿದ್ದಾರೆ. ಈ ಜಿಲ್ಲೆ ಪ್ರಾಕೃತಿಕವಾಗಿ ವಿಶಿಷ್ಟವಾದ ಜಿಲ್ಲೆ ಹೇಗೆಂದರೆ ಅರಸೀಕೆರೆ, ಚನ್ನರಾಯಪಟ್ಟಣ, ಅರಕಲಗೂಡು ತಾಲ್ಲೂಕುಗಳು ನಿತಂತರ ಮಳೆಯ ಅಭಾವದಿಂದ ಬರಕ್ಕೆ ತುತ್ತಾದರೆ ಇದೇ ಜಿಲ್ಲೆಯ ಹಾಸನ, ಸಕಲೇಶಪುರ, ಬೇಲೂರು ಆಲೂರು ತಾಲ್ಲೂಕುಗಳಲ್ಲಿ ಮಳೆ ಹೆಚ್ಚಾಗಿ ಅತಿವೃಷ್ಟಿಯಿಂದ ಆಲೂಗಡ್ಡೆ, ಶುಂಟಿ ಕಾಫಿ ಬೆಳೆಗಳು ಸಂಪೂರ್ಣ ನಾಶವಾಗಿದೆ.


ಜಿಲ್ಲೆಯಲ್ಲಿ ತೆಂಗು ಬೆಳೆಗಾರರ ಕುರಿತು ಮಾತನಾಡುವವರೆಲ್ಲ ಕೇರಳ ಮಾದರಿಯಲ್ಲಿ ಪರಿಹಾರ ನೀಡಬೇಕೆಂದು ಹೇಳುತ್ತಾರೆ ಆದರೆ ಕೇರಳ ಮಾದರಿ ಎಂದರೇನು? ಅಲ್ಲಿಯ ಸರ್ಕಾರ ಯಾವ ರೀತಿ ಪರಿಹಾರವನ್ನು ನೀಡುತ್ತಿದ್ದೆ ಮತ್ತು ನಷ್ಟವನ್ನು ಯಾವ ಮಾನದಂಡದ ಆಧಾರದಲ್ಲಿ ಗುರುತಿಸಲಾಗುತ್ತಿದೆ ಎಂಬುದು ಯಾರಿಗೂ ಗೊತ್ತಿಲ್ಲ. ಒಂದು ಮಾಹಿತಿಯ ಪ್ರಕಾರ ಕೇರಳ ಸರ್ಕಾರ ಒಂದು ಹೆಕ್ಟೇರ್‌ಗೆ 30 ಸಾವಿರ ರೂಪಾಯಿ ಪ್ಯಾಕೇಜ್ ಗೋಷಿಸಿದೆ ಎಂದು ತಿಳಿದು ಬಂದಿದೆ. ಮತ್ತೊಂದೆಡೆ ಕರ್ನಾಟಕ ಪ್ರಾಂತ ರೈತ ಸಂಘ ಒಂದು ಹೆಕ್ಟೇರ್‌ಗೆ ಕನಿಷ್ಟ 50 ಸಾವಿರ ಪರಿಹಾರ ನೀಡಬೇಕೆಂದು ಬೇಡಿಕೆಯಿಟ್ಟು ರಾಜ್ಯಾದ್ಯಂತ ಹೋರಾಟ ರೂಪಿಸುತ್ತಿದ್ದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಡಿಕೆ ನಾಶ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಬಾರಿ ಸುರಿದ ಭಾರಿ ಮಳೆಗೆ ಕಾಫಿ ಜೊತೆಗೆ ಅಡಿಕೆ ಬೆಳೆಯೂ ನೆಲ ಕಚ್ಚಿದೆ. ಮೊದಲೇ ಹಳದಿ ಎಲೆ ರೋಗದಿಂದ ತತ್ತರಿಸಿದ್ದ ಅಡಿಕೆ ಬೆಳೆಗಾರರು ಈಗ ಕೊಳೆ ರೋಗದಿಂದ ಮತ್ತಷ್ಟು ಕಂಗಾಲಾಗಿದ್ದಾರೆ. ಜಿಲ್ಲೆಯ ಮಲೆನಾಡು ಮತ್ತು ಬಯಲು ಸೀಮೆಗೆ ಅಡಿಕೆ ಪ್ರಮುಖ ಆರ್ಥಿಕ ಬೆಳೆಯಾಗಿದ್ದು ಜಿಲ್ಲೆಯಲ್ಲಿ ಸುಮಾರು 40,694 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಿದೆ. ಮಲೆನಾಡಿನ ಅತಿಯಾದ ಮಳೆಯಿಂದ ಕೊಳೆ ರೋಗ ಕಾಣಿಸಿ ಶೇ 50 ರಷ್ಟು ಬೆಳೆ ಹಾನಿಯಾದರೆ, ಕಡೂರು, ತರೀಕೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಬಯಲು ಸೀಮೆಯಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ಮಳೆ ಕೊರತೆಗೆ ಅಡಿಕೆ ಮರಗಳು ಸಂಪೂರ್ಣ ಒಣಗಿ ನಿಂತಿದ್ದು ಜಿಲ್ಲೆಯಲ್ಲಿ ಸುಮಾರು 14,111 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಸಂಪೂರ್ಣ ನಾಶವಾಗಿದೆ. ಮತ್ತೊಂದೆಡೆ ಮಲೆನಾಡಿನ ಪ್ರದೇಶವಾದ ಶೃಂಗೇರಿ, ಕೊಪ್ಪ, ಎನ್.ಆರ್.ಪುರ ತಾಲ್ಲೂಕುಗಳಲ್ಲಿ 75 ದಿನಗಳ ಕಾಲ ಎಡೆಬಿಡದೆ ಸುರಿದ ನಿರಂತರ ಮಳೆಯಿಂದ ಬಿಸಿಲನ್ನೇ ಕಾಣದೆ ಕೊಳೆರೋಗವನ್ನು ನಿಯಂತ್ರಸುವ ದ್ರಾವಣವನ್ನು ಸಿಂಪಡಿಸಲು ರೈತರಿಗೆ ಸಾಧ್ಯವಾಗಲಿಲ್ಲ.

ರಾಜ್ಯದಲ್ಲಿ ತೆಂಗು ಬೆಳೆಯಲ್ಲಿ ತುಮಕೂರು ಜಿಲ್ಲೆ ಮೊದಲ ಸ್ಥಾನದಲ್ಲಿದ್ದು, ಹಾಸನ ಎರಡನೇ ಸ್ಥಾನದಲ್ಲಿದ್ದು ಚಿತ್ರದುರ್ಗ ಮೂರನೇ ಸ್ಥಾನದಲ್ಲಿದ್ದು ಈ ಎಲ್ಲ ಪ್ರದೇಶಗಳಲ್ಲೂ ಮಳೆಯ ಅಭಾವದಿಂದ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿದ್ದು ತೆಂಗಿನ ಬೆಳೆ ವಿನಾಶದ ಹಂಚಿನಲ್ಲಿದೆ ಮತ್ತೊಂದೆಡೆ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ ಶಿವಮೊಗ್ಗ ಜಿಲ್ಲೆಗಳಲ್ಲಿ ಮಳೆ ಹೆಚ್ಚಾಗಿ ಅಲ್ಲಿಯ ಅಡಿಕೆ ಮತ್ತು ತೆಂಗಿಗೆ ನುಸಿ ಮತ್ತು ಕೊಳೆ ರೋಗದ ಬಾದೆ ಹೆಚ್ಚಾಗಿ ಅಲ್ಲಿಯ ರೈತರು ಭಾರೀ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ತೆಂಗು ಮತ್ತು ಅಡಿಕೆಯನ್ನು ರಕ್ಷಿಸಿ ರೈತರನ್ನು ಉಳಿಸಲು ಸರ್ಕಾರಗಳು ಕೂಡಲೇ ಕಾರ್ಯಪ್ರವೃತ್ತರಾಗಿ ಕೃಷಿ ತಜ್ಞರ ಸಲಹೆಗಳನ್ನು ಪಡೆದು ಅದರ ಬಗ್ಗೆ ಸಂಶೋಧನೆಗಳನ್ನು ನಡೆಸಿ ತೆಂಗು, ಅಡಿಕೆ, ಕೃಷಿಯನ್ನು ಉಳಿಸುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಈಗಾಗಲೇ ಬೆಳ ನಾಶದಿಂದ ನಷ್ಟಹೊಂದಿದ ರೈತರಿಗೆ ಸೂಕ್ತ ವೈಜ್ಞಾನಿಕ ಪರಿಹಾರವನ್ನು ಒದಗಿಸುವ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೂಡಲೇ ಕಾರ್ಯೋನ್ಮುಖವಾಗಬೇಕಾಗಿದೆ. •


24 ರಂದು ನಿಧನರಾದ ಮಧುರ ಕಂಠದ ಖ್ಯಾತ ಗಾಯಕ ಮನ್ನಾಡೇ (94 ವರ್ಷ) ಅವರಿಗೆ ಜನಶಕ್ತಿಯು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದೆ



ಮುಸ್ಲಿಮರಿಗೆ ಮೀಸಲಾತಿ, ಉಪಯೋಜನೆ ಅಗತ್ಯ

ಹಕ್ಕೊತ್ತಾಯ ಸಮಾವೇಶದಲ್ಲಿ ಪ್ರಕಾಶ್ ಕಾರಾಟ್

ವರದಿ: ವಾಸುದೇವ ಉಚ್ಚಿಲ್



ಮುಸ್ಲಿಂ ಅಲ್ಪಸಂಖ್ಯಾತರಿಗೆ ಶಿಕ್ಷಣದಲ್ಲೂ ಉದ್ಯೋಗದಲ್ಲೂ ರಂಗನಾಥ ಮಿಶ್ರಾ ವರದಿಯಂತೆ ಮೀಸಲಾತಿ ಜಾರಿಗೊಳಿಸಬೇಕು ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ಉಪಯೋಜನೆಗಳನ್ನು ಅಳವಡಿಸಬೇಕು ಎಂಬುದಾಗಿ ಶಿಫಾರಸು ಮಾಡಿದ ರಾಜೇಂದರ್ ಸಾಚಾರ್ ಆಯೋಗದ ಶಿಫಾರಸುಗಳನ್ನು ಶೀಘ್ರವೇ ಅನುಷ್ಠಾನಗೊಳಿಸಬೇಕು ಎಂಬುದಾಗಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳಾದ ಪ್ರಕಾಶ್ ಕಾರಾಟ್ ಆಗ್ರಹಿಸಿದರು.

ಅಕ್ಟೋಬರ್ 27 ರಂದು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿಯ ವತಿಯಿಂದ ಮಂಗಳೂರಿನಲ್ಲಿ ಆಯೋಜಿಸಲಾಗಿದ್ದ ಮುಸ್ಲಿಮರ ಹಕ್ಕೊತ್ತಾಯ ಸಮಾವೇಶವನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಅನೇಕ ವೈವಿಧ್ಯಗಳಿಂದ ಕೂಡಿದ ದೇಶ ನಮ್ಮದಾಗಿದೆ. ವಿವಿಧ ಭಾಷೆ, ಜಾತಿ. ಮತ, ಜನಾಂಗಗಳು ಇಲ್ಲಿದ್ದರೂ ಒಂದು ದೇಶವಾಗಿ ನಾವು ಇದ್ದೇವೆ. 1950 ರಿಂದ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿದ್ದರೂ, ಎಲ್ಲ ಮತಗಳ ಜನರೂ ಏಕರೀತಿಯ ಏಳಿಗೆಯನ್ನು ಹೊಂದಲು ಸಾಧ್ಯವಾಗಿಲ್ಲ; ಅಭಿವೃದ್ಧಿಯಲ್ಲಿ ಅಲ್ಪಸಂಖ್ಯಾತರಿಗೆ ನ್ಯಾಯವನ್ನು ಒದಗಿಸಲಾಗಿಲ್ಲ. 1950ರ ಪೂರ್ವದಿಂದಲೇ ಇದ್ದ ಜಾತಿಪದ್ಧತಿ, ಮತೀಯ ವೈಮನಸ್ಯಗಳು ಕೋಮುವಾದವು ಬೆಳೆದು ಬಂದಿದ್ದ ಹಿನ್ನೆಲೆಯಲ್ಲಿ, ಜಾತಿಮತಗಳ ಆಧಾರದಲ್ಲಿ ಉಂಟಾಗಿದ್ದ ತಾರತಮ್ಯವನ್ನು ನಿವಾರಿಸುವುದು ಸಾಧ್ಯವಾಗಲಿಲ್ಲ.

ಬಾಂಗ್ಲಾದಲ್ಲಿ ಮುಸ್ಲಿಮರ ಸಾಮಾಜಿಕ ಪರಿಸ್ಥಿತಿ ಭಾರತಕ್ಕಿಂತ ಉತ್ತಮ:

ಆರು ದಶಕಗಳಲ್ಲಿ ದೇಶದಲ್ಲಾದ ಆರ್ಥಿಕ, ಸಾಮಾಜಿಕ ಬದಲಾವಣೆಯನ್ನು ನೋಡುವಾಗ, 14% ರಷ್ಟಿರುವ ಮುಸ್ಲಿಂ ಜನವಿಭಾಗ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಹಿನ್ನಡೆ ಅನುಭವಿಸಿದೆ. ಶಿಕ್ಷಣವಿರಲಿ, ಉದ್ಯೋಗವಿರಲಿ, ಆರೋಗ್ಯ ಸೂಚಕಗಳೇ ಇರಲಿ, ಮುಸ್ಲಿಂ ಸಮುದಾಯವು ರಾಷ್ಟ್ರೀಯ ಸೂಚಕಗಳೊಂದಿಗೆ ಹೋಲಿಸಿದಾಗ ಸರಾಸರಿಯಲ್ಲಿ ಹಿಂದಕ್ಕೆ ಇದೆ ಎಂಬ ಅಂಶವನ್ನು ರಾಜೇಂದರ್ ಸಾಚಾರ್ ವರದಿ ಅಂಕಿಸಂಖ್ಯೆಗಳೊಂದಿಗೆ ಪ್ರಸ್ತುತಪಡಿಸಿದೆ. ಅದರಲ್ಲೂ ಮುಸ್ಲಿಂ ಮಹಿಳೆಯರು ವಿಶೇಷವಾಗಿ ಈ ಸಾಮಾಜಿಕ ಅಂಶಗಳಲ್ಲಿ ಹಿಂದುಳಿದಿದ್ದಾರೆ ಎಂಬುದನ್ನು ಇತರ ಅಧ್ಯಯನಗಳೂ ಸ್ಪಷ್ಟಪಡಿಸಿವೆ.

ಮುಸ್ಲಿಮರು ಶಿಕ್ಷಣ, ಉದ್ಯೋಗಗಳಲ್ಲಿ ಯಾಕೆ ಹಿಂದುಳಿದಿದ್ದಾರೆ? ಮುಸ್ಲಿಮರು ಹಿಂದುಳಿಯಲು ಅವರ ನಂಬಿಕೆಗಳು ಮತ್ತು ಧಾರ್ಮಿಕ ಆಚರಣೆಗಳೇ ಕಾರಣ ಎಂದು ಹೇಳಲಾಗುತ್ತಿದೆ. ಆದರೆ ಮುಸ್ಲಿಂ ಸಮುದಾಯವೇ ಪ್ರಧಾನವಾಗಿರುವ ಬಾಂಗ್ಲಾದೇಶದಲ್ಲಿ ಅವರ ಸಾಮಾಜಿಕ ಪ್ರಗತಿ ಭಾರತಕ್ಕಿಂತ ಉತ್ತಮವಾಗಿದೆ. ಆದುದರಿಂದ ಭಾರತದಲ್ಲಿ ಮುಸ್ಲಿಮರ ಆರ್ಥಿಕ, ಸಾಮಾಜಿಕ ಹಿನ್ನಡೆಗೆ ಸರಕಾರವು ಅನುಸರಿಸುತ್ತಿರುವ ನೀತಿಗಳೇ ಕಾರಣವಾಗಿವೆ. ಹೀಗಾಗಿ ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ ಪೂರಕವಾದ ಸಾಮಾಜಿಕ ವಾತಾವರಣ ನಿರ್ಮಿಸಬೇಕಾಗಿದೆ.

ಪರಿಶಿಷ್ಟ ಜಾತಿ ಪಂಗಡಗಳಿಗಿರುವಂತೆ ಮುಸ್ಲಿಮರಿಗೆ ಬೇಕು ಉಪಯೋಜನೆ:

ಭಾರತದ ಯಾವುದೇ ಪ್ರಮುಖ ನಗರ-ಕ್ಕೋ ಕಿರಿಯ ಪಟ್ಟಣಕ್ಕೋ ಹೋಗಿ ಅಲ್ಲಿ ಮುಸ್ಲಿಮರು ವಾಸಿಸುವ ಪ್ರದೇಶಗಳನ್ನು ನಾವು ಪರಿಶೀಲಿಸಿದ್ದಾದರೆ ಅಲ್ಲಿ ಸಾಕಷ್ಟು ನಾಗರಿಕ ಸೌಲಭ್ಯಗಳಿಲ್ಲ ಎಂಬುದನ್ನು ನಾವು ಗಮನಿಸಬಹುದು. ಶಾಲೆಗಳು, ಆರೋಗ್ಯ ಸೇವಾಲಭ್ಯತೆ ಇರುವುದಿಲ್ಲ. ಮುಸ್ಲಿಮರೇ ಹೆಚ್ಚಾಗಿ ವಾಸಿಸುತ್ತಿರುವ ಜಿಲ್ಲೆ, ತಾಲೂಕು, ಹೋಬಳಿಗಳಲ್ಲಿ ಈ ಅಂಶ ನಮಗೆ ಕಂಡು ಬರುತ್ತದೆ. ಈ ಎಲ್ಲ ಅಂಶಗಳನ್ನು ರಾಜೇಂದರ್ ಸಾಚಾರ್ ತಮ್ಮ ವರದಿಯಲ್ಲಿ ಕಾಣಿಸಿದ್ದು, ಪರಿಶಿಷ್ಟ ಜಾತಿ ಪಂಗಡಗಳ ಉಪಯೋಜನೆಗಳಂತೆ ನಿರ್ದಿಷ್ಟ ಪ್ರಮಾಣದಲ್ಲಿ ಸರಕಾರದ ವಿವಿಧ ಇಲಾಖೆ ಮತ್ತು ಕಾರ್ಯಕ್ರಮದಲ್ಲಿ ನಿಗದಿತ ಪ್ರಮಾಣದಲ್ಲಿ ಮುಸ್ಲಿಮರಿಗೇ ಅವಕಾಶಗಳನ್ನು ಸೃಷ್ಟಿಸುವಂಥ ಮುಸ್ಲಿಂ ಉಪಯೋಜನೆಯನ್ನು ಅಳವಡಿಸುವ ಪ್ರಸ್ತಾವನೆಗಳನ್ನು ಸೂಚಿಸಿದ್ದರು. ಸಾಚಾರ್ ವರದಿಯ ಪ್ರಸ್ತಾವನೆಗಳನ್ನು ಜಾರಿಗೊಳಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತಲೇ ಬಂದಿದೆ.ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ ಇರುವಾಗ ತಮ್ಮ ರಾಜ್ಯದಲ್ಲಿ ಮುಸ್ಲಿಮರಿಗೆ ವಿವಿಧ ಮೀಸಲಾತಿಯ ಪ್ರಸ್ತಾವನೆಯನ್ನು ಜಾರಿಗೊಳಿಸಲು ಅನುಮತಿಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರೂ, ಕೇಂದ್ರ ಸರ್ಕಾರ ಅದಕ್ಕೆ ಒಪ್ಪಿಗೆ ಕೊಟ್ಟಿರಲಿಲ್ಲ.

ಮುಸ್ಲಿಮರಿಗೆ ಶಿಕ್ಷಣ ಉದ್ಯೋಗದಲ್ಲಿ 10% ಮೀಸಲಾತಿ ಆಗ್ರಹ:



ಶಿಕ್ಷಣ ಹಾಗೂ ಉದ್ಯೋಗದ ಅತಿ ಮುಖ್ಯವಾದ ಪ್ರಶ್ನೆಯಲ್ಲಿ ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತರ ಬಗ್ಗೆ ರಂಗನಾಥ ಮಿಶ್ರಾ ಅವರು ಅಧ್ಯಯನ ಮಾಡಿ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ತನ್ನ ಪ್ರಥಮ ವರದಿಯಲ್ಲಿಯೇ ಮುಸ್ಲಿಂ ಅಲ್ಪಸಂಖ್ಯಾತರನ್ನು ಶೈಕ್ಷಣಿಕವಾಗಿ ಹಿಂದುಳಿದವರೆಂದು ಪರಿಗಣಿಸಿತು. ಮುಸ್ಲಿಂ ಅಲ್ಪಸಂಖ್ಯಾತರಿಗೆ ಶಿಕ್ಷಣದಲ್ಲೂ 10% ಹಾಗೂ ಉದ್ಯೋಗದಲ್ಲೂ 10% ನಿಗದಿಗೊಳಿಸಲು ಶಿಫಾರಸು ಮಾಡಿತ್ತು. ಇತರ ಧಾರ್ಮಿಕ ಅಲ್ಪಸಂಖ್ಯಾತರಿಗೆ 5% ಮೀಸಲಾತಿ ಸೂಚಿಸಿತು. 5 ವರ್ಷದೊಳಗಾಗಿ ಈ ವರದಿಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದ್ದರೂ, ಇನ್ನೂವರೆಗೆ ಏನೂ ಕ್ರಮ ಕೈಗೊಂಡಿಲ್ಲ.

ಕೇರಳ, ಕರ್ನಾಟಕ, ತಮಿಳುನಾಡು, ಪಶ್ಚಿಮ ಬಂಗಾಳಗಳಲ್ಲಿ ಅಲ್ಪಸಂಖ್ಯಾತರಿ ಹಿಂದುಳಿದಿರುವಿಕೆಯ ಮಾನದಂಡದ ಮೀಸಲಾತಿಗಳನ್ನು ಅಲ್ಲಿನ ಸರಕಾರಗಳ ನೀಡಿರುತ್ತವೆ. ಕೇಂದ್ರ ಸರ್ಕಾರ ಈ ಬಗ್ಗೆ ಒಂದು ದೃಢ ನಿರ್ಧಾರ ಕೈಗೊಂಡದ್ದಲ್ಲದೆ ರಾ ಮಟ್ಟದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾ ಏನೂ ಮಾಡಲು ಸಾಧ್ಯವಿಲ್ಲ. ಯಾವುದ ಮೀಸಲಾತಿಗಳು ಒಟ್ಟು ಅವಕಾಶಗಳ 50 ವನ್ನು ಮೀರುವಂತಿಲ್ಲ ಎಂಬ ಸುಪ್ರೀ ಕೋರ್ಟಿನ ಆದೇಶವೊಂದಕ್ಕೆ ಜೋತುಕೊಂಡ ಕೇಂದ್ರ ಸರ್ಕಾರ ನಿಷ್ಕ್ರಿಯವಾಗಿದೆ. ಸರ್ಕಾರ ಕ್ಕೆ ಇಚ್ಛಾಶಕ್ತಿ ಇದ್ದಲ್ಲಿ ದೇಶದ ಸಂವಿಧಾನ ಈ ಸಂಬಂಧವಾದ ತಿದ್ದುಪಡಿಯನ್ ತಂದು, ಅಲ್ಪಸಂಖ್ಯಾತರ ಮೀಸಲಾತಿ ಕ್ರಮ ಕೈಗೊಳ್ಳಬೇಕು. ರಂಗನಾಥ ಮಿಶ ವರದಿಯನ್ನು ಜಾರಿಗೊಳಿಸಲು ದೃಢವಾ ಇಚ್ಛಾಶಕ್ತಿ ಕೇಂದ್ರ ಸರ್ಕಾರಕ್ಕೆ ಇರುವುದಿಲ್ಲ.

ಅಲ್ಪಸಂಖ್ಯಾತರ ನಿಜವಾದ ಸಬಲೀಕರ ಆಗಬೇಕಾಗಿದೆ:

ಕಾಂಗ್ರೆಸ್ ಸರಕಾರ ಇಂಥ ದೃಢಕ್ರಮ ಕೈಗೊಳ್ಳಲು ಹೆದರುತ್ತಿದೆ. ಯಾಕೆಂದರೆ ಇದ ಅಲ್ಪಸಂಖ್ಯಾತರ ತುಷ್ಟೀಕರಣವಾಗುತ್ತ ಎಂದು ಬಿಜೆಪಿ ಮಾಡುವ ಆರೋಪಗಳ ತಾರ್ಕಿಕವಾಗಿ ಎದುರಿಸಲು ಕಾಂಗ್ರ ಸಮರ್ಥವಾಗಿಲ್ಲ. ಕಾಂಗ್ರೆಸ್ ಮಾತ್ರವ ಇತರೆಲ್ಲ ಸೆಕ್ಯುಲರ್ ರಾಜಕೀಯ ಪಕ್ಷಗಳು ತುಷ್ಟೀಕರಣ ಮಾಡುತ್ತಿವೆ ಎಂದು ಬಿಜೆ ಆರೋಪ. ಅಲ್ಪಸಂಖ್ಯಾತರ ಆಯ ವಿಭಾಗವನ್ನು ಓಲೈಸುವ ಕಾರ್ಯಕ್ರಮವನ್ ಕಾಂಗ್ರೆಸ್ ಮಾಡುತ್ತಲೇ ಬಂದಿರುವುದರಿಂದ ಸೆಕ್ಯುಲಾರ್ ಅಂದುಕೊಳ್ಳುವ ಕಾಂಗ್ರೆಸ್ ಪ ಮತಬ್ಯಾಂಕ್ ರಾಜಕಾರಣ ಮಾಡುತ್ತ ಎಂಬ ಬಿಜೆಪಿ ಆರೋಪಕ್ಕೆ ಸರಿಯಾ ಎದುರುತ್ತರ ನೀಡಲು ಅಸಮರ್ಥವಾಗಿದ ಕಾಂಗ್ರೆಸಿನ ಮತಬ್ಯಾಂಕ್ ರಾಜಕಾರಣ ಹಾಗು ಬಿಜೆಪಿಯ ಬಹುಸಂಖ್ಯಾತರ ತುಷ್ಟೀಕರಣ ಮಧ್ಯೆ ಮುಸ್ಲಿಂ ಸಮುದಾಯದ ಪ್ರಶ್ನೆಗಳ ಉಳಿದು ಹೋಗಿವೆ. ಮುಸ್ಲಿಂ ಸಮುದಾಯ ನಿಜವಾದ ಸಾಮಾಜಿಕ ಆರ್ಥಿ ಭದ್ರತೆಯನ್ನೂ, ನ್ಯಾಯವಾದ ರಾಜಕೀಯ ಹಕ್ಕುಗಳನ್ನೂ ಒದಗಿಸಿದಲ್ಲಿ ಮಾತ್ರ, ಸಮುದಾಯದ ಪ್ರಗತಿ ಸಾಧ್ಯ. ಆದ ಅದಕ್ಕೂ ಬಿಜೆಪಿ ಹಾಗೂ ಸಂಘಪರಿವಾ ಸಂಘಟನೆಗಳು ಅಡ್ಡಿಯಾಗಿವೆ. ಹಿಂದು ಬಹುಮತ ಗುಂಪಿನ ಈ ರಾಜಕಾರಣದ ಮುಸ್ಲಿಮರ ನಿಜವಾದ ರಾಜಕೀಯ ಹಕ್ಕುಗಳನ್ನು ಚಲಾಯಿಸಲು ಸಾಧ್ಯವಾಗುತ್ತಿ ಪ್ರಜಾಪ್ರಭುತ್ವ ಎಂದರೆ ಬಹುಸಂಖ್ಯಾತರ ಆಳ್ವ ಎಂದೇ ಬಲಪಂಥೀಯ ಸಂಘಟನೆಗಳ ಮತ್ತು ಪಕ್ಷಗಳು ಭಾವಿಸಿವೆ. ಮುಸ್ಲಿಮರನ ಎರಡನೆಯ ದರ್ಜೆ ಪ್ರಜೆಗಳ ಸತತವಾಗಿ ಬಿಂಬಿಸುವ ಪ್ರಯತ್ನಗಳನ ಅವು ಮಾಡುತ್ತಿವೆ. ಈ ಮೂಲಕ ಬಿಜೆ ಆರೆಸ್ಸೆಸ್‌ಗಳು ದೇಶವನ್ನು ಹಿಂದೂ ಬಹು ರಾಷ್ಟ್ರವನ್ನಾಗಿ ನಿರೂಪಿಸಲು ಪ್ರಯತ್ನಿಸುತ್ತಿ


ಮತನಿರಪೇಕ್ಷತೆಗೆ ನಿಜವಾದ ಬೆದರಿಕೆ ಹಿಂದು ಶಕ್ತಿಗಳಿಂದ:

ಭಾರತವನ್ನು ನಿಜವಾದ ಮತನಿರಪೇ ರಾಷ್ಟ್ರವನ್ನಾಗಿ ಮಾಡಬೇಕಾದುದು ನ ಕರ್ತವ್ಯ. ಇದಕ್ಕಾಗಿ ರಾಜ್ಯಾಡಳಿತದ ಧರ್ಮಾಚರಣೆಯನ್ನು ಪ್ರತ್ಯೇಕಿಸಬೇ ಕಾನೂನಿನ ಎದುರು ಎಲ್ಲರೂ ಸಮಾನರ ಎಂಬುದನ್ನು ನಾವು ನಿರೂಪಿಸಬೇಕಾಗುತ್ತ

ಜನಶಕ್ತಿ
ಕನ್ನಡ ವಾರಪತ್ರಿಕೆ

ಧುತನಿರಪೇಕ್ಷತೆಯಿಲ್ಲದೆ ಪ್ರಜಾಪ್ರಭುತ್ವ ಇರಲಾರದು. ಸೆಕ್ಯುಲರ್ ಪ್ರಭುತ್ವಕ್ಕೆ ನಿಜವಾದ ಬೆದರಿಕೆ ಸದ್ಯ ಇರುವುದು ಹಿಂದುತ್ವದ ಶಕ್ತಿಗಳಿಂದಲೇ. ಈ ಹಿಂದುತ್ವದ ಶಕ್ತಿಗಳು ಅಲ್ಪಸಂಖ್ಯಾಕರಿಗೆ ಬೆದರಿಕೆಯಾಗಿವೆ. ಕೋಮು ಸಂಘರ್ಷ ಹಾಗೂ ಕೋಮು ಧ್ರುವೀಕರಣವನ್ನು ಅವು ಪ್ರಚೋದಿಸುತ್ತವೆ.

ಕರ್ನಾಟಕದಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಹಿಂದುತ್ವದ ಶಕ್ತಿಗಳು ಹೇಗೆ ಅಲ್ಪಸಂಖ್ಯಾಕರನ್ನು ಪೀಡಿಸಿವೆ ಎಂಬುದನ್ನು ನಾವು ಅನುಭವಿಸಿದ್ದೇವೆ. ಜಾನುವಾರು ಹತ್ಯೆ ಸಂಬಂಧವಾಗಿ ಕರ್ನಾಟಕದಲ್ಲಿ ಮಾತ್ರವಲ್ಲ ಮಧ್ಯಪ್ರದೇಶ, ಹರ್ಯಾಣಗಳಲ್ಲೂ ಮುಸ್ಲಿಮರ ಮೇಲೆ ಧಾಳಿಗಳಾಗಿವೆ.



ಮಹಿಳೆ ಮತ್ತು ಹೆಮ್ಮಕ್ಕಳ ಪ್ರಶ್ನೆಗಳೂ ಕೋಮುವಾದಿ ಬಣ್ಣ ಪಡೆಯುತ್ತಿವೆ. ಗಂಡು–ಹೆಣ್ಣುಗಳ ಸ್ನೇಹಕ್ಕೂ ಅಡ್ಡಿ ಆತಂಕಗಳುಂಟಾಗಿವೆ. ಮಹಿಳೆಯನ್ನು ಸರಕು ಎಂದು ಪರಿಗಣಿಸುವ ಪಿತೃಪ್ರಧಾನ ಧೋರಣೆಗಳು ಕೋಮು ಉದ್ರೇಕ ಹುಟ್ಟಿಸುವುದಕ್ಕೂ, ಅಲ್ಪಸಂಖ್ಯಾಕರಿಗೆ ಕಿರುಕುಳ ನೀಡುವುದಕ್ಕೂ ಕಾರಣವಾಗಿವೆ. ಮುಜಾಫರ್‌ನಗರದಲ್ಲಿ ನಡೆದ ಒಂದು ಲೈಂಗಿಕ ಕಿರುಕುಳ ಮತೀಯ ಧಾಳಿಗಳಿಗೆ ಎಡೆ–ಕೊಟ್ಟು 50 ಮಂದಿಯ ಸಾವಿಗೂ, 40000 ಜನರ ಸ್ಥಳಾಂತರಕ್ಕೂ ಕಾರಣವಾಯಿತು. ಮಂಗಳೂರಿನಲ್ಲಿ ಗಂಡು–ಹೆಣ್ಣು ಮಕ್ಕಳು ಸ್ನೇಹ ಮಾಡಿದರೆ ಹಿಂದೂ ಕೋಮುವಾದಿ ಶಕ್ತಿಗಳು ದಾಳಿ ಮಾಡುವುದನ್ನು ನೋಡಿದ್ದೇವೆ. ಹಿಂದೂ ಕೋಮುವಾದಿ ಶಕ್ತಿಗಳು ಜನತೆ ಅದರಲ್ಲೂ ಅಲ್ಪಸಂಖ್ಯಾಕ ಜನತೆ ತಮ್ಮ ಪ್ರಜಾಸತ್ತಾತ್ಮಕ ಹಕ್ಕು ಸ್ವಾತಂತ್ರ್ಯಗಳನ್ನು ಚಲಾಯಿಸುವುದಕ್ಕೇನೇ ಅಡ್ಡಿಯಾಗಿವೆ. ನಿಜವಾದ ಪ್ರಜಾಪ್ರಭುತ್ವವಾದಿ ಶಕ್ತಿಗಳು ಇವನ್ನು ದೃಢವಾಗಿ ಎದುರಿಸಬೇಕಾಗಿದೆ.

ಕೋಮುಹಿಂಸಾ ನಿಯಂತ್ರಣ ಮಸೂದೆ ಜಾರಿ ಅಗತ್ಯ:

ಕೋಮುವಾದಿ ಶಕ್ತಿಗಳನ್ನು ನಿಗ್ರಹಿಸಿ ಕೋಮುಹಿಂಸೆಯನ್ನು ನಿಯಂತ್ರಣದಲ್ಲಿಡಲು ಕೇಂದ್ರವು ಸಿದ್ಧಪಡಿಸಿದ ಒಂದು ಮಸೂದೆಯನ್ನು ಕಾನೂನಾಗಿಸಲು 2011 ರಿಂದಲೇ ಸಿಪಿಐ(ಎಂ) ಪಕ್ಷ ಒತ್ತಾಯಿಸುತ್ತಾ ಬಂದಿದೆ. ಆ ಕಾನೂನೊಂದು ಜಾ–ರಿಯಾಗಿದ್ದರೆ, ಕೋಮುದಂಗೆಗಳ ಸಂತ್ರಸ್ತರಿಗೆ ಅವರು ಹೆಚ್ಚಾಗಿ ಅಲ್ಪಸಂಖ್ಯಾಕರೇ ಆಗಿರುವುದರಿಂದ ಪುನರ್ವಸತಿ ಹಾಗೂ ಪರಿಹಾರ ಒದಗಿಸುವುದು ಸಾಧ್ಯವಾಗುತ್ತಿತ್ತು. ಅದಿನ್ನೂ ಸಂಸತ್ತಿನಲ್ಲಿ ಅಂಗೀಕಾರವಾಗಿಲ್ಲ. ಈ ಮಧ್ಯೆ ಕೋಮುಸಂಘರ್ಷಗಳು ನಡೆದಿವೆ. ಅಲ್ಲಿ ಹೆಚ್ಚಾಗಿ ಸಂತ್ರಸ್ತರಾದವರು ಮುಸ್ಲಿಂ ಅಲ್ಪಸಂಖ್ಯಾಕರು. ಕಾನೂನೊಂದು ಇಲ್ಲದೆ ಇದ್ದುದರಿಂದ ಅವರು ಪರಿಹಾರಗಳನ್ನು ಪಡೆಯುವುದಾಗಲಿಲ್ಲ. ನಮ್ಮ ಪಕ್ಷದ ವತಿಯಿಂದ ಈಗಾಗಲೇ ಮುಜಾಫರನಗರದ ಸಂತ್ರಸ್ತರಿಗೆ 60 ಲಕ್ಷ ರೂಪಾಯಿ ಸಂಗ್ರಹಿಸಿ ಕೊಟ್ಟಿದ್ದೇವೆ. ಬೇರೆ ಯಾವ ರಾಜಕೀಯ ಪಕ್ಷದವರೂ ಈ ಬಗೆಯ ನಿಧಿ ಸಂಗ್ರಹಿಸಿ ನೀಡಿದ್ದು ಕಂಡು ಬರುವುದಿಲ್ಲ. ಹೋಗಲಿ

ರೆತಿದೆಯೇ? ಇಲ್ಲ. ಕಾನೂನೊಂದು ಇದ್ದಲ್ಲಿ ಕಡ್ಡಾಯವಾಗಿ ಸಂತ್ರಸ್ತರಿಗೆ ಪರಿಹಾರ ಲಭ್ಯವಾಗುತ್ತಿತ್ತು.

ಭಯೋತ್ಪಾದನೆಯ ಹೆಸರಿನಲ್ಲಿ ಮುಸ್ಲಿಂ ಅಮಾಯಕರು ಹಿಂಸೆ, ಬಂಧನಕ್ಕೊಳಗಾಗುವ ಮುಖ್ಯ ಪ್ರಶ್ನೆಯೊಂದಿದೆ. ಭಯೋತ್ಪಾದಕರಲ್ಲಿ ಮುಸ್ಲಿಮರೂ ಇದ್ದಾರೆ. ಹಿಂದೂಗಳೂ ಇದ್ದಾರೆ. ಮಾಲೇಗಾಂವ್ ಮೊದಲಾದೆಡೆ ಹಿಂದೂ ಭಯೋತ್ಪಾದಕರು ಮುಸ್ಲಿಮರ ಮೇಲೆ ನಡೆಸಿದ ದಾಳಿಗಳಿಗೆ ಸಾಕ್ಷ್ಯಗಳು ಲಭಿಸಿವೆ. ಆದರೆ ಹೆಚ್ಚಿನ ಭಯೋತ್ಪಾದಕ ದಾಳಿಗಳ ಸಂದರ್ಭದಲ್ಲಿ ಮುಸ್ಲಿಂ ಅಮಾಯಕ ಯುವಕರನ್ನು ಪೋಲೀಸರು ಬಂಧಿಸಿ ವಶದಲ್ಲಿರಿಸಿದ್ದಾರೆ. ಪ್ರಕರಣವೊಂದರಲ್ಲಿ ಒಬ್ಬ ಮುಸ್ಲಿಂ ಯುವಕನನ್ನು 14 ವರ್ಷಗಳ ಕಾಲ ಬಂಧನದಲ್ಲಿರಿಸಲಾಗಿತ್ತು. ಹೀನ ಅಪರಾಧಗಳಿಗೆ ನೀಡುವ ಜೀವಾವಧಿ ಶಿಕ್ಷೆಯೂ 14 ವರ್ಷ ಮೀರಿರುವುದಿಲ್ಲ. ಇಷ್ಟು ದೀರ್ಘಕಾಲವೂ ಅಪರಾಧಪಟ್ಟ ನ್ಯಾಯಾಲಯಕ್ಕೆ ಸಲ್ಲಿಸಿದೆ ನಿರ್ಬಂಧದಲ್ಲಿಡಲಾಗಿದೆ. ಹಲವು ಪ್ರಕರಣಗಳಲ್ಲಿ 5 ರಿಂದ 14 ವರ್ಷಗಳ ಕಾಲ ಕೆಲವರು ಯುವಕರನ್ನು ಬಂಧನದಲ್ಲಿರಿಸಿ, ಆ ಬಳಿಕ ಯಾವ ದೂರೂ ಇಲ್ಲವೆಂದೂ ಅಮಾಯಕರೆಂದೂ ಬಿಡುಗಡೆಮಾಡಲಾಗಿದೆ. ಇಂಥ ಹಲವರು ಮುಸ್ಲಿಂ ಯುವಕರ ಪ್ರಕರಣವನ್ನು ಉಲ್ಲೇಖಿಸಿ ನಾನು ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರ ಗಮನಕ್ಕೂ ತಂದಿದ್ದೇನೆ. ಬಿಡುಗಡೆಗೊಂಡ ಮೇಲೆ ಈ ಮುಗ್ಧ ಬಲಿಪಶುಗಳಿಗೆ ಯಾವ ಪರಿಹಾರವೂ ಸಿಗಲಿಲ್ಲ. ಇವರಿಗೆ ಪರಿಹಾರ ಕೊಡಬೇಕೆಂದೂ ಉದ್ಯೋಗ ಒದಗಿಸಬೇಕೆಂದೂ ನಾವು ಒತ್ತಾಯಿಸಿದೆವು. ಈ ಬಗೆಯ ನಡವಳಿಯನ್ನು ನಾವು ವಿರೋಧಿಸುತ್ತೇವೆ. ಇದನ್ನು ನಾವು ರಾಷ್ಟ್ರೀಯ ಏಕತಾ ಮಂಡಳಿಯಲ್ಲೂ ತುಂಬಾ ಒತ್ತಾಯಿಸಿದಾಗ, ಮುಗ್ಧ ನಿರಪರಾಧಿಗಳನ್ನು ಬಂಧಿಸಬಾರದೆಂದು ಕೇಂದ್ರದ ಗೃಹ ಸಚಿವರು ರಾಜ್ಯ ಸರಕಾರಗಳಿಗೆ ಪತ್ರ ಬರೆದರು. ಆದರೆ ಈ ಪತ್ರ ಬರೆದುದನ್ನೂ ಮುಸ್ಲಿಂ ಭಯೋತ್ಪಾಕರ ರಕ್ಷಣೆ ಎಂಬುದಾಗಿ ಬಿಜೆಪಿ ಬಡಪಡಿಸಿತು. ಇದೊಂದು ಅಸಂವಿಧಾನಿಕ ಕ್ರಮವೆಂದೂ ಆಕ್ಷೇಪಿಸಿತು. ಅಮಾಯಕ ಯುವಕರು ಹತ್ತಾರು ವರ್ಷ ಜೈಲಿನಲ್ಲಿರುವುದನ್ನು ಬಿಜೆಪಿ ಯಾಕೆ ವಿರೋಧಿಸುವುದಿಲ್ಲ? ನಮ್ಮ ಪಕ್ಷವಾದರೋ, 5 ವರ್ಷಕ್ಕಿಂತ ಹೆಚ್ಚಿಗೆ ಜೈಲಿನಲ್ಲಿ ಕಳೆದು ಭಯೋತ್ಪಾದನಾ ದೂರುಗಳಿಂದ ಮುಕ್ತರಾಗಿರುವ ಮುಸ್ಲಿಮರ ಪಟ್ಟಿಯನ್ನು ತಯಾರಿಸಲಿದೆ; ಮತ್ತು ಇವರುಗಳ ಪ್ರಕರಣದಲ್ಲಿ ಭದ್ರತಾ ಸಂಸ್ಥೆಗಳನ್ನು ಪ್ರಮಾದಗಳಿಗೆ ಹೊಣೆಗಾರರಾಗಿ ಮಾಡುವಂತೆ ಬಂಧಿತರಿಗೆ ಯೋಗ್ಯ ಪರಿಹಾರ ಹಾಗೂ ಪುನರ್ವಸತಿಯನ್ನು ಒದಗಿಸುವಂತೆ ಒಂದು ವರದಿಯನ್ನು ರಾಷ್ಟ್ರಾಧ್ಯಕ್ಷರಿಗೆ ಸಲ್ಲಿಸಲಿದ್ದೇವೆ.

ಮುಸ್ಲಿಮರಿಗೆ ಆಗಬೇಕಾದುದೇನು?

ಎಲ್ಲ ಅಲ್ಪಸಂಖ್ಯಾಕ ಮುಸ್ಲಿಂ ಯುವಕರಿಗೆ ಶಿಕ್ಷಣ, ಉದ್ಯೋಗದ ಅವಕಾಶಗಳಿರಬೇಕು. ಕಾರಣವಿಲ್ಲದೆ ಅಮಾಯಕ ಯುವಕರನ್ನು ಬಂಧಿಸಬಾರದು. ಆರೋಪರಹಿತ ಮುಗ್ಧ ಬಂಧಿತರು ಬಿಡುಗಡೆಗೊಂಡಾಗ, ಪರಿಹಾರವಾಗಿ ಅವರಿಗೆ ಉದ್ಯೋಗವನ್ನು ಒದಗಿಸಬೇಕು. ಇದು ನಮ್ಮ ಬೇಡಿಕೆಯಾಗಿದೆ. ಹೀಗೆಂದು ಪ್ರಕಾಶ್ ಕಾರಾಟ್ ಸ್ಪಷ್ಟವಾಗಿ ತಮ್ಮ ವಿಚಾರಗಳನ್ನು ಮಂಡಿಸಿದರು.

ಮುಸ್ಲಿಂ ಸಮುದಾಯದಿಂದ ಅಪೂರ್ವ ಸ್ಪಂದನೆ:

ಸಿಪಿಐ(ಎಂ) ಪಕ್ಷ ಮುಸ್ಲಿಂ ಸಮುದಾಯದ ಹಕ್ಕೊತ್ತಾಯ ಸಮಾವೇಶವನ್ನು ಏರ್ಪಡಿಸಿದ್ದು ಹಾಗೂ ಅದರಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯವರಾದ ಪ್ರಕಾಶ್ ಕಾರಾಟ್ ಅವರೇ ಭಾಗವಹಿಸುವರು ಎಂಬುದು ದ.ಕ. ಜಿಲ್ಲೆಯಲ್ಲಿ ಮುಸ್ಲಿಂ ಸಮುದಾಯದ ಮಧ್ಯೆ ವಿಶೇಷವಾದ ಕಾತರವನ್ನುಂಟುಮಾಡಿತ್ತು ಎನ್ನುವುದಕ್ಕೆ ಸಾಕ್ಷಿಯಾದುದು ಭಾನುವಾರ ನಡೆದ ಸಭೆಯಲ್ಲೂ ಸಭಾಂಗಣ ತುಂಬಿ ತುಳುಕಿದ್ದು. 550 ಜನ ಸ್ಥಳಾವಕಾಶದ ಸಭಾಂಗಣದಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಮುಸ್ಲಿಂ ಅಲ್ಪಸಂಖ್ಯಾಕರು ಇದೇ ಪ್ರಥಮವಾಗಿ ಸಿಪಿಐ(ಎಂ)ನ ಸಭೆಯಲ್ಲಿ ಭಾಗವಹಿಸಿದ್ದರು.

ಖ್ಯಾತ ಲೇಖಕಿ ಸಾರಾ ಅಬುಬಾಕರ್ ಹಾಗೂ ನಿವೃತ್ತ ಡಿವೈಎಸ್ಪಿ ಹಾಗೂ ಸಾಮಾಜಿಕ ಕಾರ್ಯಕರ್ತ ಟಿ.ಸಿ.ಎಮ್.ಶರೀಫ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಕೂಡಾ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಮಿತಿ ಸದಸ್ಯರಾದ ಕೆ.ಎನ್.ಉಮೇಶ್, ಸೈಯ್ಯದ್ ಮುಜೀಬ್ ಹಾಗೂ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು ಕೂಡಾ ವೇದಿಕೆ ಮೇಲಿದ್ದರು.

ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಮುನೀರ್ ಕಾಟಿಪಳ್ಳ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಸಂತ ಆಚಾರಿ ಸ್ವಾಗತಿಸಿ, ಸುನಿಲ್ ಕುಮಾರ್ ಬಜಾಲ್ ಧನ್ಯವಾದ ಸಲ್ಲಿಸಿದರು.

ಸಭಿಕರೊಂದಿಗೆ ನಡೆದ ಪ್ರಶ್ನೋತ್ತರದಲ್ಲಿ ಸಭಿಕರಿಂದ ಬರಹ ಮೂಲಕ ಬಂದ ಏಳು ಪ್ರಶ್ನೆಗಳಿಗೆ ಪ್ರಕಾಶ್ ಕಾರಾಟ್ ಸಮಂಜಸ ವಿತರಣೆ ನೀಡಿದರು.

ಸಮಾವೇಶದ ನಿರ್ಣಯಗಳು:

ಕೋಮುಹಿಂಸೆ ಮತ್ತು ನೈತಿಕ ಪೋಲೀಸ್ ಗಿರಿಯನ್ನು ತಡೆಗಟ್ಟಬೇಕು. ಮುಸ್ಲಿಂ ಸಮುದಾಯಕ್ಕೆ ಶಿಕ್ಷಣದಲ್ಲಿ ಆದ್ಯತೆ ನೀಡಬೇಕು. ವಕ್ಫ್ ಆಸ್ತಿ ಕೈತಪ್ಪಿ ಹೋಗದಂತೆ ಸಂರಕ್ಷಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಸರ್ಕಾರಿ ಉದ್ಯೋಗದಲ್ಲಿ ಮುಸ್ಲಿಮರಿಗೆ ಮೀಸಲಾತಿ ನೀಡಬೇಕು. ಮುಸ್ಲಿಮರ ಆಹಾರದ ಹಕ್ಕನ್ನು ರಕ್ಷಿಸುವ ಸಲುವಾಗಿ ಜಾನುವಾರು ಸಾಗಣೆದಾರರ ಮೇಲಿನ ದಾಳಿಯನ್ನು ತಡೆಗಟ್ಟಬೇಕು ಎಂಬ ಐದು ನಿರ್ಣಯಗಳನ್ನು ಸಮಾವೇಶದಲ್ಲಿ ಅಂಗೀಕರಿಸಲಾಯಿತು.

ಧರ್ಮಸ್ಥಳ ಸೌಜನ್ಯ ಮನೆಗೆ ಪ್ರಕಾಶ್ ಕಾರಾಟ್ ಭೇಟಿ:



ಮಂಗಳೂರಿನ ಸಮಾವೇಶದ ಬಳಿಕ, ವರ್ಷದ ಹಿಂದೆ ಧರ್ಮಸ್ಥಳದಲ್ಲಿ ಅತ್ಯಾಚಾರ ಮತ್ತು ಕೊಲೆಗೀಡಾಗಿದ್ದ ವಿದ್ಯಾರ್ಥಿನಿ ಸೌಜನ್ಯಳ ಮನೆಗೆ ಪ್ರಕಾಶ್ ಕಾರಾಟ್ ಭೇಟಿ ನೀಡಿ ಆಕೆಯ ಹೆತ್ತವರಿಗೆ ಸಾಂತ್ವಾನ ಹೇಳಿದರು.

ರಾಜ್ಯ ಸರ್ಕಾರ ನಡೆಸುತ್ತಿರುವ ತನಿಖೆ ಯಾವ ತಾರ್ಕಿಕ ಅಂತ್ಯಕ್ಕೂ ಬದಲಾಗದು, ಸರಿಯಾದ ತನಿಖೆ ಕೇಂದ್ರದಿಂದಲೇ ನಡೆಯಬೇಕಿದೆ ಎಂಬುದಾಗಿ ಬಳಿಕ ಅವರು ಹೇಳಿದರು. ಸಿಬಿಐ ತನಿಖೆಗಾಗಿ ರಾಜ್ಯ ಸರ್ಕಾರ ಆದೇಶಿಸುವ ಬಗ್ಗೆ ಕಾರಾಟ್ ಅಪನಂಬಿಕೆ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರವು ನ್ಯಾಯಯುತ ತನಿಖೆ ಮಾಡುವಂತೆ ಕೇಂದ್ರವು ಒತ್ತಡ ಹಾಕುವಂತೆ ತಾನು ಕೇಂದ್ರವನ್ನು ಬೆನ್ನುಹಿಡಿಯುವುದಾಗಿ ಅವರು ಹೇಳಿದರು.



ಕೋಮುವಾದದ ವಿರುದ್ಧ ಜನತೆಗೆ ಐಕ್ಯತೆಯ ಸ್ಪಷ್ಟ ಸಂದೇಶ

ಅಕ್ಟೋಬರ್ 30 ರಂದು ನವದೆಹಲಿಯಲ್ಲಿ ನಡೆದ ಕೋಮುವಾದದ ವಿರುದ್ಧ ಜನತೆಯ ಐಕ್ಯತೆಯ ರಾಷ್ಟ್ರೀಯ ಸಮಾವೇಶ ಇಡೀ ದೇಶದ ಗಮನ ಸೆಳೆದಿದೆ. 14 ರಾಜಕೀಯ ಪಕ್ಷಗಳ ಮುಖಂಡರು ಮತ್ತು ಪ್ರತಿನಿಧಿಗಳಲ್ಲದೆ ವಿವಿಧ ಪ್ರತಿಷ್ಠಿತ ಬುದ್ಧಿಜೀವಿಗಳು ಭಾಗವಹಿಸಿದ ಈ ಸಮಾವೇಶದಲ್ಲಿನ ಭಾಷಣಗಳು ಆರೆಸ್ಸೆಸ್/ಬಿಜೆಪಿ ಹರಡುತ್ತಿರುವ ಸುಳ್ಳು ಮಾಹಿತಿಗಳು ಮತ್ತು ಘಾತಕ ಅಪಪ್ರಚಾರಗಳನ್ನು ಬಯಲಿಗೆಳೆದವು. ವಿಶೇಷವಾಗಿ ಸರ್ದಾರ್ ಪಟೇಲರ ಉತ್ತಾರಾಧಿಕಾರವನ್ನು ಕಬಳಿಸುವ ಅವರ ಇತ್ತೀಚಿನ ಪ್ರಯತ್ನದ ಹೂರಣವನ್ನು. ನಮ್ಮ ದೇಶದ ಭವಿಷ್ಯಕ್ಕೇ ಸಂಚಕಾರ ತರುತ್ತಿರುವ ಕೋಮುವಾದದ ವಿರುದ್ಧ ಜನತೆಯ ಐಕ್ಯತೆಯನ್ನು ಬಲಗೊಳಿಸಲಾಗುವುದು ಎಂದು ತುಂಬಿ ತುಳುಕುತ್ತಿದ್ದ ತಲ್ಕತೋರಾ ಸಭಾಂಗಣದಿಂದ ಹೊಮ್ಮಿರುವ ಸಂದೇಶ ದೇಶದ ಉದ್ದಗಲಕ್ಕೂ ವ್ಯಾಪಿಸಲಿದೆ

ಕೋಮುವಾದದ ವಿರುದ್ಧ ಜನತೆಯ ಐಕ್ಯತೆಗೆ ಕರೆ ಕೊಡುವ ಅತ್ಯಂತ ಯಶಸ್ವಿ ಸಮಾವೇಶ ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ರಕ್ಷಿಸಬೇಕೆನ್ನುವ ಒಂದು ಸ್ಪಷ್ಟ ಮತ್ತು ನೇರ ಕರೆಯನ್ನು ಕೊಟ್ಟಿದೆ. ಈ ಸ್ವರೂಪದ ಮೇಲೆ ಕೋಮುವಾದಿ ಶಕ್ತಿಗಳು ನಿರಂತರ ದಾಳಿ ನಡೆಸುತ್ತಿದ್ದಾರೆ. ದೇಶದ ಪ್ರಗತಿಗೆ ಮತ್ತು ಜನತೆಯ ಕಲ್ಯಾಣಕ್ಕೆ ಅಗತ್ಯವಾದ ಒಂದು ಪರ್ಯಾಯ ದಿಕ್ಕಿನಲ್ಲಿ ಸಾಗಬೇಕಾದರೆ ಈ ದಾಳಿಗಳಿಂದ ನಮ್ಮ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ರಕ್ಷಿಸಿಕೊಳ್ಳಲೇ ಬೇಕು.

ಸಮಾವೇಶದಲ್ಲಿ ಭಾಗವಹಿಸಿದ 14 ರಾಜಕೀಯ ಪಕ್ಷಗಳ ಮುಖಂಡರು ಮತ್ತು ಪ್ರತಿನಿಧಿಗಳಲ್ಲದೆ ವಿವಿಧ ಪ್ರತಿಷ್ಠಿತ ಬುದ್ಧಿಜೀವಿಗಳು ಕೂಡ ಈ ಸಮಾವೇಶದ ಗುರಿಸಾಧನೆಯಲ್ಲಿ ಜತೆಗೂಡಿದ್ದಾರೆ. ದೇಶದ ಸುಪ್ರಸಿದ್ಧ ಚರಿತ್ರೆಕಾರರು ಮತ್ತು ಪ್ರಕಾಂಡ ವಿದ್ವಾಂಸರೂ ಆದ ಪ್ರೊ. ಇರ್ಫಾನ್ ಹಬೀಬ್ ಅವರೇ ಈ ಸಮಾವೇಶವನ್ನು ಉದ್ಘಾಟಿಸಿದರು. 'ಭಾರತ ಎಂಬ ವಿಚಾರ'ದ ಅನನ್ಯ ವಿಕಾಸ ಮತ್ತು ಬೆಳವಣಿಗೆಯನ್ನು ಕುಂಠಿತಗೊಳಿಸಲು ಕೋಮುವಾದಿ ಶಕ್ತಿಗಳಿಗೆ ಅವಕಾಶ ಕೊಡಬಾರದು ಎಂಬ ಸಂದೇಶವನ್ನು ನೀಡಿದೆ.

ಹುಮ್ಮಸ್ಸು ತುಂಬಿದ್ದ ಸಮಾವೇಶ

ಕೋಮುವಾದದ ವಿರುದ್ಧ ಜನತೆಯ ಐಕ್ಯತೆಯ ಈ ಕರೆಯನ್ನು ದೇಶಾದ್ಯಂತ ಮುಂದೊಯ್ಯಬೇಕು ಎಂಬುದು ಈ ಸಮಾವೇಶದ ಗಟ್ಟಿಯಾದ, ಸ್ಪಷ್ಟವಾದ ಸಂದೇಶ. ಇದಕ್ಕಾಗಿ ಸಮಾವೇಶಗಳು ಮತ್ತು ಇತರ ರೀತಿಗಳಲ್ಲಿ ಜನಗಳನ್ನು ಸಾಮೂಹಿಕವಾಗಿ ಅಣಿನೆರೆಸಬೇಕಾಗಿದೆ. ಸಮಾವೇಶ ಅಂಗೀಕರಿಸಿದ ನಿರ್ಣಯ ಇಂತಹ ಒಂದು ಕರೆಯನ್ನು ನೀಡಿದೆ. ಇದನ್ನು ಸಮಾವೇಶದಲ್ಲಿ ಭಾಗವಹಿಸಿದ್ದ ಎಲ್ಲ ಪಕ್ಷಗಳು, ಜತೆಗೆ ತಲ್ಕತೋರ ಸಭಾಂಗಣದಲ್ಲಿ ತುಂಬಿದ್ದ ಸಭಿಕರು ಅತ್ಯಂತ ಹುಮ್ಮಸ್ಸಿನಿಂದ ಒಂದಲ್ಲ, ಎರಡೂ ಕೈಗಳನ್ನೆತ್ತಿ ಅನುಮೋದಿಸಿದರು.

ಅಷ್ಟೇ ಅಲ್ಲ, ಸಮಾವೇಶ ನಡೆ-ಯುತ್ತಿದ್ದಾಗ ದೇಶದ ಎಲ್ಲೆಡೆಗಳಿಂದ ವಿವಿಧ ಪಕ್ಷಗಳಿಂದ, ಗುಂಪುಗಳಿಂದ ಸಂದೇಶಗಳು ಬರುತ್ತಲೇ ಇದ್ದವು. ಮುಂದೆ ತಾವೂ ಈ ಪ್ರಚಾರದಲ್ಲಿ ಸಹಯೋಗ ನೀಡುವ ಇಚ್ಛೆಯನ್ನು ವ್ಯಕ್ತಪಡಿಸುವ ಸಂದೇಶಗಳವು. ಯುಪಿಎ ಮಿತ್ರಪಕ್ಷಗಳಲ್ಲಿ ಒಂದಾದ ಎನ್‌ಸಿಪಿ ಸಮಾವೇಶದಲ್ಲಿ ಹಾಜರಿದ್ದದ್ದು, ಈ ಸಮಾವೇಶದಲ್ಲಿ ಪ್ರತಿನಿಧಿಸಿದ್ದ ಪಕ್ಷಗಳ ಪಟ್ಟಿ 'ಮುಚ್ಚಿದ ಪಟ್ಟಿ'ಯಲ್ಲ, ಭವಿಷ್ಯದಲ್ಲಿ ಬಹುಮಟ್ಟಿಗೆ ದೊಡ್ಡದಾಗುತ್ತ ಹೋಗಲಿರುವ ಪಟ್ಟಿ ಎಂಬ ಸಂದೇಶವನ್ನೂ ನೀಡಿದೆ. ಎರಡು ಅತ್ಯಂತ ಹೆಚ್ಚು ಜನಸಂಖ್ಯೆಯ ಎರಡು ರಾಜ್ಯಗಳ-ಉತ್ತರಪ್ರದೇಶ ಮತ್ತು ಬಿಹಾರದ- ಈಗ ಸರಕಾರ ನಡೆಸುತ್ತಿರುವ ಪ್ರಾದೇಶಿಕ ಪಕ್ಷಗಳ ಪ್ರತಿನಿಧಿಗಳು, ಹಾಗೆಯೇ ಇನ್ನೆರಡು ಮಹತ್ವದ ರಾಜ್ಯಗಳ-ಒಡಿಶಾ ಮತ್ತು ತಮಿಳುನಾಡು- ಪ್ರತಿನಿಧಿಗಳು ಮುಂಬರುವ ದಿನಗಳಲ್ಲಿ ಇಂತಹ ಐಕ್ಯತೆಯನ್ನು ಬಲಗೊಳಿಸುವ ಕರೆಗಳನ್ನು ಹುಮ್ಮಸ್ಸಿನಿಂದ ನೀಡಿರುವುದು ಕೂಡ ಇದನ್ನು ಇನ್ನಷ್ಟು ದೃಢಪಡಿಸಿದೆ.


ಈ ಸಮಾವೇಶ ಭಾರತೀಯ ಸಾಮಾಜಿಕ ಹಂದರದ ಶ್ರೀಮಂತ ವೈವಿಧ್ಯತೆಯನ್ನು ಮತ್ತು ಬಹುತ್ವವನ್ನು ಬಿಂಬಿಸಿತು. ಅಸ್ಸಾಂನ ಹಿಂದಿನ ಆಳುವ ಪಕ್ಷ ಅಶೊಂ ಗಣ ಪರಿಷತ್‌ನಿಂದ ಹಿಡಿದು ಝಾರ್ಖಂಡ್‌ನ ಮಾಜಿ ಮುಖ್ಯಮಂತ್ರಿಯ ವರೆಗೆ, ಅಲ್ಲಿ ಹಾಜರಿದ್ದ ಎಲ್ಲ ಮುಖಂಡರು ನಮ್ಮ ದೇಶದ ಸಮ್ಮಿಶ್ರ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸಿದರು. ಈ ಸಮಾವೇಶ ಭಾರತದ ವೈವಿಧ್ಯತೆಯನ್ನು ಮಾನ್ಯ ಮಾಡಿದ್ದಷ್ಟೇ ಅಲ್ಲ, ಈ ವೈವಿಧ್ಯತೆಯಲ್ಲಿ ಹಾಸುಹೊಕ್ಕಾಗಿರುವ ಏಕತೆಯ ಬಂಧಗಳ ಆಧಾರದಲ್ಲಿ ಒಂದು ಐಕ್ಯ ಮತ್ತು ಸಮೃದ್ಧ ಭಾರತವನ್ನು ಕಟ್ಟುವ ಸಂದೇಶವನ್ನು ಈ ಮೂಲಕ ಬಿತ್ತರಿಸಿದೆ.

ಬಯಲಾದ ಕೋಮುವಾದಿ ಅಪಪ್ರಚಾರ

ಈ ಸಮಾವೇಶದಲ್ಲಿನ ಭಾಷಣಗಳು ಆರೆಸ್ಸೆಸ್/ಬಿಜೆಪಿ ಹರಡುತ್ತಿರುವ ಸುಳ್ಳು ಮಾಹಿತಿಗಳು ಮತ್ತು ಘಾತಕ ಅಪಪ್ರಚಾರಗಳನ್ನು ಬಯಲಿಗೆಳೆದವು. ಉದಾಹರಣೆಗೆ, ಭಾರತದ ಉಕ್ಕಿನ ಮನುಷ್ಯನೆನಿಸಿದ ಸರ್ದಾರ್ ಪಟೇಲರ ಉತ್ತರಾಧಿಕಾರವನ್ನು ಕಬಳಿಸುವ ಆರೆಸ್ಸೆಸ್/ಬಿಜೆಪಿ ಪ್ರಯತ್ನಗಳನ್ನು ಆಮೂಲಾಗ್ರವಾಗಿ ಬಯಲಿಗೆಳೆಯಲಾಯಿತು. ಇದು ಬೃಹತ್ ಸ್ವರೂಪದ ರಾಷ್ಟ್ರೀಯ ಆಂದೋಲನದಿಂದ ಉದ್ದೇಶಪೂರ್ವಕವಾಗಿಯೇ ದೂರ ನಿಂತಿದ್ದ ಆರೆಸ್ಸೆಸ್ ಈಗ ಹೇಗಾದರೂ ಸ್ವಾತಂತ್ರ್ಯ ಆಂದೋಲನದೊಂದಿಗೆ ಕೊಂಡಿ ಬೆಸೆಯಲು ಮಾಡುತ್ತಿರುವ ಕಳ್ಳತನದ ಪ್ರಯತ್ನ ಎಂಬುದನ್ನು ತೋರಿಸಿ ಕೊಡಲಾಯಿತು.

ಮಹಾತ್ಮ ಗಾಂಧಿಯವರ ಹತ್ಯೆಯ ನಂತರ ಆರೆಸ್ಸೆಸ್ ಅನ್ನು ನಿಷೇಧಿಸಿದವರು ಇದೇ ಸರ್ದಾರ್ ಪಟೇಲರು ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ. "ಸಂಘದ ಆಕ್ಷೇಪಕಾರಕ ಮತ್ತು ಹಾನಿಕಾರಕ ಚಟುವಟಿಕೆಗಳು ನಿಲ್ಲದೆ ಸಾಗಿವೆ ಮತ್ತು ಸಂಘದಿಂದ ಪ್ರಾಯೋಜಿತವಾದ ಮತ್ತು ಪ್ರೇರಿತವಾದ ಹಿಂಸೆಯ ಪಂಥ ಹಲವಾರು ಬಲಿಗಳನ್ನು ಪಡೆದಿದೆ. ಇತ್ತೀಚಿನ ಮತ್ತು ಅತ್ಯಂತ ಅಮೂಲ್ಯವಾದ ಬಲಿಯೆಂದರೆ ಸ್ವತಃ ಗಾಂಧೀಜಿಯವರೇ" ಎನ್ನುತ್ತ ಆರೆಸ್ಸೆಸ್ ಮೇಲೆ ನಿಷೇಧವನ್ನು ಪ್ರಕಟಿಸಿದ ಫೆಬ್ರುವರಿ 4, 1948ರ ಸರಕಾರೀ ಪ್ರಕಟಣೆಯ ಕರಡು ತಯಾರಿಸಿದವರು ಸ್ವತಃ ಸರ್ದಾರ್ ಪಟೇಲ್‌ರವರೇ.

ಹೀಗಿರುವಾಗ ತಾವೇ ಸರ್ದಾರ್ ಪಟೇಲರ ಉತ್ತರಾಧಿಕಾರಿಗಳು ಎಂದು ಹೇಗೆ ಹೇಳಿಕೊಳ್ಳುತ್ತಾರೋ ಅವರಿಗೇ ಗೊತ್ತು. ನವಂಬರ್ 14, 1948ರಂದು ಪಟೇಲರ ಅಡಿಯಿದ್ದ ಗೃಹ ಇಲಾಖೆ ಆರೆಸ್ಸೆಸ್



ಜನಶಕ್ತಿ
ಕನ್ನಡ ವಾರಪತ್ರಿಕೆ

ಮುಖ್ಯಸ್ಥ ಗೋಲ್ವಾಲ್ಕರ್‌ರೊಂದಿಗೆ ನಡೆದ ಮಾತುಕತೆಗಳ ಕುರಿತು ಒಂದು ಪತ್ರಿಕಾ ಟಿಪ್ಪಣಿ ಪ್ರಕಟಿಸಿತು. ಈ ಮಾತುಕತೆಗಳಲ್ಲಿ ಗೋಲ್ವಾಲ್ಕರ್ ಅನೇಕ ಮೋಸದ ರಾಜಿಗಳನ್ನು ಮುಂದಿಟ್ಟಿದ್ದರು. "ಆರೆಸ್ಸೆಸ್ ಮುಖಂಡರ ಪ್ರತಿಪಾದನೆಗಳಿಗೂ, ಅವರ ಹಿಂಬಾಲಕರ ಆಚರಣೆಗಳಿಗೂ ಯಾವುದೇ ಸಾಂಗತ್ಯವಿಲ್ಲ" ಎನ್ನುತ್ತ ಈ ಟಿಪ್ಪಣಿ ಆರೆಸ್ಸೆಸ್ ಮೇಲಿನ ನಿಷೇಧವನ್ನು ಹಿಂತೆಗೆದುಕೊಳ್ಳು ನಿರಾಕರಿಸಿತ್ತು. ಇನ್ನೊಂದು ಭೇಟಿಗೆ ಅವಕಾಶ ನೀಡಬೇಕೆಂಬ ಗೋಲ್ವಾಲ್ಕರ್ ಕೇಳಿಕೆಯನ್ನು ನಿರಾಕರಿಸಿದ ಪಟೇಲ್ ಅವರಿಗೆ ನಾಗಪುರಕ್ಕೆ ಮರಳುವಂತೆ ಆದೇಶ ನೀಡಿದರು. ಕೊನೆಗೆ ಆರೆಸ್ಸೆಸ್ ಶರಣಾಗಿ, ಸರಕಾರ ಹಾಕಿದ ಎಲ್ಲ ಶರತ್ತುಗಳನ್ನು ಒಪ್ಪಿಕೊಂಡ ಮೇಲಷ್ಟೇ ಜುಲೈ 11, 1949ರಂದು ನಿಷೇಧವನ್ನು ತೆಗೆಯಲಾಯಿತು. ಆರೆಸ್ಸೆಸ್ ಒಂದು "ಸಾಂಸ್ಕೃತಿಕ ಸಂಘಟನೆಯಾಗಿ" ಉಳಿಯುತ್ತದೆ, "ರಹಸ್ಯಾತ್ಮಕತೆಯನ್ನು ಕೈಬಿಡುತ್ತದೆ ಮತ್ತು ಹಿಂಸೆಯನ್ನು ತೊರೆ-ಯುತ್ತದೆ" ಎಂಬ ಶರತ್ತುಗಳೂ ಅದರಲ್ಲಿ ಸೇರಿದ್ದವು. ಈಗ ಆ ಎಲ್ಲ ಶರತ್ತುಗಳನ್ನು ಅದು ಭಂಡತನದಿಂದ ಉಲ್ಲಂಘಿಸುತ್ತಿದೆ.

ಸರ್ದಾರ್ ಪಟೇಲರನ್ನು ತಮ್ಮದಾಗಿಸಿಕೊಳ್ಳುವ ಇಂತಹ ಪ್ರಯತ್ನ ಭಾರತೀಯ ಇತಿಹಾಸವನ್ನು ತನ್ನ ಮೂಗಿನ ನೇರಕ್ಕೆ ಮತ್ತೆ ಬರೆಯುವ ಅದರ ಒಟ್ಟು ಯೋಜನೆಯ ಒಂದು ಭಾಗ. ಈ ಮೂಲಕ ಅದು ಭಾರತದ ಇತಿಹಾಸವನ್ನು 'ಹಿಂದೂರಾಷ್ಟ್ರ'ದ ವೈಭವೀಕರಣದ ಏಕಮುಖೀ ದಾಖಲೆಯೊಳಗೆ ತುರುಕಲು ಪ್ರಯತ್ನಿಸುತ್ತಿದೆ. ಇದು ಆಧುನಿಕ ಭಾರತೀಯ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಅದರ ಕಣ್ಣೋಟದ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಅರೆಸ್ಸೆಸ್ ಮಹಾಯೋಜನೆಯ ಒಂದು ಅವಿಭಾಜ್ಯ ಅಂಗ ಕೂಡ.


ಆಧುನಿಕ ಗಣತಂತ್ರದ ರಕ್ಷಣೆಗಾಗಿ

ಆರೆಸ್ಸೆಸ್‌ನ ಫ್ಯಾಸಿಸ್ಟ್ ಮಾದರಿಯ ಅಗ್ಗದ ಜನಪ್ರಿಯತೆ ಗಿಟ್ಟಿಸುವ ಪ್ರಯತ್ನಗಳಿಂದ ಕೋಮು ಧ್ರುವೀಕರಣ ಇನ್ನಷ್ಟು ತೀಕ್ಷ್ಣಗೊಳಿಸುವಲ್ಲಿ ಮತ್ತು 'ಹಿಂದೂರಾಷ್ಟ್ರ'ದ ಅದರ ಮಹಾಯೋಜನೆ ಯಶಸ್ವಿಯಾದರೆ, ಅದು ನಮ್ಮ ಗಣತಂತ್ರ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಆದರ್ಶಗಳ ಸಾವಿನ ಸಂಕೇತವಾಗುತ್ತದೆ. ಆದ್ದರಿಂದ ಈಗ ಭಾರತದ ಐಕ್ಯತೆ ಮತ್ತು ಸಮಗ್ರತೆಯೇ, ಅದರ ಶ್ರೀಮಂತ ಸಾಮಾಜಿಕ-ಸಾಂಸ್ಕೃತಿಕ-ಧಾರ್ಮಿಕ ವೈವಿಧ್ಯತೆಯನ್ನು ಕಾಯ್ದುಕೊಂಡು ಅದನ್ನು ಇನ್ನಷ್ಟ ಶ್ರೀಮಂತಗೊಳಿಸುವ ಗುರಿಯೇ ಪಣಕ್ಕೊಡ್ಡಲ್ಪಟ್ಟಿದೆ. ಒಂದು ಉತ್ತಮ ಭಾರತವನ್ನು ನಿರ್ಮಿಸುವ ಜನತೆಯ ಹೋರಾಟಗಳನ್ನು ಮುಂದೊಯ್ಯಬೇಕಾದರೆ ಇದಕ್ಕೆ ಅವಕಾಶ ನೀಡಲು ಸಾಧ್ಯವಿಲ್ಲ.

ಈ ಸಮಾವೇಶ ಮುಂಬರುವ ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿ ಒಂದು ಕಾಂಗ್ರೆಸೇತರ, ಬಿಜೆಪಿಯೇತರ ಪರ್ಯಾಯವನ್ನು ಪ್ರಕಟಿಸುತ್ತದೆ ಎಂಬ ಊಹಾಪೋಹಗಳು ಮಾಧ್ಯಮಗಳ ಒಂದು ವಿಭಾಗದಲ್ಲಿ ನಡೆದಿದ್ದವು. ಆದ-ರೆ ಸಮಾವೇಶದ ಪ್ರಾಥಮಿಕ ಉದ್ದೇಶ ನಮ್ಮ ಭವಿಷ್ಯಕ್ಕೇ ಸಂಚಕಾರ ತರುತ್ತಿರುವ ಕೋಮುವಾದದ ವಿರುದ್ಧ ಜನತೆಯ ಐಕ್ಯತೆಯನ್ನು ಬಲಗೊಳಿಸುವುದು ಎಂದು ಅತ್ಯಂತ ಸ್ಪಷ್ಟ ಮಾತುಗಳಲ್ಲಿ ಸಾರಿದೆ.

ಈ ಸಮಾವೇಶದ ಸಂದೇಶವನ್ನು ಈಗ ದೇಶದ ಉದ್ದಗಲಕ್ಕೂ ಒಯ್ಯಲಾಗುವುದು.

(ಸೀತಾರಾಮ್ ಯೆಚೂರಿಯವರ ಪಿ.ಡಿ. ಸಂಪಾದಕೀಯ ಆಧರಿಸಿ)



ಸಮಾವೇಶದಲ್ಲಿ ಸೇರಿದ ಜನಸ್ತೋಮ

"ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಿ, ಕೋಮುಸಾಮರಸ್ಯವನ್ನು ರಕ್ಷಿಸಿ, ಸಮ್ಮಿಶ್ರ ಸಂಸ್ಕೃತಿಯನ್ನು ಕಾಪಾಡಲು ಮತ್ತು ಐಕ್ಯತೆಯನ್ನು ಬಲಪಡಿಸಲು ಜನತೆಯನ್ನು ಅಣಿನೆರೆಸಿ"

ಅಕ್ಟೋಬರ್ 30, 2013 ರಂದು ನವದೆಹಲಿಯಲ್ಲಿ ನಡೆದ ಜನರ ಐಕ್ಯತೆಗಾಗಿ ಮತ್ತು ಕೋಮುವಾದದ ವಿರುದ್ಧ ಸಮಾವೇಶ ಅಂಗೀಕರಿಸಿದ ಒಮ್ಮತದ ನಿರ್ಣಯ

ಹಲವಾರು ಮತಧರ್ಮಗಳ, ಭಾಷೆಗಳ, ಜಾತಿಗಳ ಮತ್ತು ಸಂಸ್ಕೃತಿಗಳ ದೇಶ ಈ ನಮ್ಮ ಭಾರತ. ಆದರೆ ಈ ವೈವಿಧ್ಯತೆಯಲ್ಲಿ ಏಕತೆಯ ಎಳೆ ಹಾಸುಹೊಕ್ಕಾಗಿದೆ. ಜನತೆಯ ಒಗ್ಗೂಡುವಿಕೆಯ ಆಧಾರದ ಮೇಲೆ ನಿಂತಿರುವ ಈ ಐಕ್ಯತೆಯೇ ನಮ್ಮನ್ನು ಭಾರತೀಯರನ್ನಾಗಿಸಿದೆ.

ಜನರ ಮತ್ತು ದೇಶದ ಐಕ್ಯತೆಯು ಇಂದು ಕೋಮುವಾದಿಗಳಿಂದ ಅಪಾಯಕ್ಕೊಳಗಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಎಲ್ಲಾ ಜನರೂ-ಹಿಂದುಗಳು, ಮುಸ್ಲಿಮರು, ಸಿಖ್ಖರು ಮತ್ತು ಕ್ರಿಶ್ಚಿಯನ್ನರು ಇನ್ನಿತರರೂ-ಒಟ್ಟುಗೂಡಿ ಹೋರಾಡುತ್ತಿದ್ದಾಗ, ಕೋಮುವಾದಿ ಸಿದ್ಧಾಂತ ಮತ್ತು ಸಂಘಟನೆಗಳು ದೂರವಿದ್ದು ಜನರ ಐಕ್ಯತೆಯನ್ನು ಒಡೆಯುವ ಕೃತ್ಯದಲ್ಲಿ ನಿರತರಾಗಿದ್ದವು. ಜನರು ಕೋಮುವಾದಿ ಸಿದ್ಧಾಂತವನ್ನು ತಿರಸ್ಕರಿಸಿದರು ಮತ್ತು ಭಾರತವು ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರವಾಗಿ ಹೊರಹೊಮ್ಮಿತು.

ಪ್ರಸ್ತುತ, ಕೋಮುವಾದಿ ಶಕ್ತಿಗಳು ಕೋಮುಹಿಂಸೆಯನ್ನು ಪ್ರಚೋದಿಸಿ ಪ್ರಕ್ಷುಬ್ಧ ಸ್ಥಿತಿಯನ್ನು ಸೃಷ್ಟಿಸುತ್ತಿವೆ. ಮುಂಬರುವ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಕೋಮುವಾದಿ ಪ್ರಚಾರ ತೀವ್ರಗೊಳ್ಳುತ್ತಿದೆ. ಇದು ದೇಶದ ಹಲವಾರು ಕಡೆಗಳಲ್ಲಿ ಕೋಮು ಪ್ರಕ್ಷೋಭೆಯನ್ನು ಹುಟ್ಟುಹಾಕುತ್ತಿದೆ. ಮುಜಫರ್‌ನಗರದಲ್ಲಿ ನಡೆದ ಕೋಮು ಹಿಂಸೆ ನಮ್ಮೆದುರಿಗೆ ಇರುವ ಕಣ್ಣಿಗೆ ರಾಚುವ ಒಂದು ಉದಾಹರಣೆಯಷ್ಟೆ.

ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳೆಲ್ಲ ಒಂದುಗೂಡಿ ಎಲ್ಲಾ ನಮೂನೆಯ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಬೇಕಾಗಿದೆ ಮತ್ತು ಜನರ ಐಕ್ಯತೆಯನ್ನು ಕಾಪಾಡಬೇಕಾಗಿದೆ.

ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳೆಲ್ಲ ಜನರ ನಡುವೆ ತಮ್ಮ ಪ್ರಯತ್ನವನ್ನು ಇನ್ನೂ ಗಟ್ಟಿಗೊಳಿಸಬೇಕು ಮತ್ತು ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು, ಕೋಮುಸಾಮರಸ್ಯವನ್ನು ರಕ್ಷಿಸಲು, ಸಮ್ಮಿಶ್ರ ಸಂಸ್ಕೃತಿಯನ್ನು ಕಾಪಾಡಲು ಮತ್ತು ಜನರ ಐಕ್ಯತೆಯನ್ನು ಬಲಪಡಿಸಲು ಅವರನ್ನು ಅಣಿನೆರೆಸಬೇಕು ಎಂದು ಈ ಸಮಾವೇಶ ಕರೆ ಕೊಡುತ್ತದೆ.

ಎಡಶಕ್ತಿಗಳಿಗಿದು ಚುನಾವಣಾ ಕೂಟವಲ್ಲ, ಕೋಮುವಾದದ ವಿರುದ್ಧ ಒಂದು ವಿಶಾಲ ವೇದಿಕೆ

ಅಕ್ಟೋಬರ್ 30ರ ಕೋಮುವಾದದ ವಿರುದ್ಧ ಜನತೆಯ ಐಕ್ಯತೆಯ ಸಮಾವೇಶ ಅದು ನಡೆಯುವ ಮೊದಲೇ ಮಾಧ್ಯಮಗಳಲ್ಲಿ ಈ ಬಹಳಷ್ಟು ಆಸಕ್ತಿ ಕೆರಳಿಸಿತ್ತು ಮತ್ತು ಹಲವಾರು ಊಹಾಪೋಹಗಳನ್ನು ಸೃಷ್ಟಿಸಲಾಗಿತ್ತು. ಸಮಾವೇಶ ನಡೆದ ಮೇಲೂ, ವಿಶೇಷವಾಗಿ ಯುಪಿಎ ಮಿತ್ರಪಕ್ಷವಾದ ಎನ್‌ಸಿಪಿಯ ಹಾಜರಾತಿ ಮಾಧ್ಯಮಗಳಲ್ಲಿ ಇನ್ನಷ್ಟು ಊಹಾಪೋಹಗಳನ್ನು ಸೃಷ್ಟಿಸುತ್ತಿದೆ.

ಆದರೆ ಸಮಾವೇಶದ ಪ್ರಾಥಮಿಕ ಉದ್ದೇಶ ನಮ್ಮ ದೇಶದ ಭವಿಷ್ಯಕ್ಕೇ ಸಂಚಕಾರ ತರುತ್ತಿರುವ ಕೋಮುವಾದದ ವಿರುದ್ಧ ಜನತೆಯ ಐಕ್ಯತೆಯನ್ನು ಬಲಗೊಳಿಸುವುದು ಎಂದು ಅತ್ಯಂತ ಸ್ಪಷ್ಟ ಮಾತುಗಳಲ್ಲಿ ಸಾರಿದೆ. ಸಮಾವೇಶದ ಮೊದಲು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯಲ್ಲಿ ಬರೆದ ಲೇಖನದಲ್ಲೂ ಇದನ್ನು ಸ್ಪಷ್ಟಪಡಿಸಿದ್ದರು.

ನಿಜ, ಈ ಸಮಾವೇಶ ನಡೆದಿರುವುದು ಮುಂಬರುವ ಲೋಕಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಕೋಮುವಾದಿಗಳ ಹೆಚ್ಚುತ್ತಿರುವ ಚಟುವಟಿಕೆಗಳ ಸಂದರ್ಭದಲ್ಲಿ. ಆರೆಸ್ಸೆಸ್ ನೇತೃತ್ವದ ಸಂಘಟನೆಗಳು ಕೋಮುಪ್ರಶ್ನೆಗಳನ್ನು ಬೇಕೆಂದೇ ಎತ್ತಿ-ಕೊಂಡು ದೇಶದಲ್ಲೆಲ್ಲ ವ್ಯವಸ್ಥಿತವಾಗಿ ಪ್ರಕ್ಷುಬ್ಧ ಪರಿಸ್ಥಿತಿಯನ್ನು ನಿರ್ಮಿಸುತ್ತಿವೆ. ಅವು ಬಿಹಾರ ಮತ್ತು ಉತ್ತರಪ್ರದೇಶದಂತಹ ರಾಜ್ಯಗಳ ಮೇಲೆ ಗಮನ ಕೇಂದ್ರೀಕರಿಸಿರುವುದು ಕಾಣ ಬರುತ್ತಿದೆ.

ಭಾರತದಲ್ಲಿ ಕೋಮುವಾದದ ಇತಿಹಾಸವನ್ನು ನೋಡಿದಾಗ, ಹಲವಾರು ಸಂದರ್ಭಗಳಲ್ಲಿ ಹಿಂದೂ ಕೋಮುವಾದದ ಶಕ್ತಿಗಳು, ಮತ್ತು ಆಗಾಗ ಅಲ್ಪಸಂಖ್ಯಾತರ ಕೋಮುವಾದಿ ಸಂಘಟನೆಗಳು ಸಾಮಾಜಿಕ ಮತ್ತು ರಾಜಕೀಯ ಪ್ರಶ್ನೆಗಳನ್ನು ಬಳಸಿ ಜನಗಳನ್ನು ಕೋಮುವಾದಿ ನೆಲೆಯಲ್ಲಿ ಅಣಿನೆರೆಸಲು ಪ್ರಯತ್ನಿಸಿರುವುದು ಕಂಡು ಬರುತ್ತದೆ. ಇದು ಹಿಂಸಾಚಾರಕ್ಕೆ, ಸಾವು-ನೋವುಗಳಿಗೆ ಕಾರಣವಾಗಿ ಕೋಮು ಸೌಹಾರ್ದವನ್ನು ಛಿದ್ರಗೊಳಿಸಿರುವುದನ್ನು ನಾವು ಕಂಡಿದ್ದೇವೆ. ಇತ್ತೀಚೆಗೆ ಮುಝುಪ್ಫರ್‌ನಗರದ ಗಲಭೆಗಳು ಇದನ್ನು ಮತ್ತೊಮ್ಮೆ ನೆನಪಿಸಿವೆ.

ಈಗ, ಕಳೆದ 9 ವರ್ಷಗಳ ಯುಪಿಎ ಸರಕಾರದ ದುರಾಡಳಿತ ಮತ್ತು ಭ್ರಷ್ಟಾಚಾರದಿಂದಾಗಿ ಜನಗಳಲ್ಲಿ ವ್ಯಾಪಕ ಅಸಂತೃಪ್ತಿ ಹರಡಿದೆ. ಮುಂಬರುವ ಏಪ್ರಿಲ್-ಮೇ ತಿಂಗಳಲ್ಲಿ ಲೋಕಸಭಾ ಚುನಾವಣೆಗಳು ನಡೆಯಬೇಕಾಗಿರುವುದು ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸಿದೆ.

ಇದರ ಸಂಪೂರ್ಣ ಪ್ರಯೋಜನ ಗಿಟ್ಟಿಸುವ ಆಟಕ್ಕೆ ಈಗ ಕೋಮುವಾದಿ ಶಕ್ತಿಗಳು ಇಳಿದಿವೆ. ಕಟ್ಟಾ ಹಿಂದುತ್ವವಾದಿ ಮತ್ತು ಆರೆಸ್ಸೆಸ್ ಪ್ರಚಾರಕ ನರೇಂದ್ರ ಮೋದಿಯವರನ್ನು ಬಿಜೆಪಿಯ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸುತ್ತಿರುವುದು ಈ ಆಟದ ಒಂದು ಭಾಗ. ಆತ 'ಅಭಿವೃದ್ಧಿ' ತರುತ್ತಾರೆ, 'ಉತ್ತಮ ಆಡಳಿತ' ನೀಡುತ್ತಾರೆ ಎಂದೆಲ್ಲ ಮಾತಿನ ಮಂಟಪಗಳನ್ನು ಕಟ್ಟಲಾಗುತ್ತಿದೆ. ಆದರೆ ಈ ಮಂಟಪದ ಹಿಂದೆ 1980ರ ದಶಕದಿಂದ ಗುಜರಾತ ಹಿಂದುತ್ವದ ಒಂದು ಪ್ರಮುಖ ಪ್ರಯೋಗಾಲಯವಾಗಿದೆ ಎಂಬ ಸಂಗತಿಯೇ ಮುಖ್ಯವಾಗಿದೆ. ಅಲ್ಲಿ ಮಧ್ಯಮ ವರ್ಗಗಳ ನಡುವೆ ಹಿಂದುತ್ವ ಸಿದ್ಧಾಂತಗಳ ಪ್ರಚಾರ, ಜತೆಗೆ ಅಲ್ಪಸಂಖ್ಯಾತರ ವ್ಯವಸ್ಥಿತ ದಮನ ಕೊನೆಗೆ 2002ರ ಭೀಕರ ಹಿಂಸಾಕಾಂಡಕ್ಕೆ ದಾರಿ ಮಾಡಿಕೊಟ್ಟಿರುವುದನ್ನೂ ಕಂಡಿದ್ದೇವೆ. ಈ ಮೊದಲು 'ಕರಸೇವೆ', 'ರಥಯಾತ್ರೆ' ಮತ್ತು ಅವೆಲ್ಲದರ ಪರಿಣಾಮವಾಗಿ 1992ರಲ್ಲಿ ಬಾಬ್ರಿ ಮಸೀದಿಯ ಧ್ವಂಸದ ಸಂದರ್ಭದಲ್ಲೂ ಇಂತಹುದೇ ಸಾವು-ನೋವುಗಳನ್ನು ದೇಶ ಕಂಡಿದೆ. ಅದರ ಬೆನ್ನೇರಿ ಬಿಜೆಪಿ ಸರಕಾರಗಳ ರಚನೆಯಾಗಿರುವುದನ್ನು ಕಂಡಿದೆ.

ಈಗಲೂ ದೊಡ್ಡ ಬಂಡವಾಳಿಗರು ದೇಶವನ್ನು ಲೂಟಿ ಹೊಡೆಯಲು ಬಿಟ್ಟಿರುವ, ಬೃಹತ್ ಭ್ರಷ್ಟಾಚಾರದ ಯುಪಿಎ ಸರಕಾರದ ಶೋಚನೀಯ ದಾಖಲೆ ಮತ್ತು ಕಾಂಗ್ರೆಸ್ ಪಕ್ಷದ ದೂರದೃಷ್ಟಿಯಿಲ್ಲದ, ಸಮಯಸಾಧಕ ಧೋರಣೆಗಳು ಬಿಜೆಪಿ-ಆರೆಸ್ಸೆಸ್ ಕೂಟ ಪ್ರತಿನಿಧಿಸುವ ಬಲಪಂಥೀಯ ಕೋಮುವಾದಿ ಶಕ್ತಿಗಳಿಗೆ ಇನ್ನೊಂದು ಅವಕಾಶವನ್ನು ನಿರ್ಮಿಸಿ ಕೊಟ್ಟಿದೆ.

ಇದು ಮತ್ತೊಮ್ಮೆ ದೇಶ ಕೋಮುವಾದಿ ಹಿಂಸಾಚಾರವನ್ನು ಅನುಭವಿಸುವಂತೆ ಮಾಡಲು ಬಿಡಬಾರದು, ಜನತೆಯ ಐಕ್ಯತೆ ಮತ್ತು ಕೋಮು ಶಾಂತಿಯನ್ನು ಛಿದ್ರಗೊಳಿಸಲು ಬಿಡಬಾರದು ಎಂಬುದು ಎಡಶಕ್ತಿಗಳ ಆಶಯ. ದೇಶದ ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳಿಗೆ ಕೋಮುವಾದದ ವಿರುದ್ಧ ಹೋರಾಟ ಯಾವುದೋ ಚುನಾವಣಾ ಸಮರವೇನಲ್ಲ, ಅಥವ ಏನೋ ರಾಜಕೀಯ ಲಾಭ ಗಿಟ್ಟಿಸುವ ಸಮಯಸಾಧಕತನವೂ ಅಲ್ಲ. ಇಲ್ಲಿ ಪಣದಲ್ಲಿರುವುದು ಇನ್ನೂ ದೊಡ್ಡದಾದ ಸಂಗತಿ-ಜನತೆಯ ಐಕ್ಯತೆ ಮತ್ತು ದೇಶದ ಸಮಗ್ರತೆ. ಇದಕ್ಕೆ ಎಡ, ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಶಕ್ತಿಗಳ ಒಂದು ವಿಶಾಲ ವೇದಿಕೆ ಅಗತ್ಯ. ಈ ಸಮಾವೇಶದ ಮಹತ್ವ ಇರುವುದು ಇಲ್ಲಿ ಎಂದು ಪ್ರಕಾಶ್ ಕಾರಟ್ ತಮ್ಮ ಲೇಖನದಲ್ಲಿ ಹೇಳಿದ್ದರು.



ಅತಿಥಿ ಉಪನ್ಯಾಸಕರ ಗಂಭೀರ ಸಮಸ್ಯೆ : ರಾಜ್ಯ ಸರ್ಕಾರಕ್ಕೆ ಗಡುವು: ಡಿ.ವೈ.ಎಫ್.ಐ

ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಳೆದ 15 ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ 10600 ಅತಿಥಿ ಉಪನ್ಯಾಸಕರ ಗಂಭೀರ ಸಮಸ್ಯೆಗಳ ಪರಿಹಾರಕ್ಕೆ ರಾಜ್ಯ ಸರ್ಕಾರ ಮುಂದಾಗುತ್ತಿಲ್ಲ. ಕಳೆದ ವರ್ಷದ ವೇತನವು ಕೂಡ ಅತಿಥಿ ಉಪನ್ಯಾಕರ ಕೈ ಸೇರಿಲ್ಲ. ಸೇವಾ ಭದ್ರತೆ ಒದಗಿಸಿಲ್ಲ ಮತ್ತು ವೇತನ ಹೆಚ್ಚು ಮಾಡಿಲ್ಲ. ಮಹಿಳಾ ಅತಿಥಿ ಉಪನ್ಯಾಸಕರಿಗೆ ಸಂಬಳ ಸಹಿತ ಹೆರಿಗೆ ರಜೆ ನೀಡದೆ ಗರ್ಭಿಣಿ ಅಥವಾ ಹೆರಿಗೆಯಾದರೆ ಕೆಲಸವಿಲ್ಲದೆ ಮನೆಗೆ ಹೋಗಬೇಕು. ಈ ರೀತಿ ಅಮಾನವೀಯವಾಗಿ ರಾಜ್ಯ ಸರ್ಕಾರ ಅತಿಥಿ ಉಪನ್ಯಾಸಕರನ್ನು ನಡೆಸಿಕೊಳ್ಳುತ್ತಿದೆ. ಇಂತಹ ಗಂಭೀರವಾದ ಸಮಸ್ಯೆಗಳನ್ನು ರಾಜ್ಯಸರ್ಕಾರ ಬಗೆಹರಿಸಬೇಕೆಂದು ಒತ್ತಾಯಿಸಿ ಅ.22, 2013 ರಂದು ಮುಖ್ಯಮಂತ್ರಿ ಮನೆ ಮುಂದೆ ಪ್ರತಿಭಟನಾ ಧರಣಿಯನ್ನು ಹಮ್ಮಿಕೊಳ್ಳಲಾಗಿತ್ತು. ಎರಡು ಸಾವಿರಕ್ಕಿಂತ ಹೆಚ್ಚಿದ್ದ ಅತಿಥಿ ಉಪನ್ಯಾಸಕರರು ಡಿವೈಎಫ್ಐ–ಎಸ್ಎಫ್ಐಗಳ ನೇತೃತ್ವದಲ್ಲಿ, ಬೆಂಗಳೂರಿನ ಸಿಟಿ ರೈಲ್ವೆ ನಿಲ್ದಾಣದಿಂದ ಮುಖ್ಯಮಂತ್ರಿ ಮನೆ ಮುಂದಕ್ಕೆಂದು ರ್‍ಯಾಲಿ ಹೊರಟರು. ಅನಂದ್‌ರಾವ್ ವೃತ್ತದ ಬಳಿ ರ್‍ಯಾಲಿಯನ್ನು ತಡೆದ ಪೋಲಿಸರು, ಮುಖ್ಯ ಮಂತ್ರಿ ಮನೆ ಹತ್ತಿರ ಧರಣಿ ಮಾಡಲು ಅವಕಾಶವಿಲ್ಲ. ಫ್ರೀಡಂ ಪಾರ್ಕ್ ಕಡೆಗೆ ಹೊರಡಿ ಎಂದು ಸೂಚಿಸಿದರು. 'ನಮ್ಮನ್ನು ಬಂಧಿಸಿ, ಇಲ್ಲವೇ ಮುಖ್ಯಮಂತ್ರಿ ಮನೆ ಮುಂದೆ ಧರಣಿ ಮಾಡಲು ಅವಕಾಶ ನೀಡಿ' ಎಂದು ಮೇಲ್‌ಸೇತುವೆ ಬದಿಯಲ್ಲಿಯೇ ಕೂರಲಾಯಿತು. ಉನ್ನತ ಶಿಕ್ಷಣ ಸಚಿವರು ಇಲ್ಲಿಗೆ ಬರಬೇಕು. ಮುಖ್ಯಮಂತ್ರಿಗಳು ಮಾತುಕತೆಗೆ ಆಹ್ವಾನಿಸಬೇಕೆಂದು ಪಟ್ಟು ಹಿಡಿಯಲಾಯಿತು. ಕೊನೆಗೆ ರ್‍ಯಾಲಿಯು ಫ್ರೀಡಂಪಾರ್ಕ್‌ನ ಎದುರುಗಡೆಯ ರಸ್ತೆಯಲ್ಲೇ ಪ್ರತಿಭಟನಾ ಧರಣಿಯಾಗಿ ಮಾರ್ಪಟಿತ್ತು.

ಉನ್ನತ ಶಿಕ್ಷಣ ಸಚಿವರ ಉಡಾಫೆ ಪ್ರತಿಕ್ರಿಯೆ:

ಪ್ರತಿಭಟನೆ ನಡೆಯುವ ಸಂದರ್ಭದಲ್ಲಿ ಬೆಂಗಳೂರಿನಲ್ಲೇ ಇದ್ದ ಉನ್ನತ ಶಿಕ್ಷಣ ಸಚಿವ ಆರ್.ವಿ.ದೇಶಪಾಂಡೆ ಪ್ರತಿಭಟನಾ ನಿರತರನ್ನು ಭೇಟಿಮಾಡುವ ಸೌಜನ್ಯವನ್ನು ತೋರಲಿಲ್ಲ. ಮನವಿ ಪತ್ರ ಸ್ವೀಕರಿಸಲು ಅಧಿಕಾರಿಗಳನ್ನು ಪ್ರತಿಭಟನಾ ಸ್ಥಳಕ್ಕೆ ಕಳುಹಿಸಿದರು. ಹೀಗಾಗಿ ಅತಿಥಿ ಉಪನ್ಯಾಸಕರಲ್ಲಿ ಇನ್ನಷ್ಟು ಅಸಮಾಧಾನ ವ್ಯಕ್ತವಾಯಿತು. ಕೊನೆಗೂ ಶಿಕ್ಷಣ ಸಚಿವರು ಬರದೆ ಜವಾಬ್ದಾರಿಯಿಂದ ಜಾರಿಕೊಂಡರು.

ಮುಖ್ಯ ಮಂತ್ರಿ ಮಾತುಕತೆಗೆ ಆಹ್ವಾನ:

ಪ್ರತಿಭಟನಾ ನಿರತರ ನಿಯೋಗಕ್ಕೆ ಮುಖ್ಯ ಮಂತ್ರಿಯವರನ್ನು ಭೇಟಿಮಾಡಲು ಅನುಮತಿ ನೀಡಿ, ಮಾತುಕತೆಗೆ ಆಹ್ವಾನವಿತ್ತರು. ಸಂಜೆ 7 ಘಂಟೆಗೆ ಮುಖ್ಯಮಂತ್ರಿಯವರ ನಿವಾಸದಲ್ಲಿ ಮಾತುಕತೆ ನಡೆಯಿತು. ಮುಖ್ಯಮಂತ್ರಿಗಳು ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ಆಲಿಸಿ, ಉನ್ನತ ಶಿಕ್ಷಣ ಸಚಿವರ ಜೊತೆ ಮಾತುಕತೆ ನಡೆಸಿ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಲಾಗುವುದೆಂದು ಭರವಸೆ ನೀಡಿದರು. ನಿಯೋಗದಲ್ಲಿ ಡಿವೈಎಫ್ಐನ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ, ಅತಿಥಿ ಉಪನ್ಯಾಸಕ ಸಂಘದ ಅಧ್ಯಕ್ಷರಾದ ಶ್ರೀನಿವಾಸಾಚಾರ್, ಪ್ರಧಾನ ಕಾರ್ಯದರ್ಶಿ ಡಾ. ಮಲ್ಲಿಕಾರ್ಜುನ ಬಿ. ಮಾನ್ಪಡೆ ಸೇರಿದಂತೆ ಒಟ್ಟು 15 ಜನ ಅತಿಥಿ ಉಪನ್ಯಾಸಕ ಪ್ರತಿನಿಧಿಗಳಿದ್ದರು.

ಮುಖ್ಯಮಂತ್ರಿಯವರನ್ನು ಭೇಟಿಮಾಡಿ ನಂತರ ಪ್ರತಿಭಟನಾ ಸ್ಥಳದಲ್ಲೇ ಅತಿ ಉಪನ್ಯಾಸಕರು ಸಭೆ ಸೇರಿದ್ದರು ರಾಜ್ಯ ಸರ್ಕಾರ ತಮ್ಮ ಗಂಭೀರವಾ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನ ಮುಂದಾಗದೆ ಹೋದರೆ, ಮುಂದಿ ದಿನಗಳಲ್ಲಿ ಅನುಸರಿಸಬೇಕಾದ ಹೋರಾಟ ಮಾರ್ಗಗಳನ್ನು ಚರ್ಚಿಸಿದರು. ಸಭೆ ಅಭಿಪ್ರಾಯದಂತೆ ನವೆಂಬರ್ 1 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟ ಸಭೆ ಕರೆದು ಮುಂದಿನ ಹೋರಾ ಕುರಿತು ನಿರ್ಧರಿಸಲಾಗುವುದೆಂದ ತಿರ್ಮಾನವಾಯಿತು.

ಮಹಿಳಾ ಅತಿಥಿ ಉಪನ್ಯಾಸಕ ಸೇರಿದಂತೆ ರಾಜ್ಯ ಎಲ್ಲಾ ಜಿಲ್ಲೆಗಳಿಂ ಭಾಗವಹಿಸಿದ್ದ ಅತಿಥಿ ಉಪನ್ಯಾಸಕರಿ ಹೋರಾಟವು ಹೊಸ ಹುರುಪನ ತಂದಿತು. ನಾಯಕರು ಪೋಲಿಸರೊಂದಿ ದಿಟ್ಟವಾಗಿ ನಡೆದುಕೊಂಡದ್ದು, ತಮ ಬೇಡಿಕೆಗಳ ಈಡೇರಿಕೆಗಾಗಿ ಏಳುತಿ ಘೋಷಣೆಗಳು ಮತ್ತು ಡಿವೈಎಫ್ಐ ಮತ್ತ ಎಸ್ಎಫ್ಐ ಮುಖಂಡರ ನಾಯಕತ್ವದ ಶಿಸ್ತು ಬದ್ಧ ರ್‍ಯಾಲಿಯು ಸೇರಿದಂತೆ ರ ಹೋರಾಟ ಅತಿಥಿ ಉಪನ್ಯಾಸಕರ ಸ್ಫೂರ್ತಿಯೊಂದಿಗೆ ಅತ್ಮವಿಶ್ವಾಸವನ ಹೆಚ್ಚಿಸಿದೆ. ಮುಂದಿನ ದಿನಗಳಲ್ಲಿ ನ ಬೇಡಿಕೆಗಳನ್ನು ಹೋರಾಟದಿಂದಲ ಈಡೇರಿಸಿಕೊಳ್ಳುತ್ತೇವೆಂಬ ತೀರ್ಮಾನಕ ಬಂದರು. ಹೋರಾಟವನ್ನು ಬೆಂಬಲಿ ಡಿವೈಎಫ್ಐ ಮತ್ತು ಎಸ್ಎಫ್ಐನ ಮಾ ರಾಜ್ಯಾಧ್ಯಕ್ಷರಾದ ಕೆ.ಎನ್. ಉಮೇ ಭಾಗವಹಿಸಿದ್ದರು. ಪ್ರತಿಭಟನೆಯ ನೇತೃತ್ವವನ ಡಿವೈಎಫ್ಐ ಮತ್ತು ಎಸ್ಎಫ್ಐ ಅನಂತನಾಯ್ಕ, ಹುಳ್ಳಿ ಉಮೇ ಮುಂತಾದವರು ಭಾಗವಹಿಸಿದ್ದರು.

–ಬಿ.ರಾಜಶೇಖರಮೂತಿ

ಕೃಷಿಯಲ್ಲಿ ಹೂಡಿಕೆಗಳ ದಾಳಿ

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುಸರಿದ ಮುಕ್ತ ಮಾರುಕಟ್ಟೆಯ ಖಾಸಗೀಕರಣ – ಉದಾರೀಕರಣದ ನೀತಿಗಳು, ವ್ಯವಸಾಯವನ್ನು ಹಾಗೂ ಭಾರತ ಮತ್ತು ಕರ್ನಾಟಕದ ರೈತರನ್ನು, ಬೀಜ, ಗೊಬ್ಬರ, ಕ್ರಿಮಿನಾಶಕ ಮುಂತಾದ ಹೂಡಿಕೆಗಳು ಕೂಡ ಮೂಲೆ ಗುಂಪಾಗಿಸಿದವು. ಸಬ್‌ಸಿಡಿ ಮುಕ್ತಗೊಂಡ, ನಿಯಂತ್ರಣವಿಲ್ಲದ ಮಾರುಕಟ್ಟೆಯಲ್ಲಿ ಜಗತ್ತಿನ ದೈತ್ಯ ಕಂಪನಿಗಳನ್ನ ಎದುರಿಸುವಂತೆ ಮುಖಾಮುಖಿ ಮಾಡಿದವು. ಸಬ್‌ಸಿಡಿ ಇಲ್ಲದ ಅನಿಯಂತ್ರಿತ ಮುಕ್ತವ್ಯಾಪಾರವು, ಅದರಿಂದಾಗಿ ಬೆಳೆದ ಕಳಪೆ ಗುಣಮಟ್ಟದ ವ್ಯಾಪಾರವು ಮತ್ತು ಕಾಳ ಸಂತೆ ವ್ಯಾಪಾರವು ಕೃತಕವಾಗಿ ಅಭಾವವನ್ನ ಸೃಷ್ಟಿಸಿ ಬೆಲೆಗಳನ್ನು


ಕ್ರ ಸಂ	ಗೊಬ್ಬರ	ವರ್ಷಗಳಲ್ಲಿ ಬೆಲೆ ಪ್ರತಿಟನ್‌ಗೆ ರೂ. ಗಳಲ್ಲಿ				
		1986	1991	1995	2000	2011
1	ಯೂರಿಯಾ	2150	3060	3320	4000	5900
2	ಡಿ.ಎ.ಪಿ	3350	4680	4800	–	14400
3	ಪೋಟ್ಯಾಷ್	1200	1700	4450	–	–

* ಡಿ.ಎ.ಪಿ ಮತ್ತು ಪೋಟ್ಯಾಷ್ ಮಾರಾಟವನ್ನು 1992 ರಲ್ಲಿ ಅನಿಯಂತ್ರಣಗೊಳಿಸಲಾಗಿದೆ.

ತೀವ್ರವಾಗಿ ಏರಿಸಿ ರೈತರ ಉತ್ಪದನಾ ವೆಚ್ಚವನ್ನು ತಲಾ ಎಕರೆಗೆ ಹತ್ತಾರು ಪಟ್ಟು ಹೆಚ್ಚಿಸಿದವು.

ಕೋಷ್ಟಕವನ್ನು ಗಮನಿಸಿ, 1986 ಕ್ಕೆ ಹೋಲಿದರೆ ಯೂರಿಯಾ ಬೆಲೆ ಸರಿಸುಮಾರು 2000ದಲ್ಲಿಯೇ ದುಪ್ಪಟ್ಟು ಆಗಿದೆ. ಅದೇ ರೀತಿ 2011 ರಲ್ಲಿ ಅದು ಮೂರು ಪಟ್ಟಾಗಿದೆ. ಡಿ.ಎ.ಪಿ ಬೆಲೆ 1986 ರಲ್ಲಿ ಇರುವ ಬೆಲೆಗೆ ಹೋಲಿಸಿದರೆ 2011 ರಲ್ಲಿ 4 1/2 ಪಟ್ಟಿಗೂ ಅಧಿಕವಾಗಿದೆ. ಇದರ ಬೆಲೆ 05–05–2011 ರ ವರೆಗೆ ಪ್ರತಿ ಟನ್‌ಗೆ 10750 ರೂ ಗಳಾಗಿದ್ದರೆ. ಕೇವಲ ಎರಡು ತಿಂಗಳ ನಂತರ 08–07–2011 ರಂದು ಅದರ ಬೆಲೆ 3650 ರೂಗಳಷ್ಟು ಹೆಚ್ಚಿ 14400 ರೂ ಗಳಾಗಿವೆ. ಅದೇ ರೀತಿಯಲ್ಲಿ ಪೊಟ್ಯಾಷ್ ಬೆಲೆಯನ್ನು ಗಮನಿಸಬಹುದು. ಕ್ರಿಮಿನಾಶಕಗಳ ಬೆಲೆಯೂ ಕೂಡ 1994 ರ ಪೂರ್ವಕ್ಕೆ ಹೋಲಿಸಿದರೆ ಈಗ ಹಲವಾರು ಪಟ್ಟು ಜಾಸ್ತಿಯಾಗಿದೆ. 2003–04 ರಲ್ಲಿಯೇ ಭಾರತದ ಶೇ 40 ಕ್ಕೂ ಅಧಿಕ ಬೀಜ ಮಾರುಕಟ್ಟೆಯು ಅದಾಗಲೇ ಮಾನ್ ಸಂ–ಟೋ ಕಂಪನಿಯ ಹಿಡಿತದಲ್ಲಿತ್ತು.

ಅಗಸ್ಟ್ 05, 2011 ರಂದು ಪಾರ್ಲಿಮೆಂಟಿನಲ್ಲಿ ಮಂಡಿಸಲಾದ ಸಿ.ಎ.ಜಿ. ವರದಿ ಸ್ಪಷ್ಟವಾಗಿ ಶೇ 45 ಜನರ ರಾಸಾಯನಿಕ ಗೊಬ್ಬರ ಖರೀದಿಸುತ್ತಾರೆಂದು, ಹಾಗೇ ಶೇ 60 ಜನರ ಆ ದಿನಗಳಲ್ಲಿ ಅಗತ್ಯವಿರುಷ್ಟು ಅವರು



ಪಡೆಯಲಾಗುತ್ತಿಲ್ಲ ಎಂಬ ಮಾಹಿತಿಯನ್ನು ನೀಡುವ ಮೂಲಕ ಕಾಳಸಂತೆಕೋರತನದ ನಿಗ್ರಹದ ಅಗತ್ಯದ ಬಗ್ಗೆ ಸರ್ಕಾರದ ಗಮನ ಸೆಳೆದಿದೆ.

ಇದರ ಜೊತೆ, ಅದೇ ಸಂದರ್ಭದಲ್ಲಿ

ಸಾಂಸ್ಥಿಕ ಸಾಲ ದೊರೆಯದೇ ರೈತಸ ದುಬಾರಿ ಬಡ್ಡಿಯ ಖಾಸಗಿ ಸಾಲಪ ಗತಿಯಾಗಿದೆ. ಹಾಲಿ ಖಾಸಗಿ ಸಾಲ ಬಡ್ಡಿ ವಾರ್ಷಿಕ ಶೇ 30 ರಿಂದ ಶೇ ರ ವರೆಗೆ ಇದೆ. ಇದು ಕೂಡ ಉತ್ಪಾದ ವೆಚ್ಚ ಮತ್ತಷ್ಟು ಏರಲು ಕಾರಣವಾಗಿ ಉದಾಹರಣೆಗೆ ಈ ಹಿಂದೆ ಭತ್ತಕ್ಕೆ 1 ರ ದಶಕದಲ್ಲಿ ತಲಾ ಏಕರೆಗೆ ಉತ್ಪಾದ ವೆಚ್ಚ 10 ಸಾವಿರ ಆಗಿದ್ದುದು ಈಗ ಅ 25 ಸಾವಿರಕ್ಕೆ ಹೆಚ್ಚಾಗಿರುವುದನ್ನು ಹಿನ್ನಲೆಯಲ್ಲಿ ಗುರುತಿಸಬಹುದು.

ಕಡಿಮೆ ಬೆಲೆಯ ವಿದೇಶಿ ಕ ಉತ್ಪನ್ನಗಳ ಸ್ಪರ್ಧೆಗೆ ನಲುಗಿ ಹೋ ಭಾರತದ ಹಾಗೂ ಕರ್ನಾಟಕ ಬೇಸಾಯ ಒಟ್ಟಾರೆ ವ್ಯವಸಾಯವ ಹಾಗೂ ರೈತಾಪಿ ಜನತೆಯು ಸರ್ವಾಂಗೀಣ ಬಿಕ್ಕಟ್ಟಿಗೆ ಸಿಲುಕಿ ಮತ್ತು ಈ ಕಾರಣದಿಂದಾಗಿ ರೈತ ಲಕ್ಷಾಂತರ ಎಕರೆ ಭೂಮಿಯು ಬೀಳು ಬಿಡುವಂತಾಗಿದೆ. ಸಾಲಕ ಶ್ರೀಮಂತರ ಕೈಗೆ ಬಡವರ ಭೂ ವರ್ಗಾವಣೆಗೊಳ್ಳುತ್ತಿದೆ. ದೇಶದಲ್ಲಿ ಅರ್ಧಗಂಟೆಗೆ ರೈತನೊಬ್ಬ ಆ ಮಾಡಿಕೊಳ್ಳುವಂತ ದುಸ್ಥಿತಿಯ

ಸೇವೆ ಕಾಯಂಗೊಳಿಸಲು ಆಗ್ರಹಿಸಿ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಬೃಹತ್ ಪ್ರತಿಭಟನೆ.

ರ್ನಾಟಕ ಸರಕಾರದ ಸಮಾಜ ಕಲ್ಯಾಣ ಾಖೆ ನಡೆಸುತ್ತಿರುವ ಎಸ್.ಸಿ/ಎಸ್.ಟಿ, ಿ.ಎಂ., ಅಲ್ಪಸಂಖ್ಯಾತ ಹಾಸ್ಟೆಲ್‌ಗಳಲ್ಲಿ



ನಿತ್ಯಾನಂದಸ್ವಾಮಿ.

ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಡೆಸುತ್ತಿರುವ ಮೊರಾರ್ಜಿ ದೇಸಾಯಿ, ತ್ತೂರು ಚೆನ್ನಮ್ಮ ಮೊದಲಾದ ವಸತಿ ಾಲೆಗಳಲ್ಲಿ ಕಳೆದ ಹತ್ತಾರು ವರ್ಷಗಳಿಂದ ಡುಗೆ, ಸಪಾಯಿ, ಕಾವಲು ಮುಂತಾದ ಲಸಗಳಿಗೆ ನಿಯೋಜಿತರಾಗಿ ಕಾರ್ಯ ರ್ವಹಿಸುತ್ತಿರುವ ನೌಕರರು ಇದೇ ಕ್ಟೋಬರ್ 22ರಂದು ಸಾವಿರಾರು ಂಖ್ಯೆಯಲ್ಲಿ ಬೆಂಗಳೂರಿಗೆ ಆಗಮಿಸಿ ತಮ್ಮ ೇವೆಯನ್ನು ಕಾಯಂಗೊಳಿಸಬೇಕೆಂದು ಾಜ್ಯ ಸರಕಾರವನ್ನು ಆಗ್ರಹಿಸಿದರು. ಸಂಘದ ಮುಖಂಡರಾದ ನಿತ್ಯಾನಂದಸ್ವಾಮಿ, ಚಂದ್ರಪ್ಪ ಹೊಸ್ಕೇರಾ, ಭೀಮಶೆಟ್ಟಿ ಯಂಪಳ್ಳಿ, ಎಲ್. ಎಸ್ ನಾಯಕ್, ಕರಿಯಪ್ಪ ಅಚ್ಚೊಳ್ಳಿ, ಇ.ಆರ್. ಲಿಂಗಪ್ಪ ಹಣವಾಳ, ವೆಂಕಟೇಶ ೋಣಿ ಮೊದಲಾದವರ ನೇತೃತ್ವದಲ್ಲಿ ನಗರದ ೈಲು ನಿಲ್ದಾಣದಿಂದ ಹೊರಟ ಪ್ರತಿಭಟನಾ ಮೆರವಣಿಗೆಯಲ್ಲಿ "ಹೊರಗುತ್ತಿಗೆ ಪದ್ಧತಿ ರದ್ದಾಗಲಿ" " ಗುತ್ತಿಗೆದಾರರ ಶೋಷಣೆ ಿಲ್ಲಲಿ" ಎಂದು ಘೋಷಣೆಗಳನ್ನು ಕೂಗುತ್ತಾ ಂದ ನೌಕರರು ಸ್ವಾತಂತ್ರ್ಯ ಉದ್ಯಾನವನದ ಪಕ್ಕದ ರಸ್ತೆಯಲ್ಲಿ ಧರಣಿ ಕುಳಿತರು.


ಸಂಘದ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಅವರು ಧರಣಿಯನ್ನು ಉಧ್ಘಾಟಿಸಿ ಮಾತನಾಡುತ್ತಾ "ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲೆಗಳಲ್ಲಿ ಹೊರಗುತ್ತಿಗೆ ನೌಕರರಾಗಿ ಕೆಲಸಮಾಡುತ್ತಿರುವ ಎಲ್ಲರ ಸೇವೆಯನ್ನು ಕಾಯಂಗೊಳಿಸುವ ವರೆಗೆ ನಮ್ಮ ಹೋರಾಟ ನಿರಂತರವಾಗಿ ಮುಂದುವರೆಯಲಿದೆ" ಎಂದು ಹೇಳಿದರು. ಇಂದು ಹೊರಗುತ್ತಿಗೆಗೆ ಟ್ಟ ಈ ನೌಕರರು ಮೊದಲು ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಾ ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ಸಂಬಳ ಪಡೆಯುತ್ತಿದ್ದರು. 240 ದಿನ ನಿರಂತರ ಕೆಲಸ ಮಾಡಿದ ದಿನಗೂಲಿ ನೌಕರರನ್ನು ಕಾಯಂಗೊಳಿಸಬೇಕೆಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದ ತಪ್ಪಿಸಿಕೊಳ್ಳುವ ದುರುದ್ದೇಶದಿಂದ ಈ ನೌಕರರನ್ನು ಹೊರಗುತ್ತಿಗೆಗೆ ನೀಡಿ ಸರ್ಕಾರ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು.

ಗುತ್ತಿಗೆದಾರರು ನೌಕರರಿಗೆ ಸರ್ಕಾರ ನಿಗದಿಪಡಿಸಿದ ತುಟ್ಟಿಭತ್ಯೆಸಹಿತವಾದ ಕನಿಷ್ಠ ವೇತನವನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗಾಗಿ ಕೊಡುವ ಷರತ್ತಿಗೆ ಒಪ್ಪಿಗೆ ನೀಡಿ ಗುತ್ತಿಗೆ ಹಿಡಿಯುತ್ತಾರೆ. ಆದರೆ ನೌಕರರಿಗೆ ತಿಂಗಳುಗಟ್ಟಲೆ ವೇತನ ನೀಡದೇ ಸತಾಯಿಸುತ್ತಾರೆ. ನೌಕರರ ಸಂಬಳದಲ್ಲಿ ನೂರಾರು ರೂ.ಗಳನ್ನು ಅಕ್ರಮವಾಗಿ ಕಡಿತ ಮಾಡಿ ತಮ್ಮ ಜೇಬಿಗೆ ಹಾಕಿಕೊಳ್ಳುತ್ತಾರೆ. ನೌಕರರ ಸಂಬಳದಿಂದ ಕಡಿತ ಮಾಡುವ ಪಿ.ಎಫ್. ವಂತಿಗಿಯನ್ನು ಸಂಬಂಧಪಟ್ಟ ನೌಕರನ ವೈಯಕ್ತಿಕ ಖಾತೆ-ಗೆ ಜಮಾ ಮಾಡದೇ ಮೋಸ ಮಾಡುತ್ತಾರೆ. ಇಷ್ಟೊಂದು ಅನ್ಯಾಯ ನಡೆಯುತ್ತಿರುವುದು ಇಲಾಖೆಯ ಅಧಿಕಾರಿಗಳಿಗೆ ತಿಳಿದಿದ್ದರೂ ಅವರು ಸುಮ್ಮನಿರುತ್ತಾರೆ. ಈ ಸುಲಿಗೆಕೋರ ಹೊರಗುತ್ತಿಗೆ ಪದ್ಧತಿಯನ್ನು ಕೈಬಿಟ್ಟು ನೌಕರರ ಸೇವೆಯನ್ನು ಕಾಯಂಗೊಳಿಸುವ ಕುರಿತು ಸರಕಾರ ತನ್ನ ನಿಲುಮೆಯನ್ನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರಲ್ಲದೆ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಎಚ್. ಆಂಜನೇಯ ಅವರು ಸ್ಥಳಕ್ಕೇ ಆಗಮಿಸಿ ಮನವಿಪತ್ರವನ್ನು ಸ್ವೀಕರಿಸುವ ವರೆಗೂ ಧರಣಿ ಮುಂದುವರೆಯಲಿದೆ ಎಂದು ಘೋಷಿಸಿದರು.

ಹಾಸ್ಟೆಲ್ ನೌಕರರ ಹೋರಾಟಕ್ಕೆ ಸಿಐಟಿಯು ರಾಜ್ಯ ಸಮಿತಿಯ ಪರವಾಗಿ ಬೆಂಬಲ ಸೂಚಿಸಲು ಆಗಮಿಸಿದ್ದ ಸಿಐಟಿಯು ಕಾರ್ಯದರ್ಶಿಗಳಲ್ಲಿ ಒಬ್ಬರಾದ ಸಂಗಾತಿ ಕೆ. ಮಹಾಂತೇಶ ಅವರು ಮಾತನಾಡಿ, "ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಇದ್ದು ಓದುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಬಡವರ, ದಲಿತರ ಮಕ್ಕಳು. ಅವರಿಗೆ ಆರೋಗ್ಯಕರವಾದ ಪರಿಸರ, ಊಟ, ಉಪಹಾರ ಒದಗಿಸಬೇಕಾದದ್ದು ಸರ್ಕಾರದ ಹೊಣೆಗಾರಿಕೆ. ಹಾಸ್ಟೆಲ್‌ಗಳಲ್ಲಿ ಅಡುಗೆ ಮಾಡುವವರು, ಸ್ವಚ್ಛತಾ ಕೆಲಸ ಮಾಡುವವರು ಕಾಯಂ ನೌಕರರಲ್ಲದಿದ್ದರೆ ವಿದ್ಯಾರ್ಥಿಗಳಿಗೆ ಸರಿಯಾದ ಊಟ ಉಪಹಾರ ಸಿಗುವುದು ಹೇಗೆ ಸಾಧ್ಯ? ಅಷ್ಟು ಮಾತ್ರವಲ್ಲ, ಅಡುಗೆಯಂತಹ ಕಾಯಂ ಸ್ವರೂಪದ ಕೆಲಸಕ್ಕೆ ನೇಮಿಸಲ್ಪಟ್ಟವರು ಕಾಯಂ ನೌಕರರಾಗಿರಲೇ ಬೇಕು. ಆದ್ದರಿಂದ ಹಾಸ್ಟೆಲ್ ನೌಕರರಿಗೆ ತಮ್ಮ ಸೇವೆಯನ್ನು ಕಾಯಂಗೊಳಿಸಬೇಕೆಂದು ಕೇಳುವ ಎಲ್ಲ ಹಕ್ಕಿದೆ. ಇದಕ್ಕಾಗಿ ನೌಕರರು ನಡೆಸುವ ಹೋರಾಟಕ್ಕೆ ಸಿಐಟಿಯು ಬೆಂಬಲ ಇದ್ದೇ ಇರುತ್ತದೆ ಎಂದು ಹೇಳಿದರು.

ಸಚಿವರಿಂದ ಮನವಿ ಸ್ವೀಕಾರ

ಸಂಜೆ 4 ಗಂಟೆ ಸುಮಾರಿಗೆ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಎಚ್. ಆಂಜನೇಯ ಅವರು ಸ್ಥಳಕ್ಕೆ ಆಗಮಿಸಿದರು. ನೌಕರರ ಬೇಡಿಕೆಗಳ ಮನವಿ ಪತ್ರವನ್ನು



ಓದಿ ಅವರಿಗೆ ನೀಡಲಾಯಿತು. ಸಚಿವರು ಮಾತನಾಡಿ ನೌಕರರ ಸೇವೆಯನ್ನು ಕಾಯಂಗೊಳಿಸಬೇಕೆಂಬ ಬೇಡಿಕೆಯ ಕುರಿತು ಸರ್ಕಾರ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಬೇಡಿಕೆ ಪತ್ರದಲ್ಲಿರುವ ನೌಕರರ ಬೇಡಿಕೆಗಳ ಕುರಿತು ಚರ್ಚಿಸಲು ಜಂಟಿ ಸಭೆಯನ್ನು ಕರೆಯುವುದಾಗಿ ಹೇಳಿದರು. ಸಚಿವರು ನೀಡಿದ ಭರವಸೆಯ ಮೇರೆಗೆ ಧರಣಿಯನ್ನು ಮುಕ್ತಾಯಗೊಳಿಸಲಾಯಿತು.

ಪ್ರಥಮ ಸಮ್ಮೇಳನ

ಮರುದಿನ (ಅಕ್ಟೋಬರ್23) ಬೆಂಗಳೂರು ವಿಶ್ವ ವಿದ್ಯಾಲಯದ ಸೆನೆಟ್ ಸಭಾಭವನದಲ್ಲಿ ಹಾಸ್ಟೆಲ್ ಹಾಗೂ ವಸತಿ ಶಾಲೆಗಳ ಹೊರಗುತ್ತಿಗೆ ನೌಕರರ ಪ್ರಥಮ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ನಿತ್ಯಾನಂದಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ. ಎನ್ ನಾಗರಾಜ್ ಅವರು ಸಮ್ಮೇಳನವನ್ನು ಉಧ್ಘಾಟಿಸುತ್ತಾ " ಸರ್ಕಾರ ಅಂಗನವಾಡಿಗಳಲ್ಲಿ ಕೆಲಸಮಾಡುತ್ತಿರುವವರಿಗೆ, ಶಾಲೆಗಳಲ್ಲಿ ಬಿಸಿಯೂಟ ತಯಾರಿಸುವವರಿಗೆ, ಹಾಸ್ಟೆಲ್‌ಗಳಲ್ಲಿ ಅಡುಗೆ ಮಾಡುವವರಿಗೆ ಅತ್ಯಂತ ಕಡಿಮೆ ಸಂಬಳ ಕೊಡುತ್ತಾ ಅವರ ಬಡತನ ಮತ್ತು ಅಸಹಾಯಕತೆಯ ದುರುಪಯೋಗ ಪಡೆಯುತ್ತಿದೆ" ಎಂದು ಟೀಕಿಸಿದರು. ಇಂತಹ ಬಡವರ-ವಿರೋಧಿ ಸರ್ಕಾರದಿಂದ ನ್ಯಾಯ ಸಿಗಬೇಕಾದರೆ ನೌಕರರು, ಕಾರ್ಮಿಕರು ಬಲಿಷ್ಠವಾದ ಸಂಘವನ್ನು ಕಟ್ಟಿಕೊಂಡು ಛಲದಿಂದ ಹೋರಾಡಬೇಕು ಎಂದರು.

ಸಮ್ಮೇಳನದ ಮುಖ್ಯ ಅತಿಥಿ-ಯಾಗಿ ಆಗಮಿಸಿದ್ದ ಸಿಐಟಿಯು ರಾಜ್ಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಕೆ.ಎನ್. ಉಮೇಶ ಅವರು ಮಾತನಾಡುತ್ತಾ 'ಸಮಾನ ಕೆಲಸಕ್ಕೆ ಸಮಾನ ವೇತನ' ನೀಡಬೇಕೆಂಬ ಸುಪ್ರೀಂ ಕೋರ್ಟ್ ಆದೇಶ ಹಾಸ್ಟೆಲ್ ಹಾಗೂ ವಸತಿ ಶಾಲೆಗಳಿಗೂ ಅನ್ವಯಿಸುತ್ತದೆ ಎಂದರು. ಹಾಸ್ಟೆಲ್ ನೌಕರರು ಹೊರಗುತ್ತಿಗೆ ನೌಕರರೆಂದು ಪರಿಗಣಿಸಲ್ಪಟ್ಟಿದ್ದರೂ ಗುತ್ತಿಗೆ ಕಾರ್ಮಿಕರ ಕಾಯ್ದೆ ಅಡಿಯಲ್ಲಿ ಹಾಸ್ಟೆಲ್ ನೌಕರರಿಗೂ ಕನಿಷ್ಠ ವೇತನ, ಇ.ಎಸ್.ಐ ಮತ್ತು ಪಿ.ಎಫ್ ಸೌಲಭ್ಯ, 5ನೇ ತಾರೀಖಿನೊಳಗಾಗಿ ಸಂಬಳ ಪಾವತಿ, ರಜೆ ಮತ್ತು ರಜೆ ಸಂಬಳ, ಹೆರಿಗೆ ರಜಾ ಮತ್ತು ಹೆರಿಗೆ ಭತ್ಯೆ ಮೊದಲಾದ ಸೌಲಭ್ಯಗಳನ್ನು ಗುತ್ತಿಗೆದಾರ ಒದಗಿಸಬೇಕು. ಗುತ್ತಿಗೆದಾರ ನೌಕರರಿಗೆ ಕಾನೂನುಬದ್ಧ ಸೌಲಭ್ಯಗಳನ್ನು ನೀಡದಿದ್ದರೆ ಸಮಾಜಕಲ್ಯಾಣ ಇಲಾಖೆಯೇ ಜವಾಬ್ದಾರವಾಗುತ್ತದೆ. ಕಾರ್ಮಿಕ ಇಲಾಖೆಗೆ ದೂರುಗಳನ್ನು ಸಲ್ಲಿಸಿ ನ್ಯಾಯ ಪಡೆಯಬಹುದೆಂದು ಹೇಳಿದ ಅವರು ಹೊಸದಾಗಿ ಸ್ಥಾಪನೆಯಾಗುತ್ತಿರುವ ಸಂಘವನ್ನು ಬಲಪಡಿಸಿ ಎಂದು ಕರೆನೀಡಿದರು.

ನೂತನ ಸಂಘದ ಉಪನಿಯಮಗಳನ್ನು ಚರ್ಚಿಸಿ ಅಂಗೀಕರಿಸಲಾಯಿತು. ರಾಜ್ಯಮಟ್ಟದ ಪದಾಧಿಕಾರಿಗಳನ್ನು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು. ನಿತ್ಯಾನಂದಸ್ವಾಮಿ ಸಂಘದ ಅ ಧ್ಯಕ್ಷರಾಗಿಯೂ, ಭೀಮಶೆಟ್ಟಿ ಯಂಪಳ್ಳಿ ಪ್ರಧಾನ ಕಾರ್ಯದರ್ಶಿಗಳಾಗಿಯೂ, ಚಂದ್ರಪ್ಪ ಹೊಸ್ಕೇರಾ ಖಜಾಂಚಿಯಾಗಿಯೂ ಆಯ್ಕೆಯಾದರು. ಆರಂಭದಲ್ಲಿ ಚಂದ್ರಪ್ಪ ಹೊಸ್ಕೇರಾ ಎಲ್ಲರನ್ನೂ ಸ್ವಾಗತಿಸಿದರು. ಕೊನೆಯಲ್ಲಿ ಭೀಮಶೆಟ್ಟಿ ಯಂಪಳ್ಳಿ ವಂದಿಸಿದರು. ಹನುಮೇಗೌಡ ಕಾರ್ಯಕ್ರಮ ನಿರೂಪಣೆ ಮಾಡಿದರು.

'ಕಾಶಿ'ಯಲ್ಲಿ ಕಂಡ ಮುಖ



ಇತ್ತೀಚೆಗೆ ಉತ್ತರ ಭಾರತ ಪ್ರವಾಸ ಹೋಗಿದ್ದಾಗ ಕೆಲವು ಧಾರ್ಮಿಕ ಕ್ಷೇತ್ರಗಳಲ್ಲಿ ಗಳಿಸಿದ ಕೆಲವು ಅನುಭವದ ಕುರಿತ ಒಂದು ಬರಹ ಇಲ್ಲಿದೆ.

ಆರ್. ರಾಮಕೃಷ್ಣ

'ಹಿಂದೂ'ಗಳ ಧಾರ್ಮಿಕ ನಂಬಿಕೆಯ ಪ್ರಕಾರ ಕಾಶಿಯಲ್ಲಿ ಮರಣ ಹೊಂದಿದವರಿಗೆ ಹುಟ್ಟು-ಸಾವು, ಪುನರ್ಜನ್ಮ, ಜನ್ಮಾಂತರಗಳ ಚಕ್ರದಿಂದ ಮುಕ್ತಿ ದೊರೆಯುತ್ತದೆ.

ವಾರಣಾಸಿ, ಬನಾರಸ್ ಎಂಬ ಹೆಸರಿನಿಂದಲೂ ಕರೆಯಲಾಗುವ ಕಾಶಿ ಇವತ್ತಿಗೂ ಜನವಸತಿ ಇರುವ ಜಗತ್ತಿನ ಪ್ರಾಚೀನ ನಗರಗಳ ಪೈಕಿ ಅತ್ಯಂತ ಪ್ರಾಚೀನ ನಗರಿ ಅಂತ ಅಂತರ್ಜಾಲದ ಮಾಹಿತಿ ಹೇಳುತ್ತಿದೆ.

ಹಿರಿಯರು, ಮಕ್ಕಳು, ಕುಟುಂಬ ಸದಸ್ಯರು ವಾರಣಾಸಿ ರೈಲು ನಿಲ್ದಾಣದಿಂದ ಹೊರಟು ನದಿತಟಕ್ಕೆ ಬರುವ ಹೊತ್ತಿಗೆ ಆಗಲೇ ಏರು ಬಿಸಿಲಿನ ಹೊತ್ತು. ಅಲ್ಲಿ ಉದ್ದಕ್ಕೂ ಪ್ರಾಚೀನ ದೇಗುಲಗಳು ಮತ್ತು 'ಹರಿಶ್ಚಂದ್ರ ಘಾಟ್', 'ವಿಜಯ ಘಾಟ್' ಇತ್ಯಾದಿ 'ಮುಕ್ತಿಕೇಂದ್ರ'ಗಳ ಪಕ್ಕದಲ್ಲಿದ್ದ ಆ ಕಲ್ಲಿನ ಮೆಟ್ಟಿಲುಗಳ ಮೇಲೆ ನಿಂತು ನೋಡಿದರೆ ಕೆಳಗೆ ತಣ್ಣಗೆ ಹರಿಯುವ ಗಂಗಾನದಿ. ನೀರಿನ ಬಣ್ಣ .. ಕ್ಷಮಿಸಿ ಆ ಬಗ್ಗೆ ದಯಮಾಡಿ ಏನೂ ಕೇಳಬೇಡಿ.

ದೋಣಿ ಹಿಡಿದು ನಡುಗಡ್ಡೆಯಂತಹ ಜಾಗಕ್ಕೆ ಹೋದ ಮೇಲೆ, ನಂಬಿಕೆ ಇರುವವರು ಮತ್ತು ಒಂದು ಕೈ ನೋಡೇ ಬಿಡೋಣ ಅಂತ ಧೈರ್ಯ ಮಾಡಿವದವರು ನೀರಿನಲ್ಲಿ ಮುಳುಗು ಹಾಕಿದರು. ಬಟ್ಟೆ ಬದಲಿಸಲು ಜಾಗವುಂಟೇ? ಏನು ಪಜೀತಿ. ದೋಣಿ ಈಗ ಕಾಶಿ ವಿಶ್ವನಾಥ ದೇಗುಲ ಪ್ರವೇಶ ಮಾರ್ಗದ ಕಡೆಗೆ ಹೊರಟಿತು.

ಶಿಲಾ ಗುಹಾಂತರ ಮಾರ್ಗದಂತಹ ಚಿಕ್ಕ ಓಣಿಗಳಲ್ಲಿ ನುಸುಳಿ ಮುಂದುವರಿದರೆ ಎಡ-ಬಲ ಉದ್ದಕ್ಕೂ ಪ್ರಾಚೀನ, ಮಧ್ಯಕಾಲೀನ, ದೇವಾಲಯಗಳು, ಎರಡು ಮೂರು ಅಂತಸ್ತಿನ ಮನೆ, ಕಟ್ಟಡಗಳೂ ಅಷ್ಟೇ. ಹಲವು ಧರೆಗುರುಳುವೆವು ನಾವು ಎನ್ನುವಂತೆ ವಾಲಿಕೊಂಡಿರುವುವು.

ದೋಣಿ ನಡೆಸುವವರೇ ದಾರಿ ತೋರುವರು. ಅವರನ್ನ ಕೇಳಬೇಕಿತ್ತು- ಈ ಪ್ರಶ್ನೆ. ಈ ಊರಲ್ಲಿ ಎಷ್ಟು ವರ್ಷಕ್ಕೊಮ್ಮೆ ಕಸ ಗುಡಿಸುವರು- ಹಾದಿ ಬೀದಿ ಕೇರಿ. ಹೇಗೆ ಜೀವನ ಇಲ್ಲಿ ? ಎಲ್ಲವೂ ರಸ್ತೆಯ ಮೇಲೇ. ರಸ್ತೆ ಕಾಣುತ್ತಲೇ ಇಲ್ಲವಲ್ಲ, ಯಾವುದೂ ಚರಂಡಿ, ಮೋರಿ ?

ಬನಾರಸ್ ಸೀರೆ ಮಳಿಗೆಗಳು. ಸರ, ಬಳೆ, ಮುತ್ತು, ಓಲೆ ಆಭರಣ ಅಂಗಡಿಗಳು. ಹಾಂ. ದೇಗುಲ ಸಿಕ್ಕಿತು. ಪಕ್ಕ ಆ ಅಂಗಡಿಯ ಮಳಿಗೆಯೊಳಗೆ ಎಲ್ಲರ ಪಾದರಕ್ಷೆಗಳನ್ನು ಕಳಚಿ ಇಡಬೇಕಂತೆ. ಸೂಚನೆ. 'ಪೂಜಾ ಸಾಮಾಗ್ರಿ ಕೊಳ್ಳಿ'. ಮತ್ತೊಂದು ಸೂಚನೆ, ಉಹುಂ ಅವಕಾಶವಿಲ್ಲ, ಬೇಡ ಎರಡನೇ ಯೋಚನೆ. ಕರ್ಪೂರ, ಹೂ, ಬತ್ತಿಗಳ ವಾಸನೆ. ಹತ್ತಿಯ ಸಣ್ಣ ಸಣ್ಣ ಉಂಡೆಯಂತಹ ಕೆಲವು ಬಿಳಿಯ ತಿಂಡಿಗಳು, ಒಂದರೆಡು ಹೂವು, ಊದುಬತ್ತಿ ಇತ್ಯಾದಿ-ಬುಟ್ಟಿ ಬೆಲೆ- 250.00 ರೂಪಾಯಿ ಮಾತ್ರಾನೆ. ಕುಟುಂಬಕ್ಕೊಂದು, ಒಟ್ಟು 500.00 ರೂಪಾಯಿ. ಗುಣಾಕಾರ ಸರಿನೇ ?

ಸಾಲಿಗೆ ಸೇರುವ ಮೊದಲು ಪೊಲೀಸ್ ತಪಾಸಣೆ. ಒಳ್ಳೆಯದೇ. ಮುಂದೆ ಹೋಗೋಣ. ಇದೋ ದೇಗುಲದ ಪ್ರಾಂಗಣ. 'ಸಾಲಾಗಿ ಬನ್ನಿ...' ದೇಗುಲ ಟ್ರಸ್ಟ್‌ನ ಗುರುತಿನ ಪತ್ರ ತೋರುವ '.. ಮಣ'ರ 'ಮಾರ್ಗದರ್ಶನ'. ಪಾಪ ಜನ ಸಾಲಿನಲ್ಲೇ ಬರುತ್ತಿದ್ದಾರೆ. 'ಹಾಂ. ಹೀಗೆ ಹೋಗಿ. ಹಾಂ ನೀವೇನು ಕರ್ನಾಟಕದವರಾ ? ಬೆಂಗಳೂರಿನಿಂದ ಬಂದಿದ್ದೀರಾ ? ನಮಗೆ ಹುಬ್ಬಳ್ಳಿ ಗೊತ್ತು. ಅಲ್ಲಿ ನಮ್ಮ ಬಂಧುಗಳಿದ್ದಾರೆ. .. ..ಹಾಂ ಹೀಗೆ ನಡೆಯಿರಿ.' ಮಾರ್ಗದರ್ಶನ ಕಂ ಉಭಯ ಕುಶಲೋಪರಿ. 'ಹಾಂ. ಇವ ನನ್ನ ಮಗ. ಇವನೂ ಇಲ್ಲೇ ಈ ದೇಗುಲದಲ್ಲೇ ಸೇವೆ ಮಾಡುತ್ತಾನೆ.'

'ಹಾಂ, ಶಿವಲಿಂಗ ಮುಟ್ಟಿ ಬಂದಿರಾ, ಇಲ್ಲಿ ಬನ್ನಿ. ಅಲ್ಲಿ, ಅದು ವಿರೂಪಾಕ್ಷಿ ಗೌರಿ.. '

ಅಲ್ಲಿ ಕಟ್ಟೆಯ ಮೇಲೆ ಕುಳಿತವರು ಪರೋಹಿತರು. ಅಲ್ಲ- ಮಂಡಿ ಗಲ್ಲಾ ಪೆಟ್ಟಿಗೆ ಯಜಮಾನರು. ದಂಪತಿಗಳ ಎದುರು ಎರಡು ಮಂತ್ರ. ಆಮೇಲೆ '201 ರೂ. ದಕ್ಷಿಣೆ ಇಡಿ' ಅಂದರಂತೆ ಮಹಾನುಭಾವರು. 'ಒಂದು ರೂಪಾಯಿ ಕಾಯಿನ್ ಇದೆಯಾ ಯಾರ ಹತ್ತಿರನಾದ್ರು ? ಸಿಗ್‌ತಾ ಇಲ್ವಲ್ಲ.". ".. ಇಲ್ಲ ಇಲ್ಲ, ಒಂದು ರೂಪಾಯಿ ಇಡಲೇ ಬೇಕು. ದುಡ್ಡು ಮುಖ್ಯ ಅಲ್ಲ. ಆದರೆ ... ಭಕ್ತಿ ಮುಖ್ಯ."

'ದೂರದ ದೇಗುಲ. ದಿನವೂ ಬರುತ್ತೇವೆಯೆ? ಹಾಂ, ಒಂದು ರೂ. ನಾಣ್ಯ ಸಿಕ್ಕಿತು.' ಎರಡು ಗಾಂಧಿ ನೋಟು ಮೊದಲೇ ಕೈಲಿದ್ದಿತು.

ಮತ್ತೆ 'ಮಾರ್ಗದರ್ಶನ'. 'ಹಾಂ, ಇಲ್ಲಿ ಅವಿಮುಕ್ತ ವಿನಾಯಕ'. ಕರುಣಾಮಯಿಗಳು ಇಲ್ಲಿ ಪರೋಹಿತರು. ಅವರು ಇಡಲು ಹೇಳಿದ್ದು ಬರೀ 101 ರೂ. ಈಗ ಭಕ್ತರು ಗೊಂದಲಗೊಂಡರು. ಇನ್ನೂ ಎಷ್ಟು ದೇವರುಗಳಿವೆ ಈ ದೇಗುಲದಲ್ಲಿ.?? ಯಾರು ಉತ್ತರಿಸುವವರು?.

ಮತ್ತೆ 'ಮಾರ್ಗದರ್ಶನ'. 'ಅಗೋ, ಅಲ್ಲಿ ನೋಡಿ. ಪಕ್ಕ. ದೇಗುಲ ಮೊದಲು ಅಲ್ಲಿತ್ತು. '...ಮರು' ಅದನ್ನ ಒಡೆದು ಹಾಕಿದರು. ಅಲ್ಲಿ '.. ಸೀದಿ' ಕಟ್ಟಿದ್ದಾರೆ ನೋಡಿ. ಆಮೇಲೆ ಅಲ್ಲಿಂದ ಶಿವಲಿಂಗ ತಂದು ಇಲ್ಲಿ ಪಕ್ಕ ಸ್ಥಾಪಿಸಿ ಇಲ್ಲಿ ಪಕ್ಕ ದೇವಸ್ಥಾನ ಕಟ್ಟಿರುವುದು. ಆಯ್ತಾ ನೋಡಿದ್ದು. ಇತ್ತ ಬನ್ನಿ. ಹಾಂ. ಒಂದು ಎರಡು, ಮೂರು, ನಾಲ್ಕು.. .., ಐದು. ಐದು ಜನರ ಇದ್ದೀರಿ. 5*150=750. ಹಾಂ. ಏಳುನೂರ ಐವತ್ತು ರೂಪಾಯಿ ಆಯ್ತು. 750.00 ರೂಪಾಯಿ ಕೊಡಿ.

'ಹಾಂ !! 750 ರೂಪಾಯಿನಾ? ಯಾಕೆ ಕೊಡಬೇಕು?' 'ಐದು ಜನ ಇದ್ದೀರಲ್ಲ. ಒಬ್ಬರಿಗೆ 150 ರೂಪಾಯಿ ಪ್ರಕಾರ 5 ಜನಕ್ಕೆ 750 ರೂಪಾಯಿ ಆಯ್ತು.' 'ಲೆಕ್ಕ ಬಿಡಿ, ದುಡ್ಡು ಯಾತಕ್ಕೆ ಕೊಡಬೇಕು ಅದನ್ನ ಹೇಳಿ?' ' .. ..ಮಣರ ದಕ್ಷಿಣೆ'. 'ಅಮ್ಮಮ್ಮ!! ಎಷ್ಟು 750 ರೂಪಾಯಾ? ಇದೇನು ... ದೇವಸ್ಥಾನನಾ ಅಥವಾ... ಇಲ್ಲಿ ಧರ್ಮ ಅಂತ ಏನಾದರೂ ಇದೆಯಾ? ರೀ.. ಎಲ್ಲಿ ಹೋಗ್ತಾ ಇದ್ದೀರ ? ಇರ್ರಿ, ಆ ಕಡೆ ಹೋಗ್ ನಿಂತುಕೊಂಡ್ರ, ಹೊಸ ಬಕರಾಗಳನ್ನು ಹುಡುಕೋದಕ್ಕೆ !!!

ಯಾರಿಗೆ ದೂರುವುದು. ವಿಶ್ವನಾಥನಿಗೆ? ಅವನೇ ಸರಿ. ಬೇರೆ ಯಾ ದೂರಿದರೂ ಅದಕ್ಕೂ ದಕ್ಷಿ ಇಡಬೇಕೇನೋ ಇಲ್ಲಿ ?

■ ■ ■

ಊರು ಅಮೃತಸರ. ಸ್ಥಳ-ಸ್ವರ್ಣ ಮಂದಿರ. ಪ್ರ ಗುರುದ್ವಾರ. ಹೋಗುವ ದಾರಿಯಲ್ಲಿ ಪ್ರಸಾದ. ಉಚಿತ. ಪ್ರವೇಶದಲ್ಲೇ 'ಅಧಿಕೃತ ಪಾದರಕ್ಷೆ-ಕೇಂದ್ರ ಶುಲ್ಕವಿಲ್ಲ-ಖಚಿತ. ಒಂಟಿ ಸಾಲು. ಕಾಲಿಟ್ಟೊಡನೆ ಒಳಗೆ ಎಲ್ಲರಿಗೂ ಸಿಹಿನೀರ ತುಂಬಿದ ಸ್ವಚ್ಛ ಬಟ್ಟಲು. ಒಳಗೆ ಅಲ್ಲಿ ನೀಲನೀರ ಸರೋವರ. ಎಲ್ಲಿಯಾದ ಕಸದ ಸುಳಿವು ಕಂಡಿರಾ ? ಇಲ್ಲ. 'ಸ್ವಯಂ ಸೇವಕ'ರುಂಟು. ಎಲ ಎಲ 'ಮಾರ್ಗದರ್ಶಕ'ರು ಒಬ್ಬರೂ ಇಲ್ಲವಲ್ಲ. ??

■ ■ ■

ಊರು ದೆಹಲಿ. ಸ್ಥಳ: ಲೋಟಸ್ ಮಹಲ್. ಆಹಾ ಕಮಲದ ಆಕಾರದ ವಿಶಾಲ ಮಂದಿರ. ಸ್ವಚ್ಛ. ಪ್ರಶಾಂತ. ಸ್ವ ಸೇವಕರು ಹೇಳಿದರು. ಇದು ಬಹಾಯಿ ಧರ್ಮದ ಪ್ರಾರ್ಥನಾ ಮಂದಿರ. ಸಾಲಿ ಹೋಗಿ. ಹತ್ತು ನಿಮಿಷ ಒಳಗೆ ಅವಕಾ ನಿಶ್ಯಬ್ದತೆ ಮುಖ್ಯ ಗಮನಿಸಿ ಅದು. ಏನು ಪ್ರಾರ್ಥನೆ ಮಾಡಿಕೊಳ್ಳುವಿರೋ ನಿಮಗೆ ಬಿಟ್ಟದ್ದು. ಸ್ವಚ್ಛತೆ ಕಾಪಾಡಿ, ಮಂದಿರ-ಇ ಸುಂದರ.

■ ■ ■

ಆ ಕೆಂಪು ಕೋಟೆಗಳೊಳಗೆ ಅಲ್ಲಿ 'ನಮಾಜು' ನಡೆಯುವ ಜಾಗಗಳೆಷ್ಟೋ ನಡುವೆ ಸಿಕ್ಕದ್ದು. ಎಷ್ಟು ದರ್ಗಾಗಳೋ ಒಳ ಹೊಕ್ಕು ಹೊರ ಬಂದದ್ದು. ಪ್ರಾರ್ಥಿಸುವವರು, ಪೂಜಿಸುವವರು, ಫಕೀರರು ಇದ್ದಾರೆ. 'ಮಾರ್ಗದರ್ಶನ'ವ 'ಮಾರ್ಗದರ್ಶಕ'ರಿಲ್ಲ.

ಬಹಾಯಿ ಮಂದಿರದಲ್ಲಿ ಬೇಕಿದ್ದವರಿಗೆ 'ಮಾಹಿತಿ' ಕೇಂದ್ರವಿತ್ತು. ನಮಗೆ ಬೇಕಿರಲಿಲ್ಲ. ಸಮಯವೂ ಇರ

■ ■ ■

ಓ ತಂದೆ, ಕಾಶಿ ವಿಶ್ವನಾಥ. ಇಗೋ ಹೊರಟಿರುವೆವು ಬಿಟ್ಟು ಬಂದ ಊರಿಗೆ ಎನಗೆ ಜನ್ಮ-ಪುನರ್‌ಜನ್ಮಗಳ ಚಕ್ರದಿಂದ ಮುಕ್ತಿ ಬೇಡ. ಜನ್ಮ ಇನ್ನೂ ಎಷ್ಟಿದ್ದರು ಇರಲಿ ಅದು ಹಾಗೆ. ನನ್ನ ಪಾಲಿನದು ನನಗೇ. ತಂದೆ, ದಯಮಾಡಿ ಈ ಕಾಶಿ ದುರ್ಗಾ ಉತ್ಸವದಲ್ಲಿ ಕೇಳುತಿರುವ ಉಸ್ತಾದ್ ಅಹಮದ್‌ರ ಶಹನಾಯಿ ಇ ಹಾಗೇ ಉಳಿಸು. ಪಂಡಿತ ರವಿಶಂಕರ ಸಿತಾರ್ ಇನಿದನಿಯನು ಅದರಲ್ಲಿ ಬೆರ ಜೊತೆಗೆ 'ಕಾಶಿಕ್ಷೇತ್ರ'ಕ್ಕೆ ಆ '..ಮಣ ಪುರೋಹಿತರ ಮಾರ್ಗದರ್ಶನ'ದಿಂದ ಮುಕ್ತಿ ಕೊಡಿಸು. ಪ್ರಾಚೀನ ಕೊಳೆ-ಕಸ ತೊಳೆದು ಹಾಕುವ ಒಂದು ಒಳ್ಳೆಯ ಸುರಿಸು-ಗಂಗೆಯನು ನೀಲ ಆಗಸದಂ ಹೊಳೆಸು.

ಜನಶಕ್ತಿ
ಕನ್ನಡ ವಾರಪತ್ರಿಕೆ

...ಮತ್ತೆ ಬರಲಿವೆ ಟಾಟಾ, ಬಿರ್ಲಾಗಳ ಬ್ಯಾಂಕುಗಳು

...ಂದಿನ ಕಾಂಗ್ರೆಸ್ ಪ್ರಧಾನಿಗಳ 'ಸಾಧನೆ'ಗೆ ಈಗಿನ ಕಾಂಗ್ರೆಸ್ ಪ್ರಧಾನಿಯ ಕೊಡಲಿಯೇಟು

ಎನ್.ಕೆ. ವೇದರಾಜ

...ಯು ಪಿಎ-2 ಸರಕಾರ ಖಾಸಗೀ ...ದಲ್ಲಿ ಹೊಸ ಬ್ಯಾಂಕುಗಳನ್ನು ತೆರೆಯಲು ...ಸ್ ಕೊಡುವ ತರಾತುರಿಯಲ್ಲಿದೆ. ಈ ...ಂತ್ಯದೊಳಗೆ ಈ ಕೆಲಸ ಮಾಡಿ ...ಸುವ ಆತುರ ಅದಕ್ಕಿರುವಂತಿದೆ.

...969ರಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣದ ...ರ ಖಾಸಗಿ ಬ್ಯಾಂಕುಗಳಿಗೆ ಲೈಸೆನ್ಸ್ ...ಕೆ ಹೊಸದೇನಲ್ಲ. ಇದು ಮೂರನೇ ... ಉದಾರೀಕರಣದ ಯುಗ ಆರಂಭವಾದ ...ತರ 1994ರಲ್ಲಿ ಮತ್ತು ...ರಲ್ಲಿ ಇಂತಹ ಲೈಸೆನ್ಸ್‌ಗಳನ್ನು ...ಲಾಗಿತ್ತು. ಆಗ ರಿಝರ್ವ್ ಬ್ಯಾಂಕ್ ...ಷ್ಟವಾಗಿ ಕಾರ್ಪೊರೇಟ್‌ಗಳಿಗೆ ...ತಹ ಲೈಸೆನ್ಸ್‌ಗಳನ್ನು ನಿಷೇಧಿಸಿತ್ತು. ...ರೆ ಈ ಬಾರಿಯ ವಿಶೇಷವೆಂದರೆ ...ಾ, ಬಿರ್ಲಾ ಮತ್ತು ಅಂಬಾನಿಗಳಂತಹ ... ಕಾರ್ಪೊರೇಟ್‌ಗಳೂ ತಮ್ಮದೇ ...ಗಳನ್ನು ತೆರೆಯಲು ಅನುಮತಿ ...ಲಾಗುತ್ತಿದೆ. ಈ ಮೂಲಕ ಅಂತರ್ರಾಷ್ಟ್ರೀಯ ...ಕಾಸು ಬಂಡವಾಳದ ಒತ್ತಡಗಳಿಗೆ ...ಗೂ ಯುಪಿಎ-2 ಸರಕಾರ ಶರಣಾಗುವ ...ಾರಿ ನಡೆಸಿದೆ.

...969ರ ಮೊದಲು ಪ್ರತಿಯೊಂದು ...ಡ್ಡ ಕಾರ್ಪೊರೇಟ್ ಗುಂಪು ತನ್ನದೇ ...ಂಕ್ ಹೊಂದಿತ್ತು. ಈ ಬ್ಯಾಂಕುಗಳು ...ರ್ವಜನಿಕರಿಂದ ಠೇವಣಿಗಳನ್ನು ...ಗ್ರಹಿಸಿ ತಮ್ಮ ಗುಂಪಿನ ಕಂಪನಿಗಳ ...ಗಳನ್ನಷ್ಟೇ ಈಡೇರಿಸಿಕೊಳ್ಳುತ್ತಿದ್ದವು. ...ರ ಪರಿಣಾಮವೆಂದರೆ ಹಣಕಾಸು ...ರ್ವಜನಿಕರದ್ದು, ಆದರೆ ಸಾಲ ಸಿಗುತ್ತಿದ್ದುದು ...ಕಾರ್ಪೊರೇಟ್‌ಗಳ ಉದ್ದಿಮೆಗಳಿಗೆ ಮಾತ್ರ, ...ಮಾನ್ಯ ರೈತರಿಗೆ, ಸಣ್ಣ ಉದ್ಯಮಿಗಳಿಗೆ ...ಂಕ್ ಸಾಲಗಳ ದಾರಿ ಸಂಪೂರ್ಣವಾಗಿ ...ಚ್ಚಿತ್ತು.

ಬ್ಯಾಂಕುಗಳು 'ಸಾಲದ ಮಾರುಕಟ್ಟೆ'ಗಳಲ್ಲಿ ವ್ಯವಹಾರ ನಡೆಸುವ ಸಂಸ್ಥೆಗಳು. ಆದ-ರೆ ಈ 'ಸಾಲ ಮಾರುಕಟ್ಟೆ'ಗೂ, ಇತರ 'ಸರಕುಗಳ ಮಾರುಕಟ್ಟೆ'ಗೂ ವ್ಯತ್ಯಾಸವಿದೆ. ಇತರ ಮಾರುಕಟ್ಟೆಗಳಲ್ಲಿ ಮಾರುವವರು ಖರೀದಿಸುವವರ ಜೇಬಲ್ಲಿ ಇರುವ ಹಣಕ್ಕೆ ತಮ್ಮ ಸರಕನ್ನು ಮಾರುತ್ತಾರೆ, ಆದರೆ 'ಸಾಲ ಮಾರುಕಟ್ಟೆ'ಯಲ್ಲಿ ಹಾಗಲ್ಲ; ಗ್ರಾಹಕರ ಜೇಬಿಗೆ ಬ್ಯಾಂಕುಗಳು ಹೆಚ್ಚಿನ ಹಣವನ್ನು ಹಾಕುತ್ತಾರೆ. ಅಂದರೆ ಅವರು ಹೆಚ್ಚಿನ ಸಂಪನ್ಮೂಲಗಳ ಮೇಲೆ ಹತೋಟಿ ಪಡೆಯುವಂತೆ ಮಾಡುತ್ತಾರೆ. ಆದ್ದರಿಂದ ಈ ವ್ಯವಹಾರ ಸಾಮಾಜಿಕವಾಗಿ ಮಹತ್ವದ್ದಾಗುತ್ತದೆ, ಬ್ಯಾಂಕುಗಳು ಯಾರಿಗೆ ಎಷ್ಟು ಸಾಲ ನೀಡುತ್ತವೆ ಎಂಬುದು ಸಮಾಜದ ಬೆಳವಣಿಗೆಯ ದಿಕ್ಕನನು ನಿರ್ಧರಿಸುತ್ತದೆ. ಈ ಕಾರಣಕ್ಕಾಗಿ ಈ ವ್ಯವಹಾರದ ಮೇಲೆ ಸಾಮಾಜಿಕ ಹತೋಟಿ ಅಗತ್ಯವಾಗಿತ್ತು ಎನ್ನುತ್ತಾರೆ ಪ್ರಸಿದ್ಧ ಆರ್ಥಿಕತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ಆಗಿನ ಕಾಂಗ್ರೆಸ್ ಸರಕಾರ ಈ ರೀತಿಯ 'ಸಾಮಾಜಿಕ ಹತೋಟಿ'ಯ ಪ್ರಯತ್ನವನ್ನೂ ನಡೆಸಿತು. ಆದರೆ ಕಾರ್ಪೊರೇಟ್‌ಗಳ ಹತೋಟಿಯಲ್ಲಿದ್ದ ಬ್ಯಾಂಕಿಂಗ್ ವಲಯ ಅದಕ್ಕೂ ಸ್ಪಂದಿಸಲಿಲ್ಲ. ತಮ್ಮ ಸ್ವಂತದ ಕಂಪನಿಗಳ ಹಿತಗಳಷ್ಟೇ ತಮಗೆ ಎಂದು ಅವು ಭಾವಿಸಿದಂತಿತ್ತು. ನಿರ್ವಾಹವಿಲ್ಲದೆ ನಂತರ ಸರಕಾರ ಬ್ಯಾಂಕ್ ರಾಷ್ಟ್ರೀಕರಣದ ಕ್ರಮಕ್ಕೆ ಮುಂದಾಯಿತು.

ಆಗ ಇದೊಂದು 'ಮಹಾಸಾಧನೆ' ಎಂದು ಪ್ರಚಾರ ನಡೆಸಿದ ಕಾಂಗ್ರೆಸ್ ಅದರ ಚುನಾವಣಾ ಫಲವನ್ನೂ ಅನುಭೋಗಿಸಿತು. ಇದೊಂದು ಮಹತ್ವದ ಪ್ರಗತಿಪರ ಕ್ರಮ ಎಂಬುದರಲ್ಲಿ ಸಂದೇಹವಿಲ್ಲ. ಭಾರತದ ಜನಸಾಮಾನ್ಯರ ಹಸಿವನ್ನು ಹಿಂಗಿಸಲು ಅಗತ್ಯವಾಗಿದ್ದ 'ಹಸಿರು ಕ್ರಾಂತಿ'ಯನ್ನು ಸಾಧ್ಯವಾಗಿಸಿದ ಪ್ರಮುಖ ಕಾರಣಗಳಲ್ಲಿ ಕೃಷಿಗೆ ಹೆಚ್ಚಿನ ಹಣ ದೊರೆಯಲು ಸಾಧ್ಯವಾದದ್ದು ಬ್ಯಾಂಕ್ ರಾಷ್ಟ್ರೀಕರಣದ ನಂತರವೇ.


ಆದರೆ ಈಗ ಅದೇ ಪಕ್ಷದ ನೇತೃತ್ವದಲ್ಲಿನ ಸರಕಾರ ಆ 'ಸಾಧನೆ'ಯನ್ನು ಶೂನ್ಯಗೊಳಿಸುತ್ತಿದೆ. ಈಗ ಒಂದೆಡೆಯಲ್ಲಿ ಆಹಾರ ಭದ್ರತಾ ಕಾನೂನು ತನ್ನ ಅಮೋಘ ಸಾಧನೆ ಎಂದು ಅದನ್ನು ಚುನಾವಣಾ ಲಾಭಕ್ಕೆ ಬಳಸಿಕೊಳ್ಳಲು ಮುಂದಾಗುತ್ತಲೇ ಅದೇ ಸರಕಾರ ಈ ಬ್ಯಾಂಕಿಂಗ್ ಲೈಸೆನ್ಸ್‌ಗಳ ಮೂಲಕ ಆ ಕಾನೂನು ಜಾರಿಗೆ ತರಲು ಅಡಚಣೆಗಳನ್ನು ತಾನೇ ಸೃಷ್ಟಿಸುತ್ತಿದೆ ಎನ್ನುತ್ತಾರೆ ಪ್ರೊ. ಪಟ್ನಾಯಕ್.

ದೇಶದ 80 ಕೋಟಿ ಬಡವರಿಗೆ ರಿಯಾಯ್ತಿ ದರಗಳಲ್ಲಿ ಆಹಾರ ಸಾಮಗ್ರಿಗಳನ್ನು ಒದಗಿಸಬೇಕಾದರೆ ಕೃಷಿ ಉತ್ಪಾದನೆ ಅಗಾಧವಾಗಿ ಹೆಚ್ಚಬೇಕಾಗುತ್ತದೆ. ಆದ-ರೆ ಇನ್ನೊಂದೆಡೆ ದೊಡ್ಡ ದೇಶಿ-ವಿದೇಶಿ ಖಾಸಗಿ ಬ್ಯಾಂಕುಗಳಿಗೆ, ಕಾರ್ಪೊರೇಟುಗಳ ಬ್ಯಾಂಕುಗಳಿಗೆ ಅವಕಾಶ ಒದಗಿಸಿ ಆದ್ಯತೆಯ ವಲಯಗಳ ಪರಿಕಲ್ಪನೆಯನ್ನೇ ಕೈಬಿಡಲಾಗುತ್ತಿದೆ. ಸರಕಾರವೇನೋ 25ಶೇ. ಆದ್ಯತೆಯ ವಲಯಗಳಿಗೆ ಸಾಲ ಒದಗಿಸಬೇಕೆಂಬ ಶರತ್ತು ಹಾಕುವುದಾಗಿ ಹೇಳುತ್ತಿದೆ. ಆದರೆ ಇದುವರೆಗೂ ಖಾಸಗೀ ವಲಯ ಈ ದಿಕ್ಕಿನಲ್ಲಿ 20ಶೇ. ದ ಕೆಳಗೇ ಇದೆ. ಹೀಗಿರುವಾಗ 25ಶೇ. ದ ಶರತ್ತು ಪಾಲನೆಯಾಗುತ್ತದೆ ಎಂಬ ನಿರೀಕ್ಷೆ ಇಟ್ಟುಕೊಳ್ಳುವಂತಿಲ್ಲ.

ನವ-ಉದಾರೀಕರಣಕ್ಕೆ ಜೋತು ಬಿದ್ದಿರುವವರು, 'ಮಾರುಕಟ್ಟೆ' ಈ ಖಾಸಗಿಯವರೂ ಆದ್ಯತೆಯ ವಲಯಗಳಿಗೆ ಸಾಲ ನೀಡುವಂತೆ ಮಾಡುತ್ತದೆ ಎಂದು ವಾದಿಸುತ್ತಾರೆ. ಆದರೆ ವಾಸ್ತವಿಕ ಅನುಭವ ತದ್ವಿರುದ್ಧವಾಗಿದೆ. ವಾಸ್ತವವಾಗಿ, ಉದಾರೀಕರಣದ ನಂತರ ರೈತರಿಗೆ ನೀಡುವ ಕೃಷಿಸಾಲದ ಪ್ರಮಾಣ ಇಳಿದಿದೆ.

ಭಾರತದ ಹಣಕಾಸು ವಲಯವನ್ನು, ಅದರಲ್ಲೂ ಬ್ಯಾಂಕಿಂಗ್ ವಲಯವನ್ನು ಸಂಪೂರ್ಣವಾಗಿ ಖಾಸಗೀಕರಿಸಬೇಕು ಎನ್ನುವುದು ಅಂತರ್ರಾಷ್ಟ್ರೀಯ ಹಣಕಾಸು ವಲಯದ ಬಹು ದಿನಗಳ ಬೇಡಿಕೆ. ಇದು ನಮ್ಮ ಆಳುವ ವರ್ಗಗಳ ಆಶಯವಾಗಿದ್ದರೂ ಮನಮೋಹನ್ ಸಿಂಗ್‌ರವರಿಗೂ(ಮೊದಲು ಹಣಕಾಸು ಮಂತ್ರಿಗಳಾಗಿ, ನಂತರ ಪ್ರಧಾನ ಮಂತ್ರಿಯಾಗಿ) ಇದನ್ನು ನೆರವೇರಿಸಲು ಬಹಳ ಕಷ್ಟವೆನಿಸಿತ್ತು. ಅದು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಗಾರರ ಅರಿವಿಗೂ ಬಂದುದರಿಂದ, ಅವರೂ ತಮ್ಮ ಬೇಡಿಕೆಯನ್ನು ಇಳಿಸುತ್ತಾ ಬಂದರು. ಭಾರತದ ಅತಿ ದೊಡ್ಡ ವಾಣಿಜ್ಯ ಬ್ಯಾಂಕಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವನ್ನಾದರೂ ಖಾಸಗೀಕರಿಸಿ, ಉಳಿದಿದ್ದನ್ನು ನಾವು ನೋಡಿಕೊಳ್ಳುತ್ತೇವೆ 'ಎಮದರು. ಆದರೆ ಭಾರತದ ನವ-ಉದಾರವಾದಿ ಒಲವಿನ ಸರಕಾರಗಳಿಗೆ ಅದೂ ಸಾಧ್ಯವಾಗಲಿಲ್ಲ. ಈಗ ಕಾರ್ಪೊರೇಟ್‌ಗಳಿಗೆ ಲೈಸೆನ್ಸ್ ನೀಡುವ ಮೂಲಕ ಮತ್ತು ವಿದೇಶಿ ಬ್ಯಾಂಕುಗಳಿಗೆ ಆಹ್ವಾನ ನೀಡುವ ಮೂಲಕ ಯುಪಿಎ-2 ಸರಕಾರ ಬ್ಯಾಂಕಿಂಗ್ ವಲಯದ ಪರೋಕ್ಷ ಖಾಸಗೀಕರಣಕ್ಕೆ ಮುಂದಾಗಿ 'ಕೃತಾರ್ಥ'ವಾಗುವ ಹವಣಿಕೆಯಲ್ಲಿದೆ.

ಆದರೆ ಈ ಬಾರಿಯೂ ಅದು ಎಡಪಕ್ಷಗಳು ಮತ್ತು ನೌಕರರ ಸಂಘಟನೆಗಳ ಬಲವಾದ ವಿರೋಧವನ್ನು ಎದುರಿಸುತ್ತಿದೆ. ಸಂಸದೀಯ ಹಣಕಾಸು ಸ್ಥಾಯೀ ಸಮಿತಿ ಕೂಡ ಇದನ್ನು ಬಲವಾಗಿ ವಿರೋಧಿಸಿದೆ. ಈ ಕುರಿತ ಅದರ ಕರಡು ವರದಿಯಲ್ಲಿ, ಬ್ಯಾಂಕಿಂಗ್ ವಲಯದಲ್ಲಿ ಸಾರ್ವಜನಿಕ ಹಣ ಮತ್ತು ಸಾರ್ವಜನಿಕ ಕಲ್ಯಾಣದ ಪ್ರಶ್ನೆಯಿರುವುದರಿಂದಾಗಿ ಉದ್ದಿಮೆಗಳು ಮತ್ತು ಬ್ಯಾಂಕಿಂಗ್ ವಲಯವನ್ನು ಪ್ರತ್ಯೇಕವಾಗಿಯೇ ಇಡುವುದು ಹೆಚ್ಚು ಸೂಕ್ತ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಾಗಿ ವರದಿಯಾಗಿದೆ. ●



2ಜಿ ಹಗರಣ: ಆರು ಭಿನ್ನಮತದ ಟಿಪ್ಪಣಿಗಳೊಂದಿಗೆ ಜೆಪಿಸಿ ವರದಿ ಮಂಡನೆ

...ಜಿ ತರಂಗಾಂತರ ಹಂಚಿಕೆಯಲ್ಲಿ ಆಗಿರುವ ...ಮಗಳ ಕುರಿತ ಜಂಟಿ ಸಂಸದೀಯ ...ತಿಯ ವರದಿಯನ್ನು ಸಮಿತಿಯ ಅಧ್ಯಕ್ಷರು ...ಕಸಭಾಧ್ಯಕ್ಷರಿಗೆ ಸಲ್ಲಿಸಿದ್ದಾರೆ. ಜತೆಗೆ ಆರು ...ನ್ನಮತದ ಟಿಪ್ಪಣಿಗಳೂ ಇರುವುದು ಇದು ...ಗಾಗಲೇ ವರದಿಯಾಗಿರುವಂತೆ ಸತ್ಯವನ್ನು ...ರತರುವ ಬದಲು ಮುಚ್ಚಿ ಹಾಕುವ ...ರದಿ ಎಂಬುದನ್ನು ಸಾಬೀತು ಮಾಡಿದೆ.

... ಈ ಅಂಕಣದಲ್ಲಿ ಈಗಾಗಲೇ ಟಿಪ್ಪಣಿ ...ಮಾಡಿರುವಂತೆ(ಅಕ್ಟೋಬರ್ 13, 2013), ...ಾಜಿ ದೂರಸಂಪರ್ಕ ಮಂತ್ರಿಗಳಷ್ಟೇ ಇದ-... ಕಾರಣ, ಪ್ರಧಾನ ಮಂತ್ರಿಗಳದ್ದಾಗಲೀ, ...ಣಕಾಸು ಮಂತ್ರಿಗಳದ್ದಾಗಲೀ ಇದರಲ್ಲಿ ...ನೂ ಪಾತ್ರವಿಲ್ಲ ಎಂಬ ತೀರ್ಮಾನಕ್ಕೆ ಈ ...ರದಿ ಬಂದಿದೆ. ಅಲ್ಲದೆ ದೇಶದ ಮಹಾಲೆಕ್ಕ ...ಧಕರು(ಸಿಎಜಿ) ಈ ಹಗರಣದಲ್ಲಿ ...ಶದ ಖಜಾನೆಗೆ ಆದ ನಷ್ಟವನ್ನು ಅಂದಾಜು ...ಮಾಡಲು ಬಳಸಿದ ವಿಧಾನ ಸರಿಯಲ್ಲ ಎನ್ನುತ್ತ ...ಜಿ ಲೆಕ್ಕಾಚಾರವನ್ನು ಅದು ತಿರಸ್ಕರಿಸಿದೆ. 2ಜಿ ತರಂಗಾಂತರವನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆಯಲ್ಲಿ ಹಂಚಲಾಗಿದೆ ಎಂಬುದನ್ನು ಒಪ್ಪಿಕೊಂಡಿರುವ ಜೆಪಿಸಿ ವರದಿ, ಇದರಿಂದ ಆಗಿರುವ ಪ್ರಯೋಜನಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲ ಎಂದು ಸಿಎಜಿಯನ್ನೇ ದೂಷಿಸಿದೆ!

30 ಮಂದಿ ಸದಸ್ಯರಿದ್ದ ಈ ಜೆಪಿಸಿಯಲ್ಲಿ ವರದಿಯ ಪರವಾಗಿ ಮತನೀಡಿದವರು 16 ಮಂದಿ ಮಾತ್ರ, ಜೆಡಿ(ಯು)ನ ಇಬ್ಬರು ಸದಸ್ಯರು ಸಭೆಗೆ ಹಾಜರಾಗದೆ ಕಾಂಗ್ರೆಸಿಗೆ ಪರೋಕ್ಷ ನೆರವು ನೀಡಿದರು. ಯುಪಿಎ ಭಾಗವಾಗಿರದ ಒಬ್ಬ ನಾಮನಿರ್ದೇಶಿತ ಸದಸ್ಯ ಹಾಗೂ ಬಿಎಸ್‌ಪಿ ಮತ್ತು ಎಸ್‌ಪಿ ಸದಸ್ಯರು ನೇರವಾಗಿಯೇ ಯುಪಿಎ-2 ಸರಕಾರದ ನೆರವಿಗೆ ಬಂದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸಿಪಿಐ(ಎಂ)ನ ಸೀತಾರಾಂ ಯೆಚುರಿ ಯವರ ವಿವರವಾದ ಭಿನ್ನಮತದ ಟಿಪ್ಪಣಿಯೂ ಸೇರಿದಂತೆ ಆರು ಭಿನ್ನಮತದ ಟಿಪ್ಪಣಿಗಳನ್ನು ಈ ವರದಿ ಹೊಂದಿದೆ.

'ಕನಸಿನ ಚಿನ್ನ'ದ ಬೇಟೆಗಿಳಿದ ಯುಪಿಎ-2 ಸರಕಾರದ ವಿಲಕ್ಷಣ ಕ್ರಮ!

ಉತ್ತರ ಪ್ರದೇಶದ ಉನ್ನಾವ್‌ನಲ್ಲಿ ಬಾಬಾರೊಬ್ಬರ ಕನಸಿನ ಆಧಾರದಲ್ಲಿ ನಡೆದ ಹನ್ನೆರಡು ದಿನಗಳ ಅಗೆತದ ನಂತರ ಎಎಸ್ಐ(ಪುರಾತತ್ವ ಸರ್ವೆ ಸಂಸ್ಥೆ) ತಂಡಕ್ಕೆ ಚಿನ್ನ ಬಿಟ್ಟು ಬೇರೆಲ್ಲವೂ ಸಿಕ್ಕಿದೆಯಂತೆ. ತಮಗೆ ಚಿನ್ನವೇನೋ ಸಿಕ್ಕಿಲ್ಲ, ಆದರೆ ಚಿನ್ನಕ್ಕಿಂತ ಅಮೂಲ್ಯವಾದ ಪುರಾತತ್ವ ಅಂಶಗಳು ಸಿಕ್ಕಿವೆ ಎಂದು ಎಎಸ್ಐ ವಕ್ತಾರರು ಹೇಳಿರುವುದಾಗಿ ವರದಿಯಾಗಿದೆ.

ಈ ನಡುವೆ ಯುಪಿಎ-2 ಸರಕಾರದ ನೇತೃತ್ವ ವಹಿಸಿರುವ ಕಾಂಗ್ರೆಸ್ ಪಕ್ಷದ ವಕ್ತಾರರು ಇದರಲ್ಲಿ ಪಕ್ಷದ ಪಾತ್ರವೇನೂ ಇಲ್ಲ ಎಂದು ಹೇಳಿದ್ದಾರೆ. ಆದರೆ ಯುಪಿಎ-2 ಮಂತ್ರಿಗಳೊಬ್ಬರ ಕೇಳಿಕೆಯ ಮೇರೆಗೇ

ಪುಟ 15 ಕ್ಕೆ



ಅತ್ತ ಮೂರು ಮಕ್ಕಳಿರಲಿ ಎಂದು ಆರೆಸ್ಸೆಸ್ ಹಿಂದೂಗಳಿಗೆ ಹೇಳುತ್ತಿದೆ, ಇತ್ತ ಯುಪಿಎ ಮಂತ್ರಿಗಳು ಇನ್ನಷ್ಟು ಚಿನ್ನದ ಬೇಟೆ ನಡೆಯಲಿ ಎನ್ನುತ್ತಾರೆ!
ದೇವರೇ, ನಮಗೆ ಒಂದು ದಿನಕ್ಕೆ ಒಂದೇ ವ್ಯಂಗ್ಯ ಸಾಕು!
(ಇಂಡಿಯನ್ ಎಕ್ಸ್‌ಪ್ರೆಸ್ ನಲ್ಲಿ ಉನ್ನಿಯವರ ವ್ಯಂಗ್ಯ)


ಜಗದಗಲ

ಶರತ್‌ಚಂದ್ರ

ಪೋರ್ಚುಗೀಸ್ ಕಮ್ಯೂನಿಸ್ಟ್ ಪಕ್ಷದ ನಾಯಕ

ಅಲ್ವಾರೊ ಕುನ್ಹಾಲ್ ಶತಮಾನೋತ್ಸವ

ಈ ವರ್ಷ ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷದ ಪ್ರಮುಖ ನಾಯಕ ಅಲ್ವಾರೊ ಕುನ್ಹಾಲ್ ಅವರ ಶತಮಾನೋತ್ಸವ. ಅಲ್ವಾರೊ ಕುನ್ಹಾಲ್ 1961ರಿಂದ 1992ರ ವರೆಗೆ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದವರು. 1931ರಿಂದ (ತಮ್ಮ 18ನೇ ವಯಸ್ಸಿನಿಂದಲೇ) ಪಕ್ಷದ ಸದಸ್ಯರಾಗಿದ್ದು, 1941ರಿಂದ ನಿಧನದ ವರೆಗೆ ಕೇಂದ್ರೀಯ (ಕೇಂದ್ರ ಸಮಿತಿ, ಸೆಕ್ರೆಟಾರಿಯಟ್ ಇತ್ಯಾದಿ) ನಾಯಕತ್ವದ ಭಾಗವಾಗಿದ್ದರು.




ಪೋರ್ಚುಗಲ್‌ನ್ನು ಕಾಡಿಸಿದ ನಲುಗಿಸಿದ ಫ್ಯಾಸಿಸ್ಟ್ ಆಳ್ವಿಕೆಯ ವಿರುದ್ಧ ನಾಲ್ಕು ದಶಕಗಳ ಕಾಲ ಭೂಗತರಾಗಿದ್ದು ಹೋರಾಟ ನಡೆಸಿದವರು. 11 ವರ್ಷಗಳ ಕಾಲ ಫ್ಯಾಸಿಸ್ಟ್ ಜೈಲಿನಲ್ಲಿ ಬಂಧಿತರಾಗಿದ್ದು ಬರ್ಬರ ಚಿತ್ರಹಿಂಸೆಗೆ ಒಳಗಾದವರು. ಅದರಲ್ಲಿ 8 ವರ್ಷಗಳ ಕಾಲ ಏಕಾಂತವಾಸದಲ್ಲಿ ಕಳೆದವರು. 1961ರಲ್ಲಿ ದುರ್ಗಮ ಫ್ಯಾಸಿಸ್ಟ್ ಜೈಲಿನಿಂದ ತಪ್ಪಿಸಿಕೊಂಡು ಬಂದು ಪಕ್ಷವನ್ನು ಪುನಃ ಸಂಘಟಿಸುವಲ್ಲಿ ಪ್ರಧಾನ ಪಾತ್ರ ವಹಿಸಿದವರು.

ಪಕ್ಷದ ವ್ಯೂಹ-ತಂತ್ರ ಮತ್ತು ಕಾರ್ಯಕ್ರಮ ರೂಪಿಸುವಲ್ಲಿ ಅವರ ಪಾತ್ರ ದೊಡ್ಡದು. 1965ರಲ್ಲಿ 'ರಾಷ್ಟ್ರೀಯ ಮತ್ತು ಪ್ರಜಾಸತ್ತಾತ್ಮಕ ಕ್ರಾಂತಿ'ಗೆ ಕರೆ ಕೊಟ್ಟ ಪಕ್ಷದ ಕಾರ್ಯಕ್ರಮದ ಪ್ರಮುಖ ರೂವಾರಿ ಅವರು. ಆ ಕಾರ್ಯಕ್ರಮದ ಸಮರ್ಪಕತೆ, ಸುಸಂಬದ್ಧತೆ 1974ರ ಏಪ್ರಿಲ್ ಕ್ರಾಂತಿ ಮತ್ತು ಆ ಮೇಲಿನ ಪ್ರಜಾಸತ್ತೀಕರಣದಿಂದ ಸಾಬೀತಾಗಿದೆ. ಈ ಕಾರ್ಯಕ್ರಮವನ್ನು ರೂಪಿಸುವಲ್ಲಿ ಅವರು ಬಲಪಂಥೀಯ ಪರಿಷ್ಕರಣವಾದ ಮತ್ತು ಎಡಪಂಥೀಯ ದುಸ್ಸಾಹಸವಾದ ವಿರುದ್ಧ ಹೋರಾಡಬೇಕಾಯಿತು. 1988ರಲ್ಲಿ '21ನೇ ಶತಮಾನದ ಹೊಸ್ತಿಲಲ್ಲಿ ಅಭಿವೃದ್ಧ ಪ್ರಜಾಸತ್ತಾತ್ಮಕ ಪೋರ್ಚುಗಲ್' ಎಂಬ ಅವರ ನಾಯಕತ್ವದಲ್ಲಿ ರೂಪಿಸಲಾದ ಕಾರ್ಯಕ್ರಮ ಈಗಲೂ ಪಕ್ಷದ ಮಾರ್ಗದರ್ಶನ ಮಾಡುತ್ತಿದೆ.

1974ರ ಫ್ಯಾಸಿಸ್ಟ್ ಆಳ್ವಿಕೆಯನ್ನು ಕೊನೆಗೊಳಿಸಿದ ಪ್ರಜಾಸತ್ತಾತ್ಮಕ ಕ್ರಾಂತಿಯಲ್ಲಿ ಪ್ರಧಾನ ಪಾತ್ರ ವಹಿಸಿ, ಆ ಮೇಲಿನ ನಾಲ್ಕು ಮಧ್ಯಂತರ ಸರ್ಕಾರಗಳಲ್ಲಿ ಸಚಿವರಾಗಿದ್ದವರು. ಸಂವಿದಾನ ಅಸೆಂಬ್ಲಿಯ ಸದಸ್ಯರೂ ಆಗಿದ್ದವರು. 1975ರಿಂದ 1992ರ ವರೆಗೆ ಎಲ್ಲಾ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಯಾಗಿ ಗೆದ್ದು ಪಾರ್ಲಿಮೆಂಟಿನ ಸದಸ್ಯರಾಗಿದ್ದವರು. ಕ್ರಾಂತಿಕಾರಿಯಲ್ಲದೆ ಜೀವನದ ಎಲ್ಲಾ ಆಯಾಮಗಳ ಬಗ್ಗೆ ಆಸಕ್ತರಾಗಿದ್ದರು. ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತ, ಪೋರ್ಚುಗಲ್ ಸಮಾಜದ ವಿಶ್ಲೇಷಣೆ ಮತ್ತು ಪಕ್ಷದ ಪ್ರಚಾರ-ಪ್ರಕ್ಷೋಭೆ ಬಗ್ಗೆ ಅವರು ವಿಪುಲವಾಗಿ ಬರೆದಿದ್ದಾರೆ. ಸ್ವತಃ ಸಾಹಿತಿ (ಹಲವು ಕತೆ, ಕಾದಂಬರಿಗಳ ಲೇಖಕ) ಮತ್ತು ಕಲಾವಿದ (ರೇಖಾಚಿತ್ರ ಮತ್ತು ವರ್ಣಚಿತ್ರ) ಆಗಿದ್ದಲ್ಲದೆ, ಸಾಹಿತ್ಯ-ಕಲೆ ವಿಮರ್ಶೆ ಮತ್ತು, ಸಮಾಜ ಹಾಗೂ ಸಾಹಿತ್ಯ-ಕಲೆಗಳ ಸಂಬಂಧದ ಬಗ್ಗೆ ಸಾಕಷ್ಟು ಬರೆದಿದ್ದಾರೆ.

ತಮ್ಮ 92 ವರ್ಷದ ತುಂಬು ವಯಸ್ಸಿನ ವರೆಗೆ ಸುಮಾರು ಏಳು ದಶಕಗಳ ಕಾಲ ಪಕ್ಷಕ್ಕಾಗಿ ದುಡಿದು 2005ರಲ್ಲಿ ತೀರಿ-ಕೊಂಡರು. ಭಾರತದ ಜತೆ, ಸಿಪಿಐ(ಎಂ) ಪಕ್ಷದ ಜತೆ ಅವರ ನಂಟು ಹಳೆಯದು. 1991ರಲ್ಲಿ ಸೋವಿಯೆಟ್ ಒಕ್ಕೂಟದ ಕುಸಿತದ ಹಿನ್ನೆಲೆಯಲ್ಲಿ ಅವರು ಸಿಪಿಐ(ಎಂ) ಕೇಂದ್ರ ಕಚೇರಿಗೆ ಭೇಟಿ ನೀಡಿ, ನಾಯಕರ



ಜತೆ ಚರ್ಚೆ ನಡೆಸಿ ನಂತರ ಒಂದು ಜಂಟಿ ಹೇಳಿಕೆ ನೀಡಲಾಗಿತ್ತು. ಸಿಪಿಐ(ಎಂ)ನ ಆಗಿನ ಮತ್ತು ಈಗಿನ ಹಲವು ನಾಯಕರ ವೈಯಕ್ತಿಕ ಪರಿಚಯ ಅವರಿಗಿತ್ತು. 2013ರಲ್ಲಿ ಇಡೀ ವರ್ಷ ಈ ನಾಯಕನ ಶತಮಾನೋತ್ಸವವನ್ನು ವಿವಿಧ ರೀತಿಗಳಲ್ಲಿ ಆಚರಿಸಲಾಗುತ್ತಿದೆ.

ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಅಲ್ವಾರೊ ಶತಮಾನೋತ್ಸವದ ಬಗ್ಗೆ ಅಂಗೀಕರಿಸಿದ ನಿರ್ಣಯದಲ್ಲಿ

"ಅಲ್ವಾರೋ ಕುನ್ಹಾಲ್ ಅವರ ಶತಮಾನೋತ್ಸವ ಆಚರಿಸುವಾಗ ಒಬ್ಬ ಮನುಷ್ಯನಾಗಿ, ಕ್ರಾಂತಿಕಾರಿಯಾಗಿ ಅವರ ಜೀವನದ ಮಹತ್ವ ಮತ್ತು ಅರ್ಥವನ್ನು ಎತ್ತಿ ಹಿಡಿಯುತ್ತೇವೆ. ಅದು ನಮಗೆ ಆಧರ್ಶವಾಗಲಿ ಎಂದು ಮಾತ್ರವಲ್ಲ. 21ನೇ ಶತಮಾನದ ಎರಡನೇ ದಶಕದಲ್ಲಿ ಪೋರ್ಚುಗಲ್ ಮತ್ತು ಜಗತ್ತಿನ ರಾಜಕೀಯ ಭವಿಷ್ಯದ ಬಗ್ಗೆ ನಮ್ಮ ಧೋರಣೆಗಳು, ನಿಲುವುಗಳು ಏನಾಗಿರಬೇಕು ಎಂಬುದರ ಬಗೆಗೂ ಅದು ಬೆಳಕು ಚೆಲ್ಲಲಿ ಎಂದು ಕೂಡಾ..."

'ವರ್ತಮಾನ ಮತ್ತು ಭವಿಷ್ಯತ್ತುಗ ಬೆಳಗಿಸುವ ಅಲ್ವಾರೊ ಕುನ್ಹಾಲ್ ಜೀವನ, ಚಿಂತನೆ ಮತ್ತು ಹೋ ಈ ಶತಮಾನೋತ್ಸವದ ಘೋಷ ಅವರ ಜೀವನದ ಬಗ್ಗೆ ಫೋ ಡಾಕ್ಯುಮೆಂಟರಿಗಳ ಪ್ರದರ್ಶನ; ಸಾಹಿತ್ಯದ ಬಗ್ಗೆ ವಿಚಾರ ಸಂಕಿರಣ, ಅಧ್ಯ ವಾಚನ ಶಿಬಿರಗಳು; ಅವರ ಬರ ಮರು-ಪ್ರಕಟಣೆ; 'ಅವಂತೆ' ('ಮು ಎಂಬ ಅರ್ಥದ ಪಕ್ಷದ ವಾರಪತ್ರಿಕೆ) 'ಒ ಮಿಲಿತಂತೆ' ('ಸಮರಶೀಲ' ಅರ್ಥದ ಪಕ್ಷದ ದ್ವೈಮಾಸಿಕ ಪತ್ರಿಕೆ) ವಿಶೇಷಾಂಕ; ಯುವಜನೋತ್ಸವಗಳು ಇತ್ಯಾದಿ ಶತಮಾನೋತ್ಸವದ ಭಾಗವಾ ಅಕ್ಟೋಬರ್ 26-27ರಂದು ಪೋರ್ಚು ಕಮ್ಯುನಿಸ್ಟ್ ಪಕ್ಷ ಅಲ್ವಾರೊ ಅವರ ವಿಶೇಷ ಕಾಂಗ್ರೆಸ್ ಏರ್ಪಡಿಸಿತ್ತು. ಆಮಂತ್ರಿತ ಎರಡು ವಿದೇಶ ಪ್ರತಿನಿಧಿ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸೀತಾರಾಂ ಯೆಚೂರಿ ಒಬ್ಬರು. ಆ ವಿಶೇಷ ಕಾಂಗ್ರೆಸಿನಲ್ಲಿ 'ಬಂಡವಾಳಶಾ ಮಿತಿಗಳು, ಸಮಾಜವಾದದ ಬದಲಿ' ವಿಷಯದ ಬಗ್ಗೆ ಪ್ರಬಂಧ ಮಂಡಿಸುತ್ತಾ



ಅಲ್ವಾರೊ ಕುನ್ಹಾಲ್ ರವರ ಕುರಿತ ಛಾಯಚಿತ್ರ ಪ್ರದರ್ಶನ

ಭಾಷೆಯೆಂಬುದೂ ಬದುಕು......

ಪುಟ 3 ರಿಂದ

ಯತ್ನಗಳೂ ಇವೆ.

ದೇಶ-ವಿದೇಶಗಳಲ್ಲಿ ಜ ವಿಜ್ಞಾನ, ತಂತ್ರಜ್ಞಾನ ಬೆಳೆಯುತ್ತಿದೆ. ನಮಗೆಲ್ಲಾ ಭಾಷಾಂತರವಾಗಿ ಸಿಗ ಹೊಸ ಆವಿಷ್ಕಾರಗಳು ಜ ಸಿಗುವಂತಾಗಲು ಸರಕಾರದ ಕ್ರ ಅಗತ್ಯ. ದುರಂತವೆಂದರೆ ಕಂಪ್ಯೂ ಮಾಹಿತಿ ತಂತ್ರಜ್ಞಾನದಲ್ಲಿ ವಿಶ್ವಖ್ಯಾತಿ ಕರ್ನಾಟಕ ಪಡೆದಿದ್ದರೂ ಕನ್ನಡ ಜಗದಗಲಕ್ಕೆ ಸುಲಲಿತವಾಗಿ ಪಸರ ಸಹಾಯಕವಾಗಿರುವ ಯೂನಿಕೋ ತತ್ರಾಂಶ ಅಭಿವೃದ್ಧಿ ಪಡಿಸಲ ಒತ್ತಡವಿದ್ದರೂ ನಿರ್ಲಕ್ಷಿಸುತ್ತಲೇ ಬರಲ ಹೀಗಾದಲ್ಲಿ ಭಾಷೆ ಬೆಳೆಯುವುದಾ ಹೇಗೆ?

ಇಂದು ಶಿಕ್ಷಣದ ಮಾಧ್ಯಮದ ಇನ್ನೂ ಗೊಂದಲಗಳನ್ನು ನಿವಾರಿಸಲ ಮಾತೃ ಭಾಷೆಯ ಕಲಿಕೆಯು ಮಗ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸುವುದನ್ನು ತಾತ್ವಿಕವಾಗಿ ಎ ಒಪ್ಪುತ್ತಾರೆ. ಆದರೆ ಇಂದು ಬಹುತೇ ಇಂಗ್ಲೀಷ್ ಮಾತ್ರವೇ ಬದುಕಿಗೆ ಒದಗಿಸುವುದು ಎಂಬ ನಿರ್ಧಾರವಿದೆ. ಕಲಿಯದೇ ಬದುಕುವುದೇ ದುಸ್ತರ ಅಭಿಪ್ರಾಯವಿದೆ. ಇದಕ್ಕೆ ಮುಖ್ಯ ಕಾರಣ

ುಪಿಎ ದರ್ಬಾರ....

ೆ 12 ರಿಂದ

ವೇ ಇದು ನಡೆದಿರುವುದು ಎಂದು
ಿದಾಗ ಅವರು ಪ್ರಾಥಮಿಕ ವಾಹಿತಿ
ಿರಬಹುದಷ್ಟೇ, ಅಗೆತದ ಕೆಲಸವನ್ನು
ಸ್ಐ ತಾಂತ್ರಿಕ ಅಂಶಗಳ ಆಧಾರದಿಂದಲೇ
ಕೊಂಡಿರಬಹುದು, ಇದರಲ್ಲಿ ಯುಪಿಎ –2
ಕಾರದ ಪಾತ್ರವೂ ಇಲ್ಲ ಎಂದು ಸಮಜಾಯಿಷಿ
ತಲು ಆ ವಕ್ತಾರರು ಪ್ರಯತ್ನಿಸಿದರು.
ಎಎಸ್ಐ ಪುರಾತತ್ವದ ಸಲಹಾ ಮಂಡಳಿ
ಳದೆ ಅಥವ ಯಾವುದೇ ಶೈಕ್ಷಣಿಕ
ಸ್ಥೆಯ ಶಿಫಾರಸಿಲ್ಲದೆ ಯಾವುದೇ ಉತ್ಖನನ
ಡುವುದು ಕಾನೂನುಬಾಹಿರ. ಈ ಬಗ್ಗೆ
ಿದಾಗ ಎಎಸ್ಐ ವಕ್ತಾರರು ಕೇಂದ್ರ
ಸ್ಕೃತಿ ಇಲಾಖೆಯ ಅಡಿಯಲ್ಲಿ ತಮ್ಮ ಸಂಸ್ಥೆ
ದ್ದು ಅದರ ಅದೇಶದ ಮೇರೆಗೆ ಉತ್ಖನನ
ಸುತ್ತಿದ್ದೇವೆ ಎಂದಿದ್ದಾರೆ.
ಈ ನಡುವೆ ಕನಸು ಕಂಡ ಬಾಬಾನ
ತ್ತರರೂ ಚಿನ್ನ ಸಿಗುವ ಸಾಧ್ಯತೆಯಿಲ್ಲದ್ದನ್ನು
ು 'ನಾವು ಹೇಳಿದಂತೆ ಕೆಲಸ ನಡೆಯದ್ದರಿಂದ
ನ್ನ ಸಿಗುವ ಗ್ಯಾರಂಟಿ ಇಲ್ಲ. ಆದರೂ ಬಾಬಾ
ಮಾಡಿದರೆ ಈಗಲೂ ಸಿಗಬಹುದು"
ದು ಕೈತೊಳೆದುಕೊಳ್ಳಲು ಪ್ರಯತ್ನಿಸಿದ್ದಾರೆ.
ಆ ಬಾಬಾ ಕೂಡ "ಎಎಸ್ಐ ಸಾವಿರಾರು ಟನ್
ನ್ನ ಹೂತಿಟ್ಟಿರುವ ಸ್ಥಳವನ್ನು ತಲುಪಬಹುದು.
ರೆ ನನ್ನ ಗುರುಗಳ ಅನುಮತಿ ಇಲ್ಲದೆ ಅವರು
ನ್ನು ಮುಟ್ಟುವಂತಿಲ್ಲ. ಅವರೇನಾದರೂ
ನ್ನ ಸೂಚನೆಯನ್ನು ಉಪೇಕ್ಷಿಸಿದರೆ ಚಿನ್ನ
ಾಯವಾಗುತ್ತದೆ" ಎಂದು 'ಎಚ್ಚರಿಕೆ'

ನೀಡಿದ್ದರಂತೆ! ಆದರೂ ಯುಪಿಎ–2 ಸರಕಾರ ಈ ವಿಲಕ್ಷಣ ಕೆಲಸಕ್ಕೆ ಕೈಹಾಕಿತ್ತು!

ನೆಹರೂ ಹೆಸರು ಹೇಳುವ ಮಂದಿಗೆ ಇಂತಹ ಪರಿಸ್ಥಿತಿ ಬಂದಿರುವುದು ಶೋಚನೀಯ, ಯುಪಿಎ–2 ಸರಕಾರ ಹಣಕ್ಕಾಗಿ ಇಷ್ಟೊಂದು ಹತಾಶವಾಗಿದೆಯೇ ಎಂದು ಸಿಪಿಐ(ಎಂ) ಮುಖಂಡ ನೀಲೋತ್ಪಲ ಬಸು ಈ ಕುರಿತ ಲೇಖನವೊಂದರಲ್ಲಿ ಕೇಳುತ್ತಾರೆ.

ಈ ತಮಾಷೆ ಸಾಲದೆಂಬಂತೆ ದೇಶದ ಮುಂದಿನ ಸರಕಾರದ ಸಾರಥ್ಯ ವಹಿಸಬೇಕೆಂದಿರುವ ಬಿಜೆಪಿ ಅಭ್ಯರ್ಥಿ ತಮ್ಮ ಪಾಲನ್ನೂ ಸೇರಿಸಿದ್ದಾರೆ. ಮೊದಲಿಗೆ ಯುಪಿಎ–2 ಸರಕಾರವನ್ನು ಗೇಲಿ ಮಾಡಲು ಇನ್ನೊಂದು ಅವಕಾಶ ಸಿಕ್ಕಿತೆಂಬ ಹುಮ್ಮಸ್ಸಿನಿಂದ "ಜಗತ್ತು ಭಾರತದತ್ತ ಬೊಟ್ಟು ಮಾಡಿ ನಗುತ್ತಿದೆ, ಏಕೆಂದರೆ ಸರಕಾರ ಯಾರದೋ ಕನಸಿಗಾಗಿ ಚಿನ್ನದ ಶೋಧನೆ ನಡೆಸಿದೆ!" ಎಂದು ನಗೆಯಾಡಿದರು. ಆದರೆ ಸಾಧು ಸರ್ಕಾರದ ಆಶ್ರಮದಿಂದ ಟೀಕೆ ಬಂದ ಕೂಡಲೇ ತಿಪ್ಪರಲಾಗ ಹಾಕಿದರು, ತಪ್ಪಾಯಿತು ಎಂದು ಕೆನ್ನೆ–ಕೆನ್ನೆ ಬಡಿಯುತ್ತ "ಹಲವಾರು ವರ್ಷಗಳಿಂದ ಲಕ್ಷಾಂತರ ಜನಗಳ ನಂಬಿಕೆ ಹೊಂದಿರುವ ಸರ್ಕಾರ್ ಅವರ ಸರಳತೆ, ತ್ಯಾಗಭಾವಗಳಿಗೆ ನಮಿಸುತ್ತೇನೆ" ಎಂದರಂತೆ.

ಪ್ರಧಾನಿ ಪಟ್ಟದ ಆಕಾಂಕ್ಷಿ ಮತ್ತು ಅವರ ಪಕ್ಷವಂತೂ 'ತರ್ಕ' ಮತ್ತು 'ನಂಬಿಕೆ'ಯ ನಡುವೆ ಯಾವುದನ್ನು ಆರಿಸಿಕೊಳ್ಳುತ್ತಾರೆ ಎಂಬ ಬಗ್ಗೆ ಯಾರಿಗೂ ಸಂದೇಹವಿಲ್ಲ. ಆದರೆ ನೆಹರೂ ಪರಂಪರೆಯ ಹೆಸರು ಹೇಳುವ ಯುಪಿಎ–2 ಮಂದಿ ತಾವೂ ಇದರಲ್ಲಿ ಹಿಂದೆ ಬಿದ್ದಿಲ್ಲ ಎಂದು ಮತ್ತೊಮ್ಮೆ ಸಾಬೀತು ಪಡಿಸುತ್ತಿದ್ದಾರೆ. ●

ತವರಿಗೆ ಕೆಲಸ ಇಲ್ಲಿ ಗ್ಯಾರಂಟಿ ಎಂಬುದು
ತ್ರಿಯಾಗಬೇಕು. ಬದುಕಿನ, ಬದುಕುವ–
ಡಿಮೆಯ ಅವಕಾಶಗಳು ಹೆಚ್ಚಬೇಕು. ಆದ–
ಸರಕಾರಗಳು ಅನುಸರಿಸುತ್ತಿರುವ ಆರ್ಥಿಕ
ತಿಗಳು ಉದ್ಯೋಗದ ಅವಕಾಶಗಳನ್ನು
ಗ್ಗಿಸಿವೆ. ಅನಿವಾರ್ಯವಾಗಿ ಅನ್ನ ಹುಡುಕಿ
ತರೂ ಸಹ ವಲಸೆ ಹೋಗಲೇಬೇಕಾಗಿದೆ.
ದ್ದರಿಂದ ಉದ್ಯೋಗ ಸೃಷ್ಟಿ ಅತ್ಯಗತ್ಯ.
ಗಿರುವಾಗ ಕನ್ನಡದ ಬಗ್ಗೆ ಪ್ರೇಮವಿದ್ದರೂ
ಿಯಲು ಹಿಂದೇಟು ಹಾಕುತ್ತಾರೆ. ಹೀಗೆ
ಷ್ಟೆ ಬದುಕಿನ ಬೆಳವಣಿಗೆಗೆ ಈ ನೀತಿಗಳು
ಾಗಿವೆ.
ಹಾಗೆ ಅಭಿವೃದ್ಧಿ ಎಂಬುದೂ
ನ್ನಷ್ಟು ಅಸಮಾನತೆಯನ್ನು ಹೆಚ್ಚಿಸುವ
ಮವಾಗುತ್ತಿದೆ. ವಿಶೇಷವಾಗಿ ಪ್ರಾದೇಶಿಕ
ಸಮಾನತೆಯ ಪರಿಣಾಮವಾಗಿ ಪ್ರತ್ಯೆ
ತೆಯ ಕೂಗುಗಳು ಕೇಳಿ ಬರುತ್ತಿವೆ.
ಗಲೂ ಹೈ–ಕ ಕ್ಕಾಗಿ ಸಂವಿಧಾನಕ್ಕೆ
ರಲಾಗಿರುವ 371 ಜೆ ಯ ತಿದ್ದುಪಡಿಯು
ಗತಾರ್ಹವಾದರೂ ಕೃಷಿ, ಕೈಗಾರಿಕಾ
ಗದಲ್ಲಿ ಮೂಲಭೂತ ಬದಲಾವಣೆ
ದೇ ಹೋದಲ್ಲಿ ಅದು ನಿಜಕ್ಕೂ ಜನತೆಯ
ಗತ್ಯಗಳನ್ನು ಈಡೇರಿಸದೇ ವಿಫಲವಾಗುವ
ಧ್ಯತೆಗಳೇ ಹೆಚ್ಚಿವೆ. ಈಗಲೂ ಬಂಡವಾಳ
ೂಡಿಕೆ ಬೆಂಗಳೂರಿನಂತಹ ಮಹಾನಗರಗಳ
ತ್ತಲೇ ಕೇಂದ್ರೀಕರಿಸುವ ಅಗತ್ಯವೇನಿದೆ?
ಳಿದ ಪ್ರದೇಶಗಳಿಗೆ ವಿಸ್ತರಿಸಬಾರದೇ?
ತಹ ಸಂಕಷ್ಟಮಯ ಪರಿಸ್ಥಿತಿಯ
ರ್ಭ ಹೊಡೆಯಲು ಜಾತಿ, ಮತಗಳನ್ನು

ಬಳಸಲು ಅವಕಾಶ ಒದಗಿಸಿವೆ. ಭಾಷೆ ಮತ್ತು ಗಡಿಗಳು, ಜನ ಹಂಚಿಕೆಯ ವಿವಾದಗಳನ್ನು ಬಳಸಿ ಅನೇಕ ಸಂಧರ್ಭಗಳಲ್ಲಿ ಜನತೆಯನ್ನು ಎತ್ತಿ ಕಟ್ಟಲಾಗುತ್ತದೆ. ಭಾಷಾವಾರು ಪ್ರಾಂತ್ಯಗಳ ರಚನೆಯ ಆಶಯಕ್ಕೆ ವಿರುದ್ಧವಾಗಿ ರಾಜ್ಯ ವಿಭಜನೆಯ ಹುನ್ನಾರಗಳು ಇಲ್ಲದಿಲ್ಲ. ಇತ್ತೀಚೆಗೆ ಕೇಂದ್ರ ಸರಕಾರ ಆಡಳಿತ ಸುಗಮದ ಹೆಸರಿನಲ್ಲಿ ರಾಜ್ಯಗಳನ್ನು ವಿಭಜಿಸುವ ಕ್ರಮಕ್ಕೆ ಮುಂದಾಗಿರುವುದು ಅಪಾಯಕಾರಿ ಪ್ರವೃತ್ತಿಗಳನ್ನು ಹೆಚ್ಚಿಸಿದೆ. ಇದು ಅಪ್ಪಟ ವಂಚಕತನದ ಅಂಶ. ಇಲ್ಲೆಲ್ಲಾ ಜನರ ಐಕ್ಯತೆ ಮುರಿದು, ಬಲ ಕುಗ್ಗಿಸಿ ಕೇಂದ್ರದ ಮುಂದೆ ಮಂಡಿಯೂರುವಂತೆ ಮಾಡುವ ಕುತಂತ್ರ. ಆಂದ್ರದಲ್ಲಿ ತೆಲಂಗಾಣ ವಿಭಜನೆಯ ನಿರ್ಧಾರದ ಬಳಿಕ ಕೊಡಗು ಪ್ರತ್ಯೇಕತೆ ಕೂಗು ಮತ್ತೇ ಕೇಳಿ ಬರುತ್ತಿರುವುದನ್ನು ಗಮನಿಸಬೇಕು.

ಇವೆಲ್ಲಾ ಆಳುವವರು ತಮ್ಮ ವೈಫಲ್ಯಗಳನ್ನು ಮುಚ್ಚಿಕೊಂಡು ಮತ್ತಷ್ಟೂ ಸುಲಿಗೆ ನಡೆಸಲು ಬಯಸುವುದೇ ಆಗಿದೆ. ಜನರ ಒಗ್ಗಟ್ಟಿನಲ್ಲೇ ಐಹಿಕಾಭ್ಯುದಯ ಸಾಧ್ಯವಿದೆ. ನಮ್ಮ ಜನತೆಯ ಐಕ್ಯತೆಯನ್ನು ನಾಶ ಮಾಡುವ ಶಕ್ತಿಗಳ ಬಗ್ಗೆ ಜನತೆ ಎಚ್ಚರದಿಂದ ಇರಬೇಕು. ನಮ್ಮ ಭಾಷೆ, ಬದುಕು, ಸಂಸ್ಕೃತಿಯ ರಕ್ಷಣೆಗೆ, ಬೆಳವಣಿಗೆಗೆ ಸೌಹಾರ್ಧತೆ, ಸಾಮರಸ್ಯ ಕಾಯಲು ಹೆಚ್ಚು ಶ್ರಮಿಸುವ ಆಶಯ ನಮ್ಮೆಲ್ಲದಿರಲಿ. ಅಮೂಲಾಗ್ರ ಬದಲಾವಣೆಗಾಗಿ ಹೋರಾಡುವ ಸಂಕಲ್ಪ ಸದಾ ಇರಲಿ. ●

ಕೃಷಿಯಲ್ಲಿ ಹೂಡಿಕೆಗಳ ......

ಪುಟ 10 ರಿಂದ

ನಿರ್ಮಿಸಿದೆ. ವ್ಯಾಪಕಗೊಂಡ ಕೃಷಿಯೊಳಗಿನ ಯಾಂತ್ರಿಕರಣ ಮತ್ತು ಏರುತ್ತಿರುವ ಆಹಾರ ಧಾನ್ಯಗಳ ಬೆಲೆಗಳು ಮತ್ತು ಕೂಲಿ ಕೆಲಸದ ತೀವ್ರ ಅಭಾವ ಕೃಷಿ ಕೂಲಿಕಾರರನ್ನು ಹಸಿವಿನ ಸಾವಿಗೆ ದೂಡಿವೆ. ಇದೇ ಸಂರ್ಭದಲ್ಲಿ ಗ್ರಾಮೀಣ ಭೂ ಮಾಲಿಕರನ್ನು ಹೂಡಿಕೆಗಳನ್ನು ನೀಡುವ ವ್ಯಾಪಾರಿಗಳು ಮತ್ತು ಕೃಷಿ ಉತ್ಪನ್ನ ಖರೀದಿಸುವ ಹಾಗೂ ಖಾಸಗಿ ಸಾಲ ನೀಡವ ಬಂಡವಾಳಧಾರರನ್ನಾಗಿ ಬೆಳೆಸಿದೆಯಲ್ಲದೇ, ಅಪಾರ ಭೂ ಕೇಂದ್ರಿಕರಣಕ್ಕೆ ಮತ್ತು ಸಂಪತ್ತಿನ ಕ್ರೋಡೀಕರಣಕ್ಕೆ ಅವರಿಗೆ ನೆರವಾಗಿದೆ.

ಸಣಕಲು ರೈತನೆದುರು ಧೈತ್ಯ ಬಂಡವಾಳಿಗನ ಮುಖಾ ಮುಖಿ

ಇದೀಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವ್ಯವಸಾಯವನ್ನು ರೈತರಿಂದ ನಿಧಾನವಾಗಿ ಮತ್ತು ಪೂರ್ಣವಾಗಿ ಕಿತ್ತು, ದೊಡ್ಡಬಂಡವಾಳದಾರರಿಗೆ ಹಾಗೂ ದೈತ್ಯ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ವಹಿಸಿಕೊಡಲು ಮುಂದಾಗುತ್ತಿವೆ. ಇದರ ಭಾಗವಾಗಿಯೇ ಮುಂಗಡ ವ್ಯಾಪಾರ, ಕಂಪನಿ ಕೃಷಿ, ಗುತ್ತಿಗೆ ಕೃಷಿಗಳ ಹೆಸರಿನಲ್ಲಿ ಕೃಷಿಯಲ್ಲಿ ಬಂಡವಾಳ ಹೂಡಿಕೆಯ ಮೂಲಕ ದೈತ್ಯ ಶಕ್ತಿಗಳನ್ನು ಆಳಿದುಳಿದ ಸಣಕಲು ರೈತಾಪಿ ಎದುರು ಮುಖಾಮುಖಿಯಾಗಿ ತಂದಿವೆ. ಲೂಟಿಗೊಳಗಾದ, ಮತ್ತು ಸಾಲವೇ ಮೈವೆತ್ತಿ ನಿಂತ ಈ ರೈತನೆಲ್ಲಿ? ಮತ್ತು ಸಾವಿರಾರು ಕೋಟಿ ಹಾಗೂ ಲಕ್ಷ ಲಕ್ಷ ಕೋಟಿ ಬಂಡವಾಳ ಹೊಂದಿದ ಬಹುರಾಷ್ಟ್ರೀಯ ಬಂಡವಾಳಿಗನೆಲ್ಲಿ? ಕುಸ್ತಿಕಣದಲ್ಲಿ ಜಗಜಟ್ಟಿಯ ಎದುರು ಅಪೌಸ್ಟಿಕತೆಯಿಂದ ಬಳಲುವ ಸಣಕಲು ವ್ಯಕ್ತಿಯನ್ನು ನಿಲ್ಲಿಸಿದಂತಾಯಿತು. ಹಳೆಯ ಸಾಂಪ್ರದಾಯಿಕ ರೈತಾಪಿ ಜನತೆಯ ಮೇಲೆ ಮಾರಣಾಂತಿಕ ಹತ್ಯೆ ನಡೆಸಿ ಭೂಮಿಯನ್ನು ಕಿತ್ತು, ಕೃಷಿಯಲ್ಲಿ ಭಾರಿ ಬಂಡವಾಳ ತೊಡಗಿಸುವ ಉದ್ದಿಮೆಯ ಕೈಗೆ ವರ್ಗಾಯಿಸಲು ಸಜ್ಜಾಗಿವೆ.

ಏನಿದು ಗುತ್ತಿಗೆ ಕೃಷಿ, ಕಂಪನಿ ಕೃಷಿ, ಮುಂಗಡ ವ್ಯಾಪಾರ ಮತ್ತು ಮಾದರಿ ಮಾರುಕಟ್ಟೆ ಕಾಯಿದೆ?

ಗುತ್ತಿಗೆ ಕೃಷಿ

ಸಾಮನ್ಯವಾಗಿ ಬಡ ರೈತ ಕೂಲಿಕಾರರು, ಗೇಣಿಗಾಗಿ ಅಥವಾ ಗುತ್ತಿಗೆ ಬೇಸಾಯಕ್ಕಾಗಿ ಭೂ ಮಾಲಕರಿಂದ ಹಾಗೂ ಈಚೆಗೆ ಶ್ರೀಮಂತ ಹಾಗೂ ಮಧ್ಯಮ ರೈತರಿಂದ ಜಮೀನನ್ನು ಪಡೆಯುವುದು ನಡೆದಿದೆ. ಇದರಂತೆ ಜಮೀನನ್ನು ಗುತ್ತಿಗೆ ಪಡೆದ ರೈತ ಹಾಗೂ ಕೂಲಿಕಾರರು, ಫಲ ಬಂದ ನಂತರ ಒಪ್ಪಂದದಂತೆ ಹಣವನ್ನು ಅಥವಾ ಬೆಳೆಯ ಪಾಲು ನೀಡುತ್ತಾರೆ. ಇದನ್ನೇ ವಾಡಿಕೆಯಲ್ಲಿ ಗೇಣಿ ಪದ್ದತಿ. ಗುತ್ತಿಗೆ ಬೇಸಾಯ ಎಂದು ಮುಂತಾಗಿ ಕರೆಯಲಾಗುತ್ತಿದೆ.

ಆದರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರ ಹೇಳುವ ಗುತ್ತಿಗೆ ಕೃಷಿ ಇದರ ಪರಿಸ್ಥಿತಿಯೇ ಬೇರೆ. ಇಲ್ಲಿ ಕಂಪನಿಗೆ ಬೇಕಾದ ಬೆಳೆಯನ್ನು ರೈತರು ಬೆಳೆದು ಕೊಡಬೇಕಾಗುತ್ತದೆ. ಕಂಪನಿ ತನಗೆ ಬೇಕಾದ ಬೆಳೆ ಬೆಳೆಯಿಸಿಕೊಳ್ಳಲು ರೈತರ ಜೊತೆಯಲ್ಲಿ ಒಪ್ಪಂದ ಮಾಡಿಕೊಳ್ಳುತ್ತದೆ. ಹಲವು ಊರು/ಗ್ರಾಮಗಳ ರೈತರ ಜೊತೆ ಇಂತಹ ಒಪ್ಪಂದಗಳನ್ನು ಕಂಪನಿ ಮಾಡಿಕೊಳ್ಳಬಹುದಾಗಿದೆ.

ಒಪ್ಪಂದ ಮಾಡಿಕೊಂಡ ರೈತರಿಗೆ ಕಂಪನಿಯು ಅಧುನಿಕ ಬೀಜ, ಗೊಬ್ಬರ, ಕ್ರಿಮಿನಾಶಕಗಳನ್ನು ನೀಡುವ ಜೊತೆ–ಗೆ ಬೆಳೆಬೆಳೆಯುವ ವಿಧಾನದ ಅಧುನಿಕ ತಂತ್ರಜ್ಞಾನದ ತರಬೇತಿಯನ್ನು ನೀಡುತ್ತದೆ. ಅದೇ ರೀತಿ ರೈತರ ಜಮೀನನ್ನ ಆಧಾರವಾಗಿಸಿ ಸಾಲ ಬಂಡವಾಳವನ್ನು ಸ್ವತಃ ತಾನೇ ಇಲ್ಲವೇ ಬ್ಯಾಂಕಿನ ಮೂಲಕ ಕೊಡಿಸಲಾಗುವುದೆಂದು ಹೇಳಲಾಗುತ್ತಿದೆ. ಇಷ್ಟೆಲ್ಲಾ ಮಾಡಿದ ಕಂಪನಿಯ ಬೆಳೆಯನ್ನು ಮೊದಲೇ ಒಪ್ಪಂದ ಮಾಡಿಕೊಂಡಂತೆ, ಲಾಭದಾಯಕ ಬೆಲೆಗೆ ಖರೀದಿಸುತ್ತದೆ. ವಾಹ್!

ಎಷ್ಟು ಅನುಕೂಲಕರ ವಿಚಾರವಿದು, ರೈತನು ಬೀಜಕ್ಕಾಗಿ, ಕ್ರಿಮಿನಾಶಕಕ್ಕಾಗಿ ಮತ್ತು ಸಾಲಕ್ಕಾಗಿ, ಮನೆ – ಮನೆಗೂ, ಅಂಗಡಿ–ಅಂಡಿಗೂ ತಿರುಗುವಂತಿಲ್ಲ. ಅದೇ ರೀತಿ ಬೆಳೆದ ಬೆಳೆಗಾಗಿ ಮಾರುಕಟ್ಟೆ–ಮಾರುಕಟ್ಟೆ ಅಲೆಯಬೇಕಿಲ್ಲ! ಅಬ್ಬಾ ಎಷ್ಟು ಒಳ್ಳೆಯ ವಿಚಾರ? ಎಂತಹ ಚಮತ್ಕಾರ! ಆದರೆ ಇಲ್ಲೊಂದು ಪ್ರಶ್ನೆ ಇದೆ? ಇಷ್ಟು ಒಳ್ಳೆ ಬುದ್ದಿ ಈ ಬಂಡವಾಳದಾರರಿಗೆ ಯಾವಗ ಬಂತು ಸ್ವಲ್ಪ ಹೇಳುತ್ತೀರಾ ಪ್ರಧಾನ ಮಂತ್ರಿಗಳೇ? ಕಾಂಗ್ರೆಸ್‌ನವರೇ? ನೀವು ಹೇಳಬಲ್ಲಿರಾ ಮುಖ್ಯಮಂತ್ರಿಗಳೇ? ಬಿಜೆಪಿ, ಆರ್.ಎಸ್.ಎಸ್.ನವರೇ?

ದೇಶಿಯಾ ಬಂಡವಾಳದಾರ ಹಾಗೂ ಮಾರುಕಟ್ಟೆ ಶಕ್ತಿಗಳನ್ನೇ ಎದುರಿಸಲಾಗದ, ಹೋಗಲೀ ತಮ್ಮ ಗ್ರಾಮಗಳ ಸುತ್ತಮುತ್ತ ಇರುವ ಖರೀದಿಯ ಮದ್ಯವರ್ತಿಗಳನ್ನೇ ಎದುರಿಸಲಾಗದ ಈ ಪಾಪದ ರೈತರು, ಅದೇ ರೀತಿ ದೂರದ ದೇಶಗಳಿಂದ ಬರುವ–ಬರಲಿರುವ ಅಗ್ಗ ಧರದ ಕೃಷಿ ಉತ್ಪನ್ನಗಳು, ಕೃಷಿ ಪರಿಕರಗಳನ್ನು, ಜಾಗತಿಕ ಮಾರುಕಟ್ಟೆ ಶಕ್ತಿಗಳನ್ನು ದೂರದಿಂದಲೇ ಎದುರಿಸಲಾಗದ ಈ ರೈತರು, ತಮ್ಮ ಮನೆಯ ಬಾಗಿಲು ಮುಂದೇ ನಿಂತಿರುವ ದೈತ್ಯ ಕಂಪನಿಗಳನ್ನ, ಅವರ ಏಜೆಂಟ್‌ರುಗಳನ್ನು ಕಂಪನಿಯ ಬೆಳೆಯ ಹೆಸರಿನಲ್ಲಿ ಕಂಪನಿಯ ಸ್ವಾಧಿನದಲ್ಲಿ ಇರುಸಿಕೊಂಡು ರೈತರಿಗೆ ನ್ಯಾಯ ನೀಡಬಲ್ಲರೆಂಬ ಬೊಗಳೆಯನ್ನು ರೈತರು ನಂಬಬೇಕೆ?

ಈಗಾಗಲೆ ಬಳ್ಳಾರಿ ಮತ್ತಿತರೇ ಜಿಲ್ಲೆಗಳಲ್ಲಿ ಸಣ್ಣ ಪುಟ್ಟದಾಗಿ ಮೆಕ್ಕೆಜೋಳ, ಹತ್ತಿ, ಮತ್ತಿತರೇ ಬೀಜ ಬೆಳೆಯಲು ಔಷದಿಯ ಸಸ್ಯ ಬೆಳೆಯಲು ರೈತರ ಜೊತೆ ಒಪ್ಪಂದ ಮಾಡಿಕೊಂಡ ಕಾರ್ಗಿಲ್ ಮತ್ತು ಮಾನ್‌ಸಾಂಟೋ, ಪಯೋನಿಯಾರ್ ಮುಂತಾದ ಕಂಪನಿಗಳು ಸಲ್ಲದ ನೆಪಹೇಳಿ ರೈತರನ್ನು ವಂಚಿಸಿದ ನುರಾರು ಪ್ರಕರಣಗಳು ನಮ್ಮ ಕಣ್ಣ ಮುಂದೆ ಇರುವಾಗ, ಮತ್ತೆ ಮತ್ತೆ ಒಂಟಿಗಾಲಲ್ಲಿ ತಪಕ್ಕೆ ನಿಂತ ಬಕನನ್ನು ನಂಬುವಂತೆ ಪಾಪದ ಮೀನುಗಳಿಗೆ ಮರಳಿ ಹೇಳುತ್ತೀರಲ್ಲಾ? ನಂಬಲು ಸಾಧ್ಯವೇ?

– ಮುಂದುವರಿಯಲಿದೆ.

JANASHAKTHI KANNADA VARA PATRIKE NOV 10, 2013 Price : Rs. 10/- RNI No. KARKAN /2006/17926 Posted on every Sa
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP




ಇಷ್ಟವಾಗುವ ಚಿತ್ರ "ಜಟ್ಟ"

ಈ ಚಿತ್ರದ ಸಂದೇಶವನ್ನು ವೀಕ್ಷಕರು ಭಿನ್ನ ಭಿನ್ನವಾಗಿ ಅರ್ಥಮಾಡಿಕೊಳ್ಳಬಹುದು. ಮಹಿಳೆಯರು ಪುರುಷರು ಹೇಳಿದಂತೇ ನಡೆಯಬೇಕು ಎನ್ನುವವರಿಗೆ ಹಾಗೂ ಪುರುಷರು ಮಾಡುವುದೆಲ್ಲವೂ ಮಹಿಳಾ ವಿರೋಧಿ ಆಗಿರುತ್ತದೆ ಎನ್ನುವವರಿಗೆ ಈ ಚಿತ್ರದಲ್ಲೊಂದು ಸಂದೇಶ ಇರುವುದಂತೂ ನಿಜ.

ಎಚ್. ಎಂ. ನಾಗರಾಜ

ಇತ್ತೀಚಿನ ದಿನಗಳಲ್ಲಿ ತೆರೆ ಕಾಣುತ್ತಿರುವ ಕನ್ನಡ ಚಲನ ಚಿತ್ರಗಳಲ್ಲಿ ನಿರ್ದೇಶಕ ಗಿರಿರಾಜ್ ಅವರ ಮೊದಲ ಚಿತ್ರ ಗಮನ ಸೆಳೆಯುತ್ತದೆ. ಕಥೆ, ಭಾಷೆ, ನಿರೂಪಣೆ, ಸಂಗೀತ, ಛಾಯಾಗ್ರಹಣ ಎಲ್ಲವೂ ಸೇರಿ ಚಿತ್ರವನ್ನು ಭಿನ್ನವಾಗಿಸುತ್ತವೆ. ಆರಂಭದಿಂದ ಕೊನೆಯವರೆಗೂ ಚಿತ್ರದಲ್ಲಿ ಮೂಡಿ ಬರುವ ಸನ್ನಿವೇಶಗಳು ವೀಕ್ಷಕರ ಗಮನವನ್ನು ಸೆರೆಹಿಡಿಯುತ್ತವೆ.

'ಜಟ್ಟ' ಚಿತ್ರದ ಕೇಂದ್ರ ಬಿಂದು. ಆತನ ಬದುಕಿನ ತವಕ ತಲ್ಲಣಗಳ ಸುತ್ತ ಚಿತ್ರ ತೆರೆದುಕೊಳ್ಳುತ್ತದೆ. ಜಟ್ಟ ಕಾಡಿನಲ್ಲಿ ವಾಸಿಸುವ ಬುಡಕಟ್ಟು ಸಮುದಾಯವನ್ನು ಪ್ರತಿನಿಧಿಸುವ ವ್ಯಕ್ತಿ. ಅರಣ್ಯ ಇಲಾಖೆಯಲ್ಲಿ ಆತನೊಬ್ಬ ತಾತ್ಕಾಲಿಕ ಫಾರೆಸ್ಟ್ ಗಾರ್ಡ್. ತಾನು ಕಾಯಂ ಆಗಬೇಕೆನ್ನುವುದು ಆತನ ಕನಸು. ಆದ್ದರಿಂದ, ಜಟ್ಟ ತನ್ನ ಕೆಲಸವನ್ನು ಅತ್ಯಂತ ನಿಷ್ಠೆಯಿಂದ ಮಾಡುತ್ತಿದ್ದ. ಯಾರೊಂದಿಗೂ ಅನಗತ್ಯವಾಗಿ ಮಾತನ್ನೂ ಆಡುತ್ತಿರಲಿಲ್ಲ. ಆತನ ಮೇಲಾಧಿಕಾರಿ ಭೀಮಕುಮಾರ್ ಬಗ್ಗೆ ಆತನಿಗೆ ತುಂಬಾ ಗೌರವ. ಭೀಮಕುಮಾರ್ ಒಬ್ಬ ಒಳ್ಳೆಯ ನಿಷ್ಠಾವಂತ ಅಧಿಕಾರಿ. ಜಟ್ಟನನ್ನು ಕಾಯಂ ಮಾಡಲು ಆಸಕ್ತಿಯುಳ್ಳವರಾಗಿದ್ದರು. ಮೇಲಾಧಿಕಾರಿಗಳ ಬೆಂಬಲದೊಂದಿಗೆ ಕಾಡು ಲೂಟಿ ಮಾಡಲು ಬರುತ್ತಿದ್ದವರಿಗೆ ಅವರು ಅವಕಾಶ ಕೊಡುತ್ತಿರಲಿಲ್ಲ.



ಈ ನಡುವೆ ಟ್ರೆಕ್ಕಿಂಗ್‌ಗಾಗಿ ಕಾಡಿಗೆ ಬಂದಿದ್ದ ಯುವಕನೊಬ್ಬನನ್ನು ಜಟ್ಟ ತನ್ನ ಮನೆಯಲ್ಲಿ ಉಳಿಸಿಕೊಳ್ಳುತ್ತಾನೆ. ಆತನೊಂದಿಗೆ ಜಟ್ಟನ ಹೆಂಡತಿ ಬೆಳ್ಳಿ ಸಲಿಗೆ ಬೆಳೆಸಿಕೊಳ್ಳುತ್ತಾಳೆ. ಮುಂದೆ ಆತ ಬೆಂಗಳೂರಿಗೆ ಹಿಂತಿರುಗುವಾಗ ಬೆಳ್ಳಿಯೂ ಸಹ ಮನೆಬಿಟ್ಟು ಆತನೊಂದಿಗೆ ಹೋಗಿಬಿಡುತ್ತಾಳೆ. ಇದರಿಂದ ಜಟ್ಟ ಆಘಾತಕ್ಕೆ ಒಳಗಾಗುತ್ತಾನೆ. 'ವಿದೇಶಿ ಸಂಸ್ಕೃತಿಗೆ ಮರುಳಾಗಿ ನಮ್ಮ ದೇಶದ ಜನ ಹಾಳಾಗುತ್ತಿದ್ದಾರೆ' ಎನ್ನುವವರ ಪ್ರಭಾವಕ್ಕೆ ಆತ ಒಳಗಾಗುತ್ತಾನೆ. ಸ್ವೇಚ್ಛೆಯನ್ನು ಬಯಸುವ ಮಹಿಳೆಯರನ್ನು ಆತ ದ್ವೇಷಿಸಲು ಆರಂಭಿಸುತ್ತಾನೆ.

ಒಂದು ದಿನ ಜಟ್ಟ ಒಬ್ಬ ನಗರ ಪ್ರದೇಶದ ಮಹಿಳೆ ಪ್ರಜ್ಞಾಹೀನ ಸ್ಥಿತಿಯಲ್ಲಿ ಇರುವುದನ್ನು ಕಾಣುತ್ತಾನೆ. ಅವಳು ಸಾಗರಿಕ. ಮಹಿಳಾ ಸ್ವಾತಂತ್ರ್ಯದ ಪ್ರತಿಪಾದಕಿ. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯಿಂದ ಪ್ರಭಾವಿತಳಾದವಳು. ಪುರುಷರು ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನಿರಾಕರಿಸುತ್ತಾರೆ; ತಮ್ಮ ಸ್ವಾರ್ಥಕ್ಕಾಗಿ ಪುರುಷರು ಮಹಿಳೆಯರ ದುರ್ಬಳಕೆ ಮಾಡುತ್ತಾರೆ ಎಂಬ ಬಲವಾದ ಅಭಿಪ್ರಾಯ ಅವಳದು.

ಜಟ್ಟ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಸಾಗರಿಕಳನ್ನು ಎತ್ತಿಕೊಂಡು ತನ್ನ ಮನೆಗೆ ತರುತ್ತಾನೆ. ಮಾನವೀಯತೆಯ ದೃಷ್ಟಿಯಿಂದ ಅವಳನ್ನು ಉಪಚರಿಸುತ್ತಾನೆ. ಆದರೆ ಬಹುಬೇಗನೆ ಅವನಿಗೆ ಸಾಗರಿಕಳ ಮನೋಭೂಮಿಕೆ ಅರ್ಥವಾಗುತ್ತದೆ. ಸ್ವೇಚ್ಛೆಯನ್ನು ಬಯಸುವ ಅವಳ



ಮನೋಭಾವವನ್ನು ಬದಲಾಯಿಸುವ ಹಠಕ್ಕೆ ಬೀಳುತ್ತಾನೆ. ಅವಳ ಒಂದು ಕಾಲನ್ನು ಸರಪಳಿಯೊಂದರಿಂದ ಬಂಧಿಸಿ ಅವಳು ಮನೆಯಿಂದ ಓಡಿಹೋಗದಂತೆ ನೋಡಿಕೊಳ್ಳುತ್ತಾನೆ. ಅವಳು ತೊಟ್ಟುಕೊಂಡಿದ್ದ ಪಾಶ್ಚಾತ್ಯ ಶೈಲಿಯ ಉಡುಪನ್ನು ತೆಗೆದು ಸೀರೆಯೊಂದನ್ನು ತೊಟ್ಟುಕೊಳ್ಳಲು ಜಟ್ಟ ಅವಳನ್ನು ಒತ್ತಾಯಿಸುತ್ತಾನೆ. ಅವಳು ಒಪ್ಪುವುದಿಲ್ಲ. ತಾನು ಎಂತಹ ಉಡುಪನ್ನು ತೊಟ್ಟುಕೊಳ್ಳಬೇಕೆಂದು ನಿರ್ಧರಿಸುವ ಹಕ್ಕು ನನ್ನದು ಎಂದು ವಾದಿಸುತ್ತಾಳೆ. ಜಟ್ಟ ಅವಳ ಮೇಲೆ ಕೈ ಮಾಡುತ್ತಾನೆ. ಆದರೂ ಅವಳು ಸೀರೆ ಉಟ್ಟುಕೊಳ್ಳಲು ಒಪ್ಪುವುದಿಲ್ಲ. ಜಟ್ಟನ ಸಿಟ್ಟು ನೆತ್ತಿಗೇರುತ್ತದೆ. ಅವಳು ತೊಟ್ಟುಕೊಂಡಿದ್ದ ಬಟ್ಟೆಯನ್ನು ಕತ್ತಿಯಿಂದ ಕತ್ತರಿಸಿ ಹಾಕುತ್ತಾನೆ. ಅವಳು ನಗ್ನಳಾಗುತ್ತಾಳೆ. ಆದರೂ ಕೂಡ ಅವಳು ಸೀರೆಯನ್ನು ತೊಡುವುದಿಲ್ಲ. ಇತಂಹ ಘಟನೆಗಳಿಂದ ಸಾಗರಿಕಳಿಗೆ ಜಟ್ಟನ ಮೇಲಿನ ಸಿಟ್ಟು ತೀವ್ರಗೊಳ್ಳುತ್ತಾ ಹೋಗುತ್ತದೆ.

ಇತ್ತ ಹೋದ ದಾರಿಗೆ ಸುಂಕವಿಲ್ಲ ಎಂಬಂತೆ ಜಟ್ಟನ ಹೆಂಡತಿ ಬೆಳ್ಳಿ ವಾಪಸ್ ಬರುತ್ತಾಳೆ. ಬೆಂಗಳೂರಿನಲ್ಲಿ ತಾನು ಅನುಭವಿಸಿದ ಸಂಕಷ್ಟ ಮತ್ತು ಇಲ್ಲಿ ಸುತ್ತಲು ಕಾಡು, ಅಲ್ಲಿ ಸುತ್ತಲು ಮನೆಗಳು ಅಲ್ಲಿಯೂ ಇದೆ ಪರಿಸ್ಥಿತಿ ಎಂದು ಗಂಡನಿಗೆ ವಿವರಿಸುತ್ತಾಳೆ. ಜಟ್ಟ ತನ್ನ ನಿರೀಕ್ಷೆಗಳನ್ನು ಪೂರೈಸಲು ವಿಫಲವಾದುದರಿಂದ ತಾನು ಇನ್ನೊಬ್ಬನ ಜತೆಯಲ್ಲಿ ಓಡಿಹೋಗಿ ತಪ್ಪುಮಾಡಿದೆ ಎಂದು ಒಪ್ಪಿಕೊಳ್ಳುತ್ತಾಳೆ. ಆದರೆ ಜಟ್ಟ ಯಾವ ಪ್ರತಿಕ್ರಿಯೆಯನ್ನೂ ನೀಡುವುದಿಲ್ಲ. ಮನೆಯಲ್ಲಿ ಈಗ ಇಬ್ಬರು ಮಹಿಳೆಯರನ್ನು ನಿಭಾಯಿಸುವ ಜವಾಬ್ದಾರಿ ಆತನ ಮೇಲೆ ಬೀಳುತ್ತದೆ. ಬೆಳ್ಳಿಯನ್ನು ಬೆಂಗಳೂರಿಗೆ ಕರೆದೊಯ್ದ ಯುವಕ ಮತ್ತೆ ಅವಳನ್ನು ಹುಡುಕಿಕೊಂಡು ಕಾಡಿಗೆ ಬರುತ್ತಾನೆ. ಅಷ್ಟರಲ್ಲಿ ಜಟ್ಟ ಸಾಕಷ್ಟು ಬದಲಾಗಿರುತ್ತಾನೆ. ಬೆಳ್ಳಿ ಮತ್ತು ಆ ಯುವಕನ ನಡುವೆ ಪ್ರೀತಿ ಇರುವುದನ್ನು ಆತ ಗಮನಿಸುತ್ತಾನೆ. ಅಂದು ಸಂಜೆ ಅವರಿಬ್ಬರನ್ನು ಕಾಡಿನ ಅಂಚಿನವರೆಗೆ ಕರೆದೊಯ್ದು, ಮುಂದಿನ ದಾರಿಯನ್ನು ಹೇಳಿಕೊಟ್ಟು ಅವರನ್ನು ಬೀಳ್ಕೊಡುತ್ತಾನೆ. ಸಾಗರಿಕಳನ್ನೂ ಅದೇ ರೀತಿ ಬಿಡುಗಡೆ ಮಾಡಲು ನಿರ್ಧರಿಸಿರುತ್ತಾನೆ.

ಜಟ್ಟ ಮನೆಗೆ ಹಿಂತಿರುಗುವಾಗ ಕಾಡುಗಳ್ಳರು ಒಂದು ಬೃಹತ್ ಮರವನ್ನು ಕಡಿಯುತ್ತಿರುವುದನ್ನು ನೋಡುತ್ತಾನೆ. ಕಾಡಿನ ಜನ ದೇವರೆಂದು ಪೂಜಿ ಮರವಾಗಿತ್ತು. ಆವೇಶಭರಿತನಾದ ಹರಿತವಾದ ಆಯುಧದೊಂದಿಗೆ ಮ ಮೇಲೆ ಎರಗುತ್ತಾನೆ. ಅವರೆಲ್ಲರನ್ನು ಕ ಹಾಕಿ ಆ ಮರವನ್ನು ಉಳಿಸ ಮನೆಗೆ ಹಿಂತಿರುಗಿದ ಜಟ್ಟನ ಬ ರಕ್ತಮಯವಾಗಿರುವುದನ್ನು ಕಂಡ ಸ ಜಟ್ಟ ತನ್ನ ಹೆಂಡತಿಯನ್ನು ಮತ್ತು ಪ್ರಿಯಕರನನ್ನು ಕೊಂದುಹಾಕಿ ಬಂದ ಎಂದುಕೊಳ್ಳುತ್ತಾಳೆ. ಜಟ್ಟನ ಬಗ್ಗೆ ಸಿಟ್ಟು ಅತ್ಯುಗ್ರ ರೂಪ ತಾ ಸೇಡಿಗಾಗಿ ಅವಳು ಸಿದ್ಧಳಾಗು ಜಟ್ಟ ಮೈ ತೊಳೆದುಕೊಳ್ಳಲು ಹೊ ಹೋದಾಗ ಸಾಗರಿಕ ಸೀರೆಯನ್ನು ಕುಳಿತುಕೊಳ್ಳುತ್ತಾಳೆ. ದೀಪವನ್ನು ತರು ಜಟ್ಟನಿಗೆ ಕೂಗಿ ಹೇಳುತ್ತಾಳೆ. ಸಾಗರಿಕ ಉಟ್ಟುಕೊಂಡಿರುವುದನ್ನು ನೋಡಿ ಜ ಸಂತೋಷವಾಗುತ್ತದೆ. "ನೀನು ಈಗ ಸುಂದರವಾಗಿ ಕಾಣುತ್ತಿ" ಎನ್ನುತ್ತಾನೆ ಅವಳು ಆತನನ್ನು ಹತ್ತಿರಕ್ಕೆ ಕರೆಯು ಯಾವ ಅಪಾಯವನ್ನೂ ನಿರಿ ಜಟ್ಟ ಹತ್ತಿರ ಬರುತ್ತಿದ್ದಂತೆ ಸಾ ತನ್ನ ಬಾಯಿಂದ ಮದ್ಯವನ್ನು ದ ಬೆಂಕಿಯ ಮೇಲೆ ಉಗಿದು ಮದ್ಯ ತು ಬಾಟಲಿಯನ್ನು ಬಲವಾಗಿ ಅ ಎಸೆಯುತ್ತಾಳೆ. ಜಟ್ಟನ ತಲೆಗೆ ತಾಗಿ ಬ ಪುಡಿಪುಡಿಯಾಗುತ್ತಿದಂತೆ ಮೈ ಸುರಿದ ಮದ್ಯಕ್ಕೆ ಬೆಂಕಿ ಹತ್ತಿಕೊಂಡು ಸಂಪೂರ್ಣ ಸುಟ್ಟುಕೊಂಡು ಸಾವನ್ನಪ್ಪ ಸಾಗರಿಕಳಿಗೆ ಸತ್ಯ ತಿಳಿಯುವಷ್ಟರಲ್ಲಿ ಮಿಂಚಿರುತ್ತದೆ.

ಈ ಚಿತ್ರದ ಸಂದೇಶವನ್ನು ವೀ ಭಿನ್ನ ಭಿನ್ನವಾಗಿ ಅರ್ಥಮಾಡಿಕೊಳ್ಳಬ ಮಹಿಳೆಯರು ಪುರುಷರು ಹೇಳಿ ನಡೆಯಬೇಕು ಎನ್ನುವವರಿಗೆ ಹ ಪುರುಷರು ಮಾಡುವುದೆಲ್ಲವೂ ಮ ವಿರೋಧಿ ಆಗಿರುತ್ತದೆ ಎನ್ನುವವರಿ ಚಿತ್ರದಲ್ಲೊಂದು ಸಂದೇಶ ಇರುವುದ ನಿಜ.

ಇನ್ನು ಪಾತ್ರಗಳ ಬಗ್ಗೆ ಹೇಳುವು ಜಟ್ಟನಾಗಿ ಕಿಶೋರ್ ಅವರದ್ದು ಅಭಿನಯ. ಚಿತ್ರದುದ್ದಕ್ಕೂ ಸರಪಳಿಯ ಸಾಗರಿಕಳ ಪಾತ್ರವನ್ನು ಸುಕೃತಾ ಪರಿಣಾಮಕಾರಿಯಾಗಿ ನಿರ್ವಹಿಸಿ ಇವರಿಬ್ಬರಿಗಿಂತ ಭಿನ್ನವಾಗಿ ಜಟ್ಟನ ಹ ಬೆಳ್ಳಿ ಪಾತ್ರದಲ್ಲಿ ಕಾಣಿಸಿಕೊಳ್ಳುವ ಪಾ ಅಭಿನಯ ತುಂಬಾ ಇಷ್ಟವಾಗುತ್ತದೆ. ಫ ಆಫಿಸರ್ ಪಾತ್ರಧಾರಿ ಪ್ರೇಮ್‌ಕುಮಾರ ಉತ್ತಮ ಅಭಿನಯ ನೀಡಿದ್ದಾರೆ. ಸ ಕಾಡುಗಳಲ್ಲಿ ನಡೆಸಲಾದ ಚಿತ್ರೀಕರಣದಿ ಚಿತ್ರ ಸೊಗಸಾಗಿ ಮೂಡಿ ಬಂದಿದೆ. ಸ ಸಂಭಾಷಣೆ, ಛಾಯಾಗ್ರಹಣ ಸೇರಿದಂತೆ ಇಷ್ಟವಾಗುವ ಚಿತ್ರ ಇದಾ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086. Editor: NITHYANANDASWAMI